ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 25 ಸಂಚಿಕೆ 49
ಡಿಸೆಂಬರ್ 7, 2003 ಬೆಲೆ ರೂ. 3.00

ಹಟ್ಟಿ ಚಿನ್ನದ ಗಣಿ

ಬಂಗಾರ ಬಗೆದವರ ಬದುಕು ಬೆಳಗೀತೆ ?







ಅಸ್ಸಾಂ :

ಭುಗಿಲೆದ್ದ ಪ್ರಾದೇಶಿಕ ಸಂಕುಚಿತವಾದ

ಕೊಳ್ಳಿ ಇಟ್ಟರೋ ಉಳ್ಳಾಲಕ್ಕೇ...




ಕಡುಬಡತನದಿಂದ ಮೇಲೆದ್ದ ಫುಟ್‌ಬಾಲ್ ತಾರೆ



ಸೌಹಾರ್ದತೆಯ ಸಂರಕ್ಷಣೆಗೆ ಬಾಬಾಬುಡನ್ ಗಿರಿಗೆ ನಡಿಗೆ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 53

ಹಿಂದಿನ ಸಂಚಿಕೆಯಲ್ಲಿ ಕೈಮುಗಿದು ನಿಂತು ತನ್ನ ಶೋಷಕರು ಮತ್ತು ಪೀಡಕರನ್ನು ಸ್ವಾಗತಿಸುತ್ತಿದ್ದ ರೈತರ ಜಾಗದಲ್ಲಿ ಪುನರುಜ್ಜೀವನಗೊಂಡ ಉತ್ಸಾಹಶೀಲ ರೈತರ ಜೀವನ, ರೈತರ ಹೋರಾಟದಲ್ಲಿ ಹಗಲಿಗೆ ಹಗಲು ಕೊಟ್ಟು ಹೋರಾಡಿದ ಕಾರ್ಮಿಕರು, ಒಗ್ಗಟ್ಟಾಗಿ ಶಸ್ತ್ರ ಕೈಗೆತ್ತಿಕೊಂಡರೆ ಎಂತಹ ಮಹಾಶಕ್ತಿ ಬರುತ್ತದೆ, ಇಂತಹ ಮಾರ್ಗದರ್ಶನ ನೀಡಿದ ಪಕ್ಷದ ಸದಸ್ಯನಾಗಿರುವುದಕ್ಕೆ ಹೆಮ್ಮೆ ಪಟ್ಟ ಜಯಪಾಲ್ ಮತ್ತು ಕ್ರಾಂತಿಯ ಬಗ್ಗೆ, ಮಾವೋ ಬಗ್ಗೆ ಹೋಚಿಮಿನ್, ಬರ್ಮಾ ವಿಮೋಚನೆ ಬಗ್ಗೆ ಮಾತನಾಡಿದ ಕುರಿಗಾರಿ ಈ ಬಗ್ಗೆ ಓದಿರುವಿರಿ ಮುಂದೆ...



ಕನ್ನಡಕ್ಕೆ: ವಿಶ್ವ ಕುಂದಾಪುರ

ಆದದ್ದಾಗಲಿ..... ಗೆದ್ದೇ ಗೆಲ್ಲುತ್ತೇವೆ...

ತಮ್ಮ ಜಮೀನಿನ ಮೇಲೆ ಬೀಸುವ ಬಿರುಗಾಳಿ, ಮನೆಗಳ ಲೂಟಿಯ ಹಾನಿಯ ನೋವು ಅವರಲ್ಲಿತ್ತು. ತಮ್ಮ ಬಂಧುಬಾಂಧವರನ್ನು ಜೀವಂತವಾಗಿ ಸುಟ್ಟು ಹಾಕುತ್ತಿರುವ ಪರಿಚಿತ ಬೆಟ್ಟ ಗುಡ್ಡಗಳು ಈಗ ಕ್ರಾಂತಿಕಾರಿ ಹೀರೋಯಿಸಂನ ಪವಿತ್ರ ಮಂದಿರಗಳಾಗಿದ್ದವು. ಮಂಜಾಗಿದ್ದ ಅವರ ಕಣ್ಣುಗಳಲ್ಲಿ ಭೀತಿ, ದ್ವೇಷ ಮತ್ತು ಆಕ್ರೋಶದ ಮಿಶ್ರಣ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಕೃಶದೇಹಿಗಳಾಗಿ ಸಾಧು ಸ್ವಭಾವದ ಅವರು ಸಾಮಾನ್ಯ ರೈತರಾಗಿರಲಿಲ್ಲ. ಭಯದಿಂದ ವಿಹ್ವಲಗೊಂಡಿದ್ದರು. ಆದರೆ ಅವರು ದಿಟ್ಟಿಸಿ ನೋಡಿದಾಗ ವೈರಿಗಳ ಬಗೆಗಿನ ಅವರಲ್ಲಿ ಅಡಗಿದ್ದ ದ್ವೇಷ ಸ್ಪಷ್ಟವಾಗಿ ಕಾಣುತ್ತಿತ್ತು. ಅವರಲ್ಲಿ ಹುದುಗಿದ್ದ ಆಕ್ರೋಶದ ಜ್ವಾಲೆ ಹೊತ್ತಿ ಉರಿಯಲಾರಂಭಿಸಿತು. ಅಲ್ಲದೆ ಕ್ರಾಂತಿಕಾರಿ ಜನರು ಈ ನರಪೇತಲ ಜೀವಿಗಳಲ್ಲಿ ವಿಶಿಷ್ಟ ಬೆಳಕಿನ ಕಿರಣವನ್ನು ಹೊಮ್ಮಿಸಿದ್ದರು.

ಆದದ್ದಾಗಲಿ..... ಗೆದ್ದೇ ಗೆಲ್ಲುತ್ತೇವೆ...

"ಏನೇ ಆಗಲಿ, ನಾವು ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನಾವು ಸ್ವಾತಂತ್ರ್ಯದ ರುಚಿಯನ್ನು ಸವಿದಿದ್ದೇವೆ. ಬೆಲೆಬಾಳುವ ಹಣ್ಣಿನಂತೆ ಅದಕ್ಕೆ ಭಾರಿ ಬೆಲೆ ತೆರಬೇಕಾಗಿದೆ. ಬೆಲೆಯೇನೆಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅದನ್ನು ಪಡೆದೇ ತೀರಲು ನಾವು ಮುಂದುವರಿಯುತ್ತೇವೆ. ಅಂತಿಮವಾಗಿ ನಾವು ಜಯಶಾಲಿಯಾಗುತ್ತೇವೆ" - ಇದು ಕಾದಂಬರಿಕಾರರೊಬ್ಬರ ಕಾಲ್ಪನಿಕ, ನಾಟಕೀಯ ಮಾತುಗಳಲ್ಲ; ಈ ರೈತ ಬಾಂಧವರ ಹೃದಯಾಂತರಾಳದಿಂದ ಹೊಮ್ಮಿದ್ದ ಆತ್ಮವಿಶ್ವಾಸದ ನುಡಿಗಳಿವು.

ಸಂಜೆಯಾಗುತ್ತಿತ್ತು. ಕುರುಬರು ಅವಸರಪಡುತ್ತಿದ್ದರು. ಚದುರಿಹೋಗಿದ್ದ ಕುರಿಗಳನ್ನು ಒಟ್ಟು ಸೇರಿಸಲು ಕೂಗಾಡಿ ಕರೆಯುತ್ತಿದ್ದರು. ರೈತರು ಕೂಡ ಅಷ್ಟೆ. ಬೇಗ ಬೇಗನೆ ತಮ್ಮ ನೇಗಿಲುಗಳು ಹಾಗೂ ದನಗಳನ್ನು ಒಟ್ಟು ಸೇರಿಸಿ ಮನೆಗೆ ತೆರಳಲು ಸಜ್ಜಾಗುತ್ತಿದ್ದರು.

ನನ್ನ ಮೂಲ ಹಳ್ಳಿಯಲ್ಲಿ ಬಿರುಗಾಳಿ ಬೀಸುತ್ತಿದೆ ಎಂಬ ಸೂಚನೆ ಸಿಕ್ಕಾಗ ಇದೇ ರೀತಿಯ ಭರದ ಚಟುವಟಿಕೆಗಳು ನಡೆಯುತ್ತಿದ್ದುದನ್ನು ಬಾಲ್ಯದಲ್ಲಿ ಕಂಡಿದ್ದೆ. ಬೇಸಿಗೆ ಕಾಲದಲ್ಲಿ ಭಾರಿ ಬಿರುಗಾಳಿ ಬೀಸುತ್ತಿತ್ತು. ಎಲ್ಲೆಂದರಲ್ಲಿ ಧೂಳೆದ್ದು ರಾಡಿಯಾಗುತ್ತಿತ್ತು.

ಗುಡಿಸಲುಗಳು ಚಾವಣಿಗಳು ಹಾರಿ ಹೋಗುತ್ತಿದ್ದವು. ಸುತ್ತಲೂ ದೂರದವರೆಗೆ ಬೆಂಕಿ ಹರಡುತ್ತಿತ್ತು.

ಆಗಸದಲ್ಲಿ ಸುತ್ತಮುತ್ತಲಿನ ವಾತಾವರಣವನ್ನು ಕಂಡು ಅನುಮಾನಗೊಂಡು ನಾನು ಪ್ರಾದೇಶಿಕ ಕಾರ್ಯದರ್ಶಿಯನ್ನು 'ಬಿರುಗಾಳಿಯೇನಾದರೂ ಬೀಸಲಿದೆಯೇ ಈಗ' ಎಂದು ಕೇಳಿದೆ. "ಇಲ್ಲ, ಈ ರೀತಿಯ ಬಿರುಗಾಳಿಗಳೇನೂ ಇಲ್ಲಿ ಬರುವುದಿಲ್ಲ. ಇದು ಕರ್ಫ್ಯೂ-ಬಿರುಗಾಳಿ! ಹೋರಾಟ ಪ್ರದೇಶದಲ್ಲೆಲ್ಲ ಶತ್ರುಗಳು 'ಕರ್ಫ್ಯೂ ಆಜ್ಞೆ' ವಿಧಿಸಿದ್ದಾರೆ. ಎಲ್ಲರೂ ಸಂಜೆ ಐದು ಗಂಟೆಯೊಳಗೆ ಮನೆ ಸೇರಬೇಕು. ಐದು ಗಂಟೆ ನಂತರ ಹೊರಗೆ ಕಾಣಿಸಿಕೊಳ್ಳುವ ಪ್ರತಿಯೊಬ್ಬರೂ ಕಮ್ಯುನಿಸ್ಟರೆ ಹಾಗೂ ಅವರನ್ನು ಗುಂಡಿಟ್ಟು ಕೊಲ್ಲಲಾಗುತ್ತದೆ" ಎಂದು ಕಾರ್ಯದರ್ಶಿ ಉತ್ತರಿಸಿದರು.

ಶೀಘ್ರವೇ ಇಡೀ ಕಣಿವೆ ಹಾಗೂ ಸುತ್ತಲಿನ ಬೆಟ್ಟ ಕೂಗುವ ಕುರುಬರು ಹಾಗೂ 'ಶಾಪ ಹಾಕುವ' ರೈತರಿಂದ ಮುಕ್ತವಾಯಿತು. ಅನತಿ ದೂರದಲ್ಲಿ ಹಳ್ಳಿಯನ್ನು ಸಂಪರ್ಕಿಸುವ ದಾರಿಯಲ್ಲಿ ವೈರಿ ತುಕಡಿಯೊಂದು ಸಾಗುತ್ತಿದ್ದುದನ್ನು ನಾವು ನೋಡಿದೆವು. ಶತ್ರುಗಳು ಬೆಟ್ಟದತ್ತ ತೆರಳುತ್ತಿದ್ದರು. ರೈತನೊಬ್ಬ ಆತಂಕದಿಂದಲೇ ತನ್ನ ಎತ್ತಿನ ಜೋಡಿಯನ್ನು ಮನೆಗೆ ಕರೆದುಕೊಂಡು ಹೋದ. ಕುರುಬರು ಸುತ್ತಮುತ್ತ ವೈರಿಪಡೆ ಇದೆಯೇ ಎಂದು ಕದ್ದುಮುಚ್ಚಿ ನೋಡಿದರು. ಅಂತೂ ಪ್ರತಿಯೊಬ್ಬರೂ ಆತಂಕದಿಂದಲೇ ಲಗುಬಗೆಯಿಂದ ಹೋಗುತ್ತಿದ್ದರು.

ಕರ್ಫ್ಯೂ ದಬ್ಬಾಳಿಕೆ

'ಕರ್ಫ್ಯೂ ಆದೇಶ' ಹೇರಿದ್ದ ನೆಹರೂ ಆಡಳಿತ ತೆಲಂಗಾಣದ ಗ್ರಾಮೀಣ ಪ್ರದೇಶಗಳಲ್ಲಿ ಪರಿಯ ಬಿಟ್ಟು ಅತ್ಯಂತ ಹೇಯ ಕ್ರಿಮಿನಲ್ ದಬ್ಬಾಳಿಕೆ ಯಾಗಿದೆ. ಸಂಜೆ ಐದು ಗಂಟೆಯಾಗುತ್ತಿದ್ದಂತೆ ಹೊಲ ಹಾಗೂ ಬೆಟ್ಟಗಳನ್ನು ಖಾಲಿ ಮಾಡುವಂತೆ ರೈತರು ಮತ್ತು ಕುರುಬರಿಗೆ ಆದೇಶಿಸಲಾಗುತ್ತದೆ. ಇವರ ಬಳಿ ಗಡಿಯಾರಗಳೂ ಇರುವುದಿಲ್ಲ. ಅವರ ಹಳ್ಳಿಗಳನ್ನು ಸಂಪರ್ಕಿಸುವ ದಾರಿಯಲ್ಲಿ ಪೋಲೀಸರು ಮತ್ತು ಸೇನೆಯ ಕಾವಲು ತುಕಡಿಗಳು ದಾಳಿ ಮಾಡಲು ಸಿದ್ಧವಾಗಿರುತ್ತಿದ್ದವು. ಯಾರಾದರೂ ಒಂದು ನಿಮಿಷ ತಡವಾಗಿ ಬಂದರೂ ದಾಕ್ಷಿಣ್ಯ ವಿಲ್ಲದೆ ಹೊಡೆಯಲಾಗುತ್ತಿತ್ತು ಅಥವಾ ಸಾಯಿಸಲಾಗುತ್ತಿತ್ತು. ತಡವಾಗಿ ಬಂದವರು ಹೊಡೆದದ್ದನ್ನು ಪ್ರತಿರೋಧಿಸಿದರೆ ಅಥವಾ ಯಾಕೆ ವಿಳಂಬವಾಯಿತೆಂದು ವಿವರಿಸಲು ನಿರಾಕರಿಸಿದರೆ ಈ ರೀತಿ ಮಾಡಲಾಗುತ್ತಿತ್ತು. ವಿಳಂಬವಾಗಿ ಬಂದ 'ತಪ್ಪಿತಸ್ಥ' ಶ್ರೀಮಂತ ರೈತರನ್ನು ಪೊಲೀಸ್ ಶಿಬಿರಗಳಿಗೆ ಕರೆದುಕೊಂಡು ಹೋಗಿ ಅವರಿಂದ ಲಂಚ ಪಡೆದು ಬಿಡುಗಡೆ ಮಾಡುತ್ತಿದ್ದರು. ಈ ರೀತಿಯಾಗಿ ನೆಹರೂ ಆಡಳಿತದ ತಥಾಕಥಿತ ದರೋಡೆ ಕೋರವಿರೋಧಿ ಪಡೆಗಳು ಸ್ವತಃ ತಾವೇ ಅತ್ಯಂತ ಹೇಯ ಕೃತ್ಯಗಳಲ್ಲಿ ತೊಡಗುತ್ತಿದ್ದವು.

ಮಹಿಳೆ ಮತ್ತು ಮದಿರೆಗಾಗಿ ಪಡೆಗಳು ಹಳ್ಳಿಗಳ ರಸ್ತೆಗಳಲ್ಲಿ ಅಲೆದಾಡುತ್ತಿದ್ದರು. ಆಡು, ಕೋಳಿಗಳನ್ನು ಕದಿಯುತ್ತಿದ್ದರು. ಅತ್ಯಾಚಾರ ಎಸಗುತ್ತಿದ್ದರು, ಲೂಟಿ ಮಾಡುತ್ತಿದ್ದರು. ಇದಕ್ಕೆಲ್ಲ ಸುಲಭವಾದ ಸಮರ್ಥನೆಯಿತ್ತು. ಅತ್ಯಾಚಾರ ಮಾಡಿದ್ದು, ಲೂಟಿ ಮಾಡಿದ್ದು, ನಾಶ ಮಾಡಿದ್ದು, ಕಮ್ಯುನಿಸ್ಟ್ ದುಷ್ಕರ್ಮಿಗಳು' ಎಂದು ಹೇಳಿ ಕೈತೊಳೆದುಕೊಂಡರಾಯಿತು. ಈ ರೀತಿಯಾಗಿ ತೆಲಂಗಾಣದ ರೈತಾಪಿ ಜನರು ಅವರ ಮನೆಯೊಳಗೆ 'ಬಂಧಿತ'ರಾಗಿರುವ ಈ ರೌಡಿಗಳು ರಸ್ತೆಗಳಲ್ಲಿ ಅಡ್ಡಾಡುತ್ತಾರೆ. ಪಾಳೇಗಾರಿ ಭೂಮಾಲಿಕರ ಬಂಟರು ಇವರಿಗೆ ತಲೆಹಿಡುಕರಾಗಿ ನೆರವಾಗುತ್ತಾರೆ. ಅಂದದ ಮಹಿಳೆಯರು ಅಥವಾ ಹಣವಿರುವ ಮನೆಗಳಿಗೆ ಇವರನ್ನು ಕರೆದುಕೊಂಡು ಹೋಗುತ್ತಿದ್ದರು. ಕಮ್ಯುನಿಸ್ಟ್ ದುಷ್ಕರ್ಮಿಗಳನ್ನು ಹುಡುಕುವ ನೆಪದಲ್ಲಿ ತರುಣಿಯರನ್ನು ಹೆದರಿಸುತ್ತಿದ್ದರು; ಪೋಷಕರು ಹಾಗೂ ಸೋದರರ ಎದುರಲ್ಲೇ ಅವರ ಸ್ತನಗಳನ್ನು ಎಳೆದಾಡುತ್ತಿದ್ದರು. ಕೆಲವೊಮ್ಮೆ ಅವರು ರಾತ್ರಿಯಿಡಿ ರೈತರ ಮನೆಗಳಲ್ಲೇ ಉಳಿದು ಅವರ ಆಹಾರವನ್ನು ತಿಂದು ಮನೆಯಲ್ಲಿದ್ದ ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಿದ್ದರು.

ಬೀದಿಗಳಲ್ಲಿ ನೀರವ ಮೌನ ನೆಲೆಸಿದ್ದಾಗ, ಇದ್ದಕ್ಕಿದ್ದಂತೆ ಹುಡುಗಿಯೊಬ್ಬಳ ಆರ್ತನಾದ ಕೇಳಿಸುತ್ತದೆ. ದುರುಳರು ಆಕೆಯ ಮೇಲೆ ಅತ್ಯಾಚಾರ ಮಾಡುತ್ತಾರೆ, ಅವಳ ಮರ್ಮಾಂಗದಲ್ಲಿ ಬಿದಿರನ್ನು ತೂರಿಸುತ್ತಾರೆ. ಈ ಘೋರ ಕೃತ್ಯಗಳಿಂದ ನೊಂದ ಹುಡುಗಿಯರ ನರಳಾಟ ರಾತ್ರಿಯ ಮೌನವನ್ನು ಬೇಧಿಸುತ್ತದೆ. ಅದಾದ ಹಿಂದೆಯೇ ನರಿಗಳು ಊಳಿಡುವ ಸದ್ದು ಕೇಳಿಬರುತ್ತದೆ. ವೃದ್ಧ ರೈತ, ದುಷ್ಕರ್ಮಿಗಳ ಹಿಂಸೆಯಿಂದ ನರಳುವ ಶಬ್ದ ಕೇಳುತ್ತದೆ. ಈ ಫ್ಯಾಸಿಸ್ಟ್ ದುಷ್ಕರ್ಮಿಗಳತ್ತ ನಾಯಿಗಳು ಬೊಗಳುವುದು ಕೇಳಿಸುತ್ತದೆ. ಇವುಗಳು ತೆಲುಗು ರೈತರು ಅನುಭವಿಸುವ ಮಾಮೂಲಿ ರಾತ್ರಿಗಳಾಗಿಬಿಟ್ಟಿದ್ದವು. ಅಸ್ತಿತ್ವಕ್ಕಾಗಿ, ಮನೆಗಳು ಹಾಗೂ ಮರ್ಯಾದೆಯನ್ನು ಉಳಿಸಿಕೊಳ್ಳಲಿಕ್ಕಾಗಿ ಹೋರಾಡುತ್ತಿದ್ದ ತೆಲುಗು ರೈತರಿಗೆ ರಾತ್ರಿ ವೇಳೆ ಇವು ಮಾಮೂಲಿ ಸನ್ನಿವೇಶಗಳಾಗಿದ್ದವು.

ಹರಿದ ಕಣ್ಣೀರು

ಶತ್ರುಗಳ ಈ ಎಲ್ಲ ಆಟಾಟೋಪ- ದಬ್ಬಾಳಿಕೆ ನೆನೆಸಿ ಆಕ್ರೋಶದಿಂದ ನನ್ನ ಕಣ್ಣಲ್ಲಿ ನೀರು ಹರಿಯಿತು. ತಲೆ ಸುತ್ತು ಬಂತು. 'ಕರ್ಫ್ಯೂ ಆದೇಶ' ಅವಧಿಯಲ್ಲಿ ನಡೆಯುತ್ತಿದ್ದ ಇಂಥ ಭೀಕರ ಘಟನೆಗಳನ್ನು ಕಾರ್ಯದರ್ಶಿ ವಿವರಿಸುತ್ತಿದ್ದಾಗ ನನಗೆ ಸ್ಫೋಟಗೊಂಡ ಅನುಭವವಾಯಿತು. "ಮಹಿಳೆಯರು" "ತಾಯಿ", 'ನಮ್ಮ ಮನೆಗಳ ಪಾವಿತ್ರ್ಯ'ದ ಗೌರವದ ಬಗ್ಗೆ ನೆಹರೂ ಬಡಬಡಿಸುತ್ತಿದ್ದ ಬೂಟಾಟಿಕೆಯ ಮಾತುಗಳು ನೆನಪಿಗೆ ಬಂದವು.

ಭೂಮಾಲಿಕರು ಮತ್ತು ಬೂರ್ಜ್ವಾಗಳ ಕುಟುಂಬಗಳ ಬಾಬ್‌ಕಟ್ ಮಹಿಳೆಯರು ನನಗೆ ನೆನಪಾದರು. ಯಾವ ಅಧಿಕಾರಶಾಹಿಗಳ ನೇರ ಆದೇಶಗಳು ಹಾಗೂ ಉಸ್ತುವಾರಿಯಲ್ಲಿ ಈ ಅತ್ಯಾಚಾರ, ಕೊಲೆ ಸುಲಿಗೆ ಲೂಟಿ ನಡೆಯುತ್ತಿದೆಯೋ ಆ ಅಧಿಕಾರಶಾಹಿಗಳು 'ಮೇಮ್ ಸಾಹಿಬ್'ಗಳನ್ನು ನೆನಪಿಸಿಕೊಂಡೆ. ಅವರೆಲ್ಲರಿಗೂ ತಾಯಂದಿರು, ಹೆಂಡತಿಯರು, ಸೋದರಿಯರು ಇದ್ದಾರೆ. ಅವರೆಲ್ಲರೂ ಮಹಿಳೆಯರ ಘನತೆಯ ಬಗ್ಗೆ ಭಾಷಣ ಬಿಗಿಯುತ್ತಾರೆ. ಜನರಿಂದ ತುಂಬಿದ್ದ ಟ್ರಾಮ್ ಅಥವಾ ಬಸ್ಸಿನಲ್ಲಿ ಒಬ್ಬ 'ಲೇಡಿ'ಗೆ ಸೀಟು ಸಿಗದಿದ್ದರೆ ಅದನ್ನೇ ದೊಡ್ಡದು ಮಾಡಿ ಪತ್ರಿಕೆಗಳ ತುಂಬ ಬರೆಯುತ್ತಾರೆ. ಸಾಮಾಜಿಕ ಕಾರ್ಯಕ್ರಮದಲ್ಲಿ 'ಲೇಡಿಸ್ ಫಸ್ಟ್' ನಿಯಮಕ್ಕೆ ಚ್ಯುತಿ ಬಂದರೆ ಆಕಾಶವೇ ಕಳಚಿ ಬಿದ್ದಂತೆ ಮಾಡುತ್ತಾರೆ. ಅಬ್ಬಾ, ನನಗೆ ಆಶ್ಚರ್ಯವಾಯಿತು.

ಮಹಿಳೆಯರೆಂದರೆ ಇವರಿಗೆ ಕೇವಲ ಒಂದು ವಸ್ತು. ಸುಗಂಧತೈಲದ ಕೂದಲು, ಲಿಫ್‌ಸ್ಟಿಕ್ ಹಚ್ಚಿದ ತುಟಿಗಳು ಮತ್ತು ರಂಗೇರಿದ ಕೆನ್ನೆಗಳಿಂದ ಸ್ತ್ರೀಯ ಮೌಲ್ಯ ಅಂದಾಜು ಮಾಡುವ ಈ ಜನರು ಮಹಿಳೆಯರ ಬಗ್ಗೆ ಬೂಟಾಟಿಕೆಯ 'ಗೌರವ' ತೋರುತ್ತಿರುವುದಕ್ಕೆ ನನಗೇನೂ ದುಃಖವಿಲ್ಲ. ಅವರ ಕ್ಲಬ್ಬುಗಳು ಮತ್ತು ಮನೆಗಳಲ್ಲಿ ಈ 'ಗೌರವ'ವನ್ನು ನಾನು ಸಾಕಷ್ಟು ಕಂಡಿದ್ದೇನೆ. ಮಹಿಳೆಯರ ಜತೆ ಸುಖಿಸಲು ಇವರು ನೀರಿನಂತೆ ಹಣ ಖರ್ಚು ಮಾಡಿದ್ದನ್ನು ನೋಡಿದ್ದೇನೆ.

ಮುಂದುವರಿಯುವುದು

ಏನಂತೀರಿ?

ಕಳೆದೊಂದು ವರುಷದಿಂದಲೂ ನಿರಂತರವಾಗಿ 'ವಿಮೋಚನಾ ಸಮರದಲ್ಲಿ....' ಆತ್ಮಕಥನವನ್ನು ಓದುತ್ತಾ ಬಂದಿದ್ದೀರಿ. ಪ್ರತೀವಾರವೂ ಕಾತುರದಿಂದ, ಕೆಚ್ಚಿದೆಯ ಅನುಭವಗಳನ್ನು ಅರಿವ ತವಕದಲ್ಲಿ ಓದುಗರು ಕಾದಿದ್ದು ಪ್ರತೀವಾರವೂ ನಮಗೆ ಬಂದ ಪ್ರತಿಕ್ರಿಯೆಗಳಿಂದ ಕಂಡಿದೆ.

52 ಕಂತುಗಳಲ್ಲಿ ಈಗಾಗಲೇ ತೆರೆದುಕೊಂಡ ಆತ್ಮಕಥನ ಇನ್ನೇನು ಎರಡು ವಾರದಲ್ಲಿ ಮುಕ್ತಾಯಗೊಳ್ಳಲಿದೆ.

ಎಲ್ಲರಲ್ಲೂ ಹೋರಾಟದ ಕಿಚ್ಚು ಹಚ್ಚಿದ, ಚಿಂತನೆ ಬೆಳೆಸಿದ ಈ ಧಾರಾವಾಹಿಯ ಬಗ್ಗೆ ನಿಮ್ಮ ಅನಿಸಿಕೆಗಳಿಗೆ ಸ್ವಾಗತ. ತಪ್ಪದೇ ಅಭಿಪ್ರಾಯಗಳನ್ನು ಬರೆದು ಕಳಿಸಿ. ಅವುಗಳನ್ನು ದಾಖಲಿಸೋಣ. ಪತ್ರಗಳು ಡಿಸೆಂಬರ್ 10 ರೊಳಗೆ ನಮಗೆ ತಲುಪಲಿ.

- ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಡಿಸೆಂಬರ್ 6, 2003**
  ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಹೇಳಿದ ತೊಗಾಡಿಯಾ ವಿರುದ್ಧ ಪ್ರತಿಭಟನೆ, ಪುರ ಭವನದ ಎದುರು. ಸಂಜೆ 4.30ಕ್ಕೆ ಬೆಂಗಳೂರು, ಸಂಘಟನೆಗಳು ಕಲಾವಿದರು, ಬುದ್ಧಿಜೀವಿ ಬಳಗ
- **ಡಿಸೆಂಬರ್ 6,2003**
  ಭಾರತ ವಿದ್ಯಾರ್ಥಿ ಒಕ್ಕೂಟ(ಎಸ್ ಎಫ್ ಐ) ಉಡುಪಿ ಜಿಲ್ಲಾ ಸಮ್ಮೇಳನ. ಹೋಟೆಲ್ ಶ್ರೀರಾಮ ರೆಸಿಡೆನ್ಸಿ, ಉಡುಪಿ
- **ಡಿಸೆಂಬರ್ 7,8-2003**
  ಕೋಮುವಾದಿಗಳ ವಿರುದ್ಧ ಸಾಮರಸ್ಯಕ್ಕಾಗಿ ಸೌಹಾರ್ದತಾ ಸಮಾವೇಶ, ಚಿಕ್ಕಮಗಳೂರು
- **ಡಿಸೆಂಬರ್ 9 ರಿಂದ 13,2003**
  ಸಿಐಟಿಯು ಅಖಿಲ ಭಾರತ ಸಮ್ಮೇಳನ ರಾಮಲಕ್ಷ್ಮಿ ಪ್ಯಾರಡೈಸ್, ನಂ.174, ಜಿ.ಎನ್.ಟಿ.ರಸ್ತೆ, ಮಾಧವರಾಮ್, ಚೆನ್ನೈ-600 010
- **ಡಿಸೆಂಬರ್ 11,2003**
  ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಶುಲ್ಕ ಮತ್ತು ಪ್ರವೇಶವನ್ನು ಕ್ರಮಬದ್ಧಗೊಳಿಸಲು ಕೇಂದ್ರ ಶಾಸನಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳಿಗೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ
- **ಡಿಸೆಂಬರ್ 19,20-2003**
  ಜೀವ ವಿಮಾ(ಎಲ್ಐಸಿ) ಏಜೆಂಟ್ಸ್ ಅಖಿಲ ಭಾರತ ಸಮ್ಮೇಳನ, ತಿರುವನಂತಪುರ
- **ಡಿಸೆಂಬರ್ 28-30-2003**
  64ನೇ ಭಾರತ ಇತಿಹಾಸ ಕಾಂಗ್ರೆಸ್ ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಕರ್ನಾಟಕವನ್ನು ಗುಜರಾತನ್ನಾಗಿಸಲು ಸಂಘ ಪರಿವಾರದ ಕಾರ್ಯಸೂಚಿ

ಕರ್ನಾಟಕವನ್ನು 'ಸರ್ವಜನಾಂಗದ ಶಾಂತಿ ತೋಟ'ವೆಂದು ಬಣ್ಣಿಸಿದರು ರಾಷ್ಟ್ರಕವಿ 'ಕುವೆಂಪು'ರವರು. ಅವರ ಜನ್ಮ ಶತಮಾನೋತ್ಸವದ ಆಚರಣೆಯನ್ನು ಈ ವರುಷದ ತುಂಬಾ ಯೋಜಿಸಲಾಗಿದೆ. ಇಂತಹ ಸಾಮರಸ್ಯ, ಸೌಹಾರ್ದತೆಯ ಸಂಸ್ಕೃತಿ, ಸಹಬಾಳ್ವೆಯ ಕರ್ನಾಟಕಕ್ಕೆ ಕಿಚ್ಚನ್ನಿಡಲು ಪ್ರತಿಗಾಮಿ ಶಕ್ತಿಗಳು ಹವಣಿಸುತ್ತಿವೆ. ಕರ್ನಾಟಕವನ್ನು ನರಹತ್ಯೆ, ಜನಾಂಗದ್ವೇಷದ ಅಮಾನವೀಯ ಮಾದರಿಯನ್ನು ಮುಂದಿಡುತ್ತಿವೆ. ಅದಕ್ಕಾಗಿ ರಾಜ್ಯದಾದ್ಯಂತ ಅತ್ಯಂತ ವ್ಯವಸ್ಥಿತವಾಗಿ ಕೋಮುಗಲಭೆಗಳನ್ನೆಬ್ಬಿಸಲು ಯೋಜನೆ ರೂಪಿಸಿವೆ. ಬಾಬಾ ಬುಡನ್‌ಗಿರಿಯಲ್ಲಿ ವಿವಾದ ಹುಟ್ಟುಹಾಕಿ ಅಲ್ಲಿನ ಆದರ್ಶಪ್ರಾಯ 'ಸೂಫಿ ಸಂತರ' ಪರಂಪರೆ, ಆಚರಣೆಗಳನ್ನೇ ಬುಡಮೇಲು ಮಾಡಲು ಹೊರಟಿವೆ. ಇಂತಹ ಸಂದರ್ಭದಲ್ಲಿ ಈ ಶಕ್ತಿಗಳನ್ನು ಎದುರಿಸಲು ಸಿಪಿಐ(ಎಂ), ಸಿಪಿಐ, ಜನತಾದಳ(ಎಸ್) ಮುಂತಾದ ಪಕ್ಷಗಳು ನಿರ್ಧರಿಸಿವೆ. ಒಂದಾಗಿ ಪ್ರತಿರೋಧ ಒಡ್ಡಲು ಮುಂದಾಗಿವೆ. ಈಚೆಗಿನ ಪತ್ರಿಕಾಗೋಷ್ಠಿಯಲ್ಲಿ ವಿವರಿಸಲಾದ ಮುಖ್ಯಾಂಶಗಳು ಇಲ್ಲಿವೆ.

ವಿಶ್ವಹಿಂದೂ ಪರಿಷತ್, ಬಜರಂಗ ದಳವನ್ನೊಳಗೊಂಡ ಸಂಘ ಪರಿವಾರವು ಕರ್ನಾಟಕವನ್ನು ಇನ್ನೊಂದು ಗುಜರಾತನ್ನಾಗಿ ಮಾಡಲು ಅವ್ಯಾಹತವಾದ ಹುನ್ನಾರ ನಡೆಸಿದೆ. ಹಿಂದೂ ಮುಸ್ಲಿಂ ಸೌಹಾರ್ದತೆಯ ಪ್ರತೀಕವಾಗಿರುವ ಬಾಬಾಬುಡನ್‌ಗಿರಿಯಲ್ಲಿ ದತ್ತ ಜಯಂತಿಯ ಹೆಸರಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗುತ್ತಿದೆ. ರಾಜ್ಯಾದ್ಯಂತ ಅಮಾಯಕ ತರುಣರಿಗೆ ದತ್ತ ಮಾಲೆ ಹಾಕಿಸಿ ಅವರಲ್ಲಿ ಜನಾಂಗ ದ್ವೇಷದ ವಿಷವನ್ನು ತುಂಬಲಾಗುತ್ತಿದೆ. ಮುಗ್ಧ ಜನರನ್ನು ದಾರಿತಪ್ಪಿಸಿ ರಾಜ್ಯದ ಮೂಲೆ ಮೂಲೆಗಳಲ್ಲಿ ಕೋಮು ಗಲಭೆಗಳನ್ನು ಹುಟ್ಟು ಹಾಕಲಾಗುತ್ತಿದೆ.

ಕೋಮುಗಲಭೆಗಳೆಬ್ಬಿಸಿ ರಾಜಕೀಯ ಲಾಭ ಪಡೆವ ಹುನ್ನಾರ :

ಇತ್ತೀಚೆಗೆ, ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಅನಂತಕುಮಾರ್ ಬಾಬಾಬುಡನ್ ದತ್ತ ಪೀಠವನ್ನು ದಕ್ಷಿಣ ಭಾರತದ ಅಯೋಧ್ಯೆ ಎಂದು ಘೋಷಿಸಿದ್ದಾರೆ. ಮಾತ್ರವಲ್ಲ, ಅದರ ಮುಕ್ತಿಗಾಗಿ ಹೋರಾಡುವ ತಮ್ಮ ಉದ್ದೇಶವನ್ನು ಬಹಿರಂಗಪಡಿಸಿದ್ದಾರೆ. ಚುನಾವಣೆಗಳು ಸಮೀಪಿಸಿದಾಗಲೆಲ್ಲ ಕೋಮು ಗಲಭೆಗಳಿಗೆ ಮೊರೆಹೋಗುವುದು ಬಿ.ಜೆ.ಪಿ.ಯ ಸಹಜ ಕಾರ್ಯತಂತ್ರವಾಗಿಬಿಟ್ಟಿದೆ. ಹುಬ್ಬಳ್ಳಿಯ ಈದ್ಗಾ ವಿವಾದ ಇತ್ಯಾರ್ಥಗೊಂಡನಂತರ ಬಿಜೆಪಿಗೆ ಗಲಭೆ ಹುಟ್ಟುಹಾಕಲು ವಿಷಯ ಸಿಕ್ಕಿರಲಿಲ್ಲ. ಈಗ ಬಾಬಾ ಬುಡನ್‌ಗಿರಿದತ್ತಪೀಠದ ವಿವಾದವನ್ನು ಹುಟ್ಟುಹಾಕಿ ಅದರ ರಾಜಕೀಯ ಲಾಭ ಪಡೆಯಲು ಹೊರಟಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಎಲ್ಲಾ ಚುನಾವಣೆಗಳಲ್ಲಿ ಮತ್ತು ಉಪಚುನಾವಣೆಗಳಲ್ಲಿ ರಾಜ್ಯದ ಮತದಾರರು ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ಬಿಜೆಪಿ ಯಿಂದ ಆಯ್ಕೆಯಾದ ಹಲವು ಜನ ಶಾಸಕರು ಪಕ್ಷ ಬಿಟ್ಟು ಹೋಗಿದ್ದಾರೆ. ಪಕ್ಷದಲ್ಲಿ ಉಳಿದಿರುವ ಶಾಸಕರ ಕ್ಷೇತ್ರಗಳಲ್ಲಿಯೂ ಅಶಾಂತಿ ಅತೃಪ್ತಿ ಹೊಗೆಯಾಡುತ್ತಿದೆ. ಕಳೆದ ಸಲ ಗೆದ್ದ ಸ್ಥಾನಗಳನ್ನು ಮರಳಿ ಪಡೆಯುವ ಲಕ್ಷಣಗಳಿಲ್ಲ. ಕೋಮು ಆಧಾರಿತ ಧ್ರುವೀಕರಣ ಮಾತ್ರ ಫಲನೀಡುವುದೆಂದು ಅವರ ಲೆಕ್ಕಾಚಾರವಾಗಿದೆ. ಕೇಂದ್ರದ ಎನ್.ಡಿ.ಎ. ಸರ್ಕಾರದ ವೈಫಲ್ಯವನ್ನು ಮರೆಮಾಚಲು, ಅದರ ಭ್ರಷ್ಟಾಚಾರದ ಹಗರಣಗಳನ್ನು ಮುಚ್ಚಿಹಾಕಲು ಮತ್ತು ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಕೋಮು ಗಲಭೆಗಳನ್ನೇ ಬಳಸಿಕೊಳ್ಳಲು ಅವರು ನಿರ್ಧರಿಸಿದ್ದಾರೆ.

ಕರ್ನಾಟಕವನ್ನು ಗುಜರಾತನ್ನಾಗಿ ಪರಿವರ್ತಿಸಲು ಸಂಘಪರಿವಾರ ಮೂರು ಹಂತದ ಕಾರ್ಯಸೂಚಿಯನ್ನು ಹಾಕಿಕೊಂಡಿದೆ.

1. ಹಿಂದೂ ಸಮಾಜೋತ್ಸವಗಳ ಹೆಸರಿನಲ್ಲಿ ಅಲ್ಪಸಂಖ್ಯಾತರಲ್ಲಿ ಭಯಭೀತಿ ಹುಟ್ಟಿಸುವುದು ಮತ್ತು ಪ್ರಚೋದನಾಕಾರಿ ಘೋಷಣೆ ಮತ್ತು ಭಾಷಣಗಳ ಮೂಲಕ ಅವರನ್ನು ಕೆರಳಿಸುವುದು 2. ಕ್ಷುಲ್ಲಕ ವಿಷಯಗಳನ್ನು ವಿವಾದಗಳಾಗಿ ಪರಿವರ್ತಿಸಿ ಅಮಾಯಕರ ಆಸ್ತಿ ಹಾನಿ, ಜೀವ ಹಾನಿಗೆ ಪ್ರಚೋದನೆ ನೀಡುವುದು 3. ಪರಂಪರಾಗತವಾಗಿ ಹಿಂದೂ ಮುಸ್ಲಿಂ ಸಾಮರಸ್ಯದ ಸಂಕೇತವಾಗಿರುವ ಬಾಬಾಬುಡನ್ ಗಿರಿಯಲ್ಲಿ ಸ್ಫೋಟಕ ಪರಿಸ್ಥಿತಿಯನ್ನು ಉಂಟುಮಾಡಿ ರಾಜ್ಯಾದ್ಯಂತ ಗಲಭೆಗಳು ವಿಸ್ತರಿಸುವಂತೆ ಮಾಡುವುದು.

ಸಹಬಾಳ್ವೆ ಸಂಸ್ಕೃತಿಗೆ ಕೊಳ್ಳಿ - ವಿಫಲಗೊಳಿಸಲು ಮನವಿ : ಕರ್ನಾಟಕದ ಸಹಬಾಳ್ವೆಯ ಸಂಸ್ಕೃತಿಗೆ ಕೊಳ್ಳಿ ಇಡಲು ಹವಣಿಸುತ್ತಿರುವ ಈ ಮತಾಂಧ ಶಕ್ತಿಗಳ ದುಷ್ಟ ರಾಜಕೀಯ ಉದ್ದೇಶಗಳ ವಿರುದ್ಧ ರಾಜ್ಯದ ಎಲ್ಲ ಪ್ರಗತಿಪರ ಶಕ್ತಿಗಳು ಒಂದಾಗಬೇಕೆಂದೂ, ರಾಜ್ಯದ ಶಾಂತಿಪ್ರಿಯ ಜನತೆ ಈ ಕರಾಳ ಶಕ್ತಿಗಳ ಹುನ್ನಾರಗಳನ್ನು ವಿಫಲಗೊಳಿಸಲು ಮುಂದಾಗಬೇಕೆಂದೂ ಸಿಪಿಐ(ಎಂ) ಮನವಿಮಾಡುತ್ತದೆ.

ಕಾಂಗ್ರೆಸ್‌ನ ಸಹಕಾರ? ಜಾತ್ಯಾತೀತ ಪರಂಪರೆಯನ್ನು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷದ ಸರ್ಕಾರ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳನ್ನು ದಮನ ಮಾಡಲು ದೃಢವಾದ ಕ್ರಮಗಳನ್ನು ಕೈಗೊಳ್ಳಲು ಹಿಂದೇಟು ಹಾಕುತ್ತಿರುವುದು ಆತಂಕದ ವಿಷಯವಾಗಿದೆ. ಹಿಂದೂ ಸಮಾಜೋತ್ಸವಗಳ ಹೆಸರಿನಲ್ಲಿ ನಡೆಯುತ್ತಿರುವ ಅಲ್ಪಸಂಖ್ಯಾತರ ವಿರುದ್ಧದ ಪ್ರಚೋದನಾಕಾರಿ ಭಾಷಣಗಳಿಗೆ ಕಡಿವಾಣ ಹಾಕಲಾಗುತ್ತಿಲ್ಲ. ಬಾಬಾಬುಡನ್ ಗಿರಿಯಲ್ಲಿ ಪರಿಸ್ಥಿತಿ ಇಷ್ಟೊಂದು ವಿಕೋಪಕ್ಕೆ ಹೋಗುತ್ತಿರುವಾಗಲೂ ಸರ್ಕಾರ ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಕೋಮು ಸಾಮರಸ್ಯದ ವಾತಾವರಣವನ್ನು ನಾಶಮಾಡಲು ಹೊರಟಿರುವ ಶಕ್ತಿಗಳಿಗೆ ಅಲ್ಲಿ ಎಲ್ಲಾ ಕಾನೂನುಬಾಹಿರ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಲಾಗುತ್ತಿದೆ. ಆದರೆ ಕೋಮು ಸಾಮರಸ್ಯವನ್ನು ಎತ್ತಿಹಿಡಿಯಲು ಬಯಸುವ ಪ್ರಗತಿಪರ ಶಕ್ತಿಗಳಿಗೆ ಅಲ್ಲಿ ಯಾವುದೇ ಕಾರ್ಯಕ್ರಮವನ್ನು ನಡೆಸಲು ಅನುಮತಿ ನೀಡುತ್ತಿಲ್ಲ.

ಬನ್ನಿ, ಕರಾಳ ಶಕ್ತಿಗಳ ಅಟ್ಟಹಾಸಕ್ಕೆ ತಡೆಯೊಡ್ಡ ಬನ್ನಿ : ಬಾಬಾಬುಡನ್ ಗಿರಿಯಲ್ಲಿ ಸಂಘ ಪರಿವಾರದ ಹುನ್ನಾರಗಳನ್ನು ವಿಫಲಗೊಳಿಸಲು ರಾಜ್ಯಸರ್ಕಾರ ದೃಢವಾದ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ. ಚಿಕ್ಕಮಗಳೂರಿನ ಪೊಲೀಸ್ ಮತ್ತು ಇತರ ಆಡಳಿತಾಧಿಕಾರಿಗಳು ಕೋಮುವಾದಿ ಪುಂಡರೊಂದಿಗೆ ಶಾಮೀಲಾಗದಂತೆ ಎಚ್ಚರ ವಹಿಸಬೇಕಾಗಿದೆ. ಇಲ್ಲಿ ನಡೆಯುವ ಪರಂಪರಾಗತ ಉರುಸ್ ಯಾವುದೇ ಅಡೆತಡೆ ಇಲ್ಲದೆ ಮೊದಲಿನಂತೆ ಶಾಂತರೀತಿಯಿಂದ ನಡೆಯುವಂತೆ ನೋಡಿಕೊಳ್ಳಬೇಕಾಗಿದೆ. ತಕ್ಷಣದಲ್ಲಿ ಬಾಬಾಬುಡನ್‌ಗಿರಿಯಲ್ಲಿ ಯಾವುದೇ ದತ್ತ ಜಯಂತಿ, ಗುಹೆಯಲ್ಲಿ ದತ್ತ ಮೂರ್ತಿ ಸ್ಥಾಪನೆ, ದತ್ತ ಮಾಲೆ ಹೆಸರಿನಲ್ಲಿ ಅಕ್ರಮ ಕೂಟ ಇತ್ಯಾದಿಗಳಿಗೆ ಆಸ್ಪದ ನೀಡದೆ ಯಥಾಸ್ಥಿತಿ ಕಾಪಾಡಬೇಕೆಂಬ ಕೋರ್ಟ್ ಆದೇಶವನ್ನು ಜಾರಿಗೊಳಿಸಲು ಸರ್ಕಾರ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ದಿಕ್ಕಿನಲ್ಲಿ ಸಿಪಿಐ(ಎಂ) ಜನತಾದಳ (ಎಸ್), ಸಿಪಿಐ ಪಕ್ಷಗಳು ಅಲ್ಲದೆ ಪ್ರಗತಿಪರ ಸಂಘಟನೆಗಳು, ಬುದ್ಧಿಜೀವಿಗಳು ಅನೇಕ ಪ್ರಯತ್ನಗಳನ್ನು ನಡೆಸಿವೆ. ಧರ್ಮ ನಿರಪೇಕ್ಷಿತ (ಸೆಕ್ಯುಲರ್) ಪ್ರಗತಿಪರ ಸಂಘಟನೆಗಳು ಹಮ್ಮಿಕೊಳ್ಳುವ ಎಲ್ಲ ಕಾರ್ಯಕ್ರಮಗಳನ್ನು ಬೆಂಬಲಿಸುವುದಾಗಿ ಪ್ರಕಟಿಸಲಾಯಿತು. ○



ಮುಖ್ಯಮಂತ್ರಿಗಳಿಗೆ ನಿಯೋಗದ ಮನವಿ

ಜನತಾದಳ ಎಸ್ ನ ಮುಖಂಡ ರತನ್‌ಸಿಂಗ್, ಸಿಪಿಐ(ಎಂ) ನ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ಸಿಪಿಐ ನ ಕಾರ್ಯದರ್ಶಿ ಡಾ. ಸಿದ್ದನಗೌಡ ಪಾಟೀಲ್, ಲೋಕೇಶ್ ನಿಯೋಗದಲ್ಲಿದ್ದು ಮುಖ್ಯಮಂತ್ರಿಗಳಿಗೆ ಒಟ್ಟು ಪರಿಸ್ಥಿತಿ ವಿವರಿಸಿ ಕ್ರಮವಹಿಸಲು ಆಗ್ರಹಿಸಲಾಯಿತು. ಸಭೆಯಲ್ಲಿ ವಾರ್ತಾ ಸಚಿವ ಅಲ್ಲಂ ವೀರಭದ್ರಪ್ಪ ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಐಕ್ಯರಂಗ

4 ದಶಗಳ ಹಿಂದೆ

1964 ನವೆಂಬರ್ 8

ಐಕ್ಯರಂಗ 40 ವರ್ಷಗಳ ಹಿಂದೆ ಭಾರತ ಕಮ್ಯುನಿಸ್ಟ್ ಪಾರ್ಟಿಯ ಐತಿಹಾಸಿಕ ಕಲ್ಕತ್ತಾ ಅಧಿವೇಶನ

ಭಾರತಾದ್ಯಂತದ 400 ಪ್ರತಿನಿಧಿಗಳೂ 100 ವೀಕ್ಷಕರೂ ಭಾಗವಹಿಸುತ್ತಿದ್ದಾರೆ.

ಭಾರತ ಕಮ್ಯುನಿಸ್ಟ್ ಪಾರ್ಟಿಯ 7ನೇ ಕಾಂಗ್ರೆಸ್ಸು ಕಲ್ಕತ್ತಾ ನಗರದಲ್ಲಿ ಅಕ್ಟೋಬರ್ 31 ರಿಂದ ಆರಂಭವಾಗಿದೆ.

ಭಾರತದ ವಿವಿಧ ರಾಜ್ಯಗಳ ಪಾರ್ಟಿ ಘಟಕಗಳಿಂದ ಆರಿಸಲ್ಪಟ್ಟ 400 ಪ್ರತಿನಿಧಿಗಳೂ 100 ವೀಕ್ಷಕರೂ ಈ ಎಂಟು ದಿನಗಳ ಅವಧಿಯ ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ.

★

ಸರಕಾರದಿಂದ ರೈತರಿಗಾಗುವ ಅನ್ಯಾಯವನ್ನೆದುರಿಸಲು ಶಿವಮೊಗ್ಗ ಜಿಲ್ಲೆಯ ರೈತರ ಸಮರ ಸಿದ್ಧತೆ

ಕೇಂದ್ರ ಸರಕಾರ ಪ್ರಕಟಿಸಿರುವ ಮಂತ್ರಿಗಳ ನಡೆವಳಿಕೆಯ ಸೂತ್ರ, ಕುಟುಂಬದ ಹೆಸರಲ್ಲಿ ಕಂಪೆನಿ ನಡೆಸಲು ಪಕ್ಷದ ಹೆಸರಲ್ಲಿ ವಂತಿಗೆ ಪಡೆಯಲು ಇಲ್ಲದೆ ಪೂರ್ಣ ಪರ್ಮಿಟು.

ಅಂತೂ ಇನ್ನು ಮುಂದೆ ಮಂತ್ರಿವರ್ಯರುಗಳು ಸ್ವಜನ ಪಕ್ಷಪಾತ, ಪಕ್ಷಕ್ಕೆ ನಿಧಿ ಸಂಗ್ರಹ, ಮೊದಲಾದ ಈ ತನಕ ಮಾಡುತ್ತಿದ್ದ ಕಾರ್ಯಕಲಾಪಗಳನ್ನು ಸೂತ್ರಬದ್ಧವಾಗಿ ಮಾಡುವಂತಾಗಿದೆ.

★

ಜಿಲ್ಲೆಯ ಹಂಚಿನ ಮಜೂರರ ಹೋರಾಟದ ಪ್ರಥಮ ವಿಜಯ

ಶ್ರೀ ಮೋನಪ್ಪನವರ ಎರಡೂ ಕಾರ್ಖಾನೆಗಳಲ್ಲಿ ಮಜೂರರ ಕೇಳಿಕೆಗಳ ಅಂಗೀಕಾರ.

ಮಂಗಳೂರಿನ ಪ್ರಮುಖ ಹಂಚು ಮಾಲಿಕರಾದ ಮೋನಪ್ಪನವರ 'ದಿ ಇಂಡಿಯನ್ ನೇಶನಲ್ ಟೈಲ್ ವರ್ಕ್ಸ್ ಹೊಗೆ ಬಜಾರ್ ಮಂಗಳೂರು' ಮತ್ತು ಅದರ ಶಾಖೆಯಾದ ಮರೋಳಿಯಲ್ಲಿರುವ 'ಮೋನಪ್ಪ ಟೈಲ್ ವರ್ಕ್ಸ್' ಈ ಎರಡು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ 275 ಮಂದಿ ಸಂಘಟಿತ ಮಜೂರರು ದ. ಕ. ಜಿಲ್ಲಾ ಹಂಚಿನ ಮಜೂರರ ಸಂಘದ ನೇತೃತ್ವದಲ್ಲಿ ನಡೆಸಿದ ಚಳವಳದ ಪರಿಣಾಮವಾಗಿ, ತಮ್ಮ ಕೇಳಿಕೆಗಳನ್ನು ಪಡೆದು ಜಿಲ್ಲೆಯ ಹಂಚಿನ ಮಜೂರರ ಕೇಳಿಕೆಗಳ ಚಳುವಳಿಯ ಪ್ರಥಮ ವಿಜಯವನ್ನು ಸಾಧಿಸಿದ್ದಾರೆ.

★

ದ. ವಿಯೆಟ್ನಾಂನಲ್ಲಿ ಮುನ್ನಡೆಯುತ್ತಿರುವ ಕ್ರಾಂತಿ

ಅಮೇರಿಕನ್ ವಿಮಾನ ನೆಲೆಯನ್ನು ನಾಶಗೈದ ಕಮ್ಯುನಿಸ್ಟ್ ಗೆರಿಲ್ಲಾಗಳ ಮಿಂಚು ಧಾಳಿ.

ಅಮೇರಿಕದ ಆಳುವ ಕೂಟದ ಕೈಗೊಂಬೆ ಸರಕಾರಗಳು ಎದ್ದು ಬೀಳುತ್ತಿರುವ ದಕ್ಷಿಣ ವಿಯೆಟ್ನಾಮ್‌ನಲ್ಲಿ ಜನತಾ ಕ್ರಾಂತಿಯು ದಿನೇ ದಿನೇ ಬೆಳೆಯುತ್ತಲಿದೆ, ಹರಡುತ್ತಲಿದೆ.

★

ಸಿಂಹಳದಲ್ಲಿರುವ ಭಾರತೀಯರ ಪ್ರಶ್ನೆ

ಸಿಹಳದಲ್ಲಿರುವ ಭಾರತೀಯ ಮೂಲದ ಜನರ ನಾಗರಿಕತೆಯ ಪ್ರಶ್ನೆ ಸುಮಾರು ಎರಡು ಮೂರು ದಶಕಗಳಿಂದ ಉಭಯ ರಾಷ್ಟ್ರಗಳಿಗೂ ಒಂದು ತಲೆಸಿಡಿತವಾಗಿ ಉಳಿದಿತ್ತು.

ಅಕ್ಟೋಬರ್ 29 ರಂದು ಈ ಪ್ರಶ್ನೆಯನ್ನು ಉಭಯ ಸಮ್ಮತ ವಿಧಾನವೊಂದರ ಮೂಲಕ ಬಗೆಹರಿಸಲು ಉಭಯ ರಾಷ್ಟ್ರಗಳೂ ಸಮ್ಮತಿಸಿದುವು.

ಭಾರತ ರಕ್ಷಣಾ ಕಾನೂನನ್ನು ಪ್ರಯೋಗಿಸಿ ಕಲ್ಕತ್ತಾ ಸಮ್ಮೇಳನ ಒಡೆಯಲು ಸರಕಾರದ ವಿಫಲ ಯತ್ನ.

★

27 ಮಂದಿ ಪ್ರಮುಖ ನಾಯಕರ ಬಂಧನದ ಖಂಡನೆ

ಕಲ್ಕತ್ತಾದಲ್ಲಿ ಅಕ್ಟೋಬರ್ ತಾ. 31 ರಿಂದ ಆರಂಭವಾದ ಭಾರತ ಕಮ್ಯುನಿಸ್ಟ ಪಾರ್ಟಿಯ ಏಳನೇ ಮಹಾಧಿವೇಶನವನ್ನು ಒಡೆಯುವ ಉದ್ದೇಶದಿಂದ ಪಶ್ಚಿಮ ಬಂಗಾಲ ಸರಕಾರವು ಅಕ್ಟೋಬರ್ 31 ರಂದು 27 ಮಂದಿ ಪ್ರಮುಖ ಕಮ್ಯುನಿಸ್ಟ್ ನಾಯಕರನ್ನು ಭಾರತ ರಕ್ಷಣಾ ಕಾನೂನಿನ ಮೇರೆಗೆ ಬಂದಿಸಿವೆ.

ಪ. ಬಂಗಾಳ ಪ್ರಾಂತ ಸಮಿತಿಯ ಕಾರ್ಯದರ್ಶಿ ಕಾ. ಪ್ರಮೋದ್ ದಾಸ್ ಗುಪ್ತಾ ಭಾರತ ಕಮ್ಯುನಿಸ್ಟ್ ಪಾರ್ಟಿಯ ಹಿರಿಯ ಸ್ಥಾಪಕ ಸದಸ್ಯರಾಗಿರುವ ಕಾಂ. ಮಝಾಫರ್ ಅಹ್ಮದ್, ಪ. ಬಂ.ಗಾಳ ಪ್ರಾಂತ ಸಮಿತಿಯ ಸದಸ್ಯರುಗಳಾದ ಕಾಂ. ಹರೇಕೃಷ್ಣ ಕೋನಾರ್ ಕಾಂ. ನಿರೇನ್ ಘೋಷ್ ಎಂ. ಪಬಿ. ಮತ್ತು ಹಲವು ಪ್ರಾಂತ ಸಮಿತಿ ಸದಸ್ಯರನ್ನೂ ಪಶ್ಚಿಮ ಬಂಗಾಳ ವಿಧಾನ ಸಭಾ ಸದಸ್ಯರನ್ನೂ ಬಂಧಿಸಿದ ಸರಕಾರವು ಈ ಮೂಲಕ ಕಲ್ಕತ್ತಾದಲ್ಲಿ ಸಮಾವೇಶಗೊಳ್ಳುತ್ತಿರುವ ಭಾರತ ಕಮ್ಯುನಿಸ್ಟ್ ಪಾರ್ಟಿಯ 7ನೇ ಕಾಂಗ್ರೆಸ್ಸಿನ ಮೇಲೆ ತನ್ನ ವಕ್ರ ದೃಷ್ಟಿ ಬೀರಿದೆ.


'ದತ್ತ ಜಯಂತಿ ಕಾನೂನು ಬಾಹಿರ, ಅದನ್ನು ನಿಷೇಧಿಸಿ'

ಸಾಹಿತಿಗಳ ಆಗ್ರಹ

ಬಾಬಾ ಬುಡನ್‌ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡಲು ಬಿಡುವುದಿಲ್ಲ ಎಂದು ಸಾರಿರುವ ನಾಡಿನ ವಿಚಾರವಾದಿಗಳು, ಸಾಹಿತಿ-ಕಲಾವಿದರು, ಹಲವು ಸಂಘಟನೆಗಳ ವ್ಯಕ್ತಿಗಳು 'ದತ್ತ ಜಯಂತಿ' ಹೆಸರಿನ ಸಂಘ ಪರಿವಾರದ ಫ್ಯಾಸಿಸ್ಟ್ ಮಾದರಿ ದೌರ್ಜನ್ಯವನ್ನು ತಡೆಯಲು ಮುಂದಾಗಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ಖುದ್ದಾಗಿ ನೋಡಿ ಅರಿಯಲು ಖ್ಯಾತ ನಾಟಕಕಾರ, ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡ್, ಪತ್ರಕರ್ತೆ ಗೌರಿ ಲಂಕೇಶ್, ಪ್ರೊ ಜಿ.ಕೆ.ಗೋವಿಂದರಾವ್, ಡಾ. ಕೆ.ಮರುಳುಸಿದ್ದಪ್ಪ, ಡಾ.ರಹಮತ್ ತರೀಕೆರೆ, ಶೂದ್ರ ಶ್ರೀನಿವಾಸ್ ಮುಂತಾದವರ ನಿಯೋಗ ಬಾಬಾಬುಡನ್‌ಗಿರಿಗೆ ತೆರಳಿತ್ತು. ಅಲ್ಲಿಯ ವಿದ್ಯಮಾನಗಳಿಂದ ಆತಂಕಿತರಾದ ಅವರು ಕಂಡ ಸಂಗತಿಗಳನ್ನು ಮುಖ್ಯಮಂತ್ರಿಗಳಿಗೆ ವಿವರಿಸಿದರು. ನಿಷ್ಠುರ ಕ್ರಮಕ್ಕಾಗಿ ಆಗ್ರಹಿಸಿದರು. ಅವರು ಕಂಡ ಗಂಭೀರ ಬೆಳವಣಿಗೆಗಳು ಅವರದೇ ಮಾತುಗಳಲ್ಲಿ.

ಇತ್ತೀಚಿನ ವರ್ಷಗಳಲ್ಲಿ ಬಾಬಾಬುಡನ್‌ಗಿರಿ ಪೀಠವನ್ನು ಸಂಭಾವ್ಯ ಹಿಂಸಾಚರಣೆಯ ತಾಣವಾಗಿಸುವ ರಾಜಕೀಯ ಹುನ್ನಾರದ ಸ್ಪಷ್ಟ ಸೂಚನೆಯಿಂದ ತೀವ್ರವಾಗಿ ತಳಮಳಗೊಂಡ ನಾವು, ವಸ್ತುಸ್ಥಿತಿಯನ್ನು ತಿಳಿಯಲು ಇದೇ ತಿಂಗಳ 21 ರಂದು ಚಿಕ್ಕಮಗಳೂರು ಮತ್ತು ಬಾಬಾಬುಡನ್‌ಗಿರಿ ಪೀಠಗಳಿಗೆ ಭೇಟಿ ನೀಡಿದೆವು. ಅಲ್ಲಿ ಕಂಡ ಸತ್ಯಗಳು ನಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಆತಂಕಕಾರಿಯಾಗಿದ್ದವು. ನಮಗೆ ಕಂಡುಬಂದ ಸಂಗತಿಗಳನ್ನು ನಿಮ್ಮ ಅವಗಾಹನೆಗೆ ತರಲು ಬಯಸುತ್ತೇವೆ.

ಚಿಕ್ಕಮಗಳೂರಿನ ಜಿಲ್ಲಾ ನ್ಯಾಯಾಲಯ 29-02-80 ರಂದು ಪೀಠದ ಆಡಳಿತ ಮತ್ತು ಧಾರ್ಮಿಕ ಆಚರಣೆಗಳು 1975 ಜೂನ್‌ಗೆ ಮುಂಚೆ ಹೇಗಿತ್ತೋ ಹಾಗೆಯೇ ನಡೆದುಕೊಂಡು ಬರಬೇಕೆಂದು ಒಂದು ಡಿಕ್ರೀ ಹೊರಡಿಸಿತು. ಅದನ್ನು ನಂತರ ರಾಜ್ಯದ ಉಚ್ಚ ನ್ಯಾಯಾಧೀಶರು ಹಾಗೂ ಧಾರ್ಮಿಕ ದತ್ತಿ ಕಮೀಷನರ್ ಕೂಡ ಎತ್ತಿ ಹಿಡಿದಿದ್ದಾರೆ. ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವೂ ಒಪ್ಪಿಕೊಂಡಿದೆ. (1.11.1991). ಅದೇ ವರ್ಷ ಸಂಸತ್ತು ಅಂಗೀಕರಿಸಿರುವ ಧಾರ್ಮಿಕ ಪೂಜಾ ಸ್ಥಳಗಳ ಅಧಿನಿಯಮ - 1991 ಕೂಡ 1947ರ ಮುಂಚೆ ಧಾರ್ಮಿಕ ಸ್ಥಳಗಳಲ್ಲಿ ಜಾರಿಯಲ್ಲಿದ್ದ ರೀತಿ, ರಿವಾಜುಗಳನ್ನೇ ದೇಶದಲ್ಲಿಡೀ ಮುಂದುವರೆಸಿ ಕೊಂಡು ಬರುವ ಪದ್ಧತಿಯನ್ನು ಸಮರ್ಥಿಸುತ್ತದೆ.



ಈ ಡಿಕ್ರೀ ಮತ್ತು ಆಜ್ಞೆಗಳು, ಪೀಠದಲ್ಲಿ ನಡೆಸಬಹುದಾದ ವಿಧಿ - ಆಚರಣೆಗಳನ್ನು ಮತ್ತು ಅವುಗಳನ್ನು ಎಲ್ಲಿ, ಹೇಗೆ ಮತ್ತು ಯಾರು ನಡೆಸಬೇಕೆಂಬುದನ್ನು ನಿಖರವಾಗಿ ಪಟ್ಟಮಾಡಿದೆ. ಈ ತೀರ್ಪು ಇದ್ದಾಗ್ಯೂ, ರಾಜಕೀಯ ಪಕ್ಷಗಳು ಈ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸುತ್ತಾ ಬಂದಿವೆ. ಮಾತ್ರವಲ್ಲದೆ, ಇಂಥ ಉಲ್ಲಂಘನೆ ರಾಜ್ಯ ಸರ್ಕಾರದ ಮೇಲುಸ್ತುವಾರಿಯಲ್ಲೇ ನಡೆಯುತ್ತಿರುವ ಸಂಗತಿ ನಮಗೆ ಅತ್ಯಂತ ಆಘಾತವನ್ನುಂಟು ಮಾಡಿದೆ.

1. ಇದರಲ್ಲಿ ಮುಖ್ಯವಾದದ್ದು, ಪೀಠದ ಆವರಣದಲ್ಲಿ ನಡೆಸಲಾಗುತ್ತಿರುವ ಯಜ್ಞ. ಇದು ಕೆಲವೇ ವರ್ಷಗಳ ಹಿಂದೆ ಪ್ರಾರಂಭವಾದದ್ದು. ಅಷ್ಟೇ ಅಲ್ಲ, ಜಿಲ್ಲಾಧಿಕಾರಿಗಳು ಕೂಡ ಈ ಆಚರಣೆಯಲ್ಲಿ ಪಾಲುಗೊಳ್ಳುತ್ತಾರೆಂದು ತಿಳಿದು ಬಂದಿದೆ.

2. ಕಳೆದ ವರ್ಷ ದತ್ತ ಮೂರ್ತಿಯೊಂದನ್ನು ಬೆಟ್ಟದ ಮೇಲಕ್ಕೆ ಒಯ್ದು ಮೂರು ದಿನಗಳ ಕಾಲ ಸ್ಥಳೀಯ ಅಧಿಕಾರಿಗಳ ಸಮಕ್ಷಮದಲ್ಲೇ ಪೂಜಾದಿಗಳನ್ನು ನಡೆಸಲಾಗಿದೆ.

ಇವೆರಡೂ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿಗೆ ವ್ಯತಿರಿಕ್ತವಾಗಿದ್ದು, ನ್ಯಾಯಾಲಯದ ನಿರ್ಣಯದ ಸ್ಪಷ್ಟ ಉಲ್ಲಂಘನೆಯಾಗಿವೆ. ಅಷ್ಟೇ ಅಲ್ಲ, ಈ ಉಲ್ಲಂಘನೆಯಿಂದಾಗಿ, ಸರ್ಕಾರವೇ ನ್ಯಾಯಾಲಯದ ನಿಂದನೆಯನ್ನು ಮಾಡಿದಂತಾಗಿದೆ.

3. ಪೀಠದಿಂದ 33 ಕಿ.ಮಿ. ದೂರದಲ್ಲಿರುವ ಚಿಕ್ಕಮಗಳೂರಿನಲ್ಲಿ ಹಿಂದೆಂದೂ ಇಲ್ಲದ, ಹೊಚ್ಚ ಹೊಸದಾಗಿ ಸೃಷ್ಟಿಸಲಾದ ಎರಡು ಆಚರಣೆಗಳಿಗೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಒಂದು, ದತ್ತ ಮಾಲೆ ಮತ್ತು ದತ್ತ ಜಯಂತಿ ಕಾರ್ಯಕ್ರಮಗಳು ; ಇನ್ನೊಂದು, ಶೋಭಾಯಾತ್ರೆ. ಈ ಆಚರಣೆಗಳು ಹಿಂಸೆಯನ್ನು ವೈಭವೀಕರಿಸುವ ಘೋಷಣೆಗಳಿಂದ ಕೂಡಿದ್ದು, ಅಲ್ಪಸಂಖ್ಯಾತರನ್ನು ಬೆದರಿಸುವ ದುರುದ್ದೇಶ ಮಾತ್ರ ಹೊಂದಿವೆ.

ಅಷ್ಟೇ ಅಲ್ಲ, **ಪೀಠವನ್ನು ಹಿಂದುತ್ವದ ಶಕ್ತಿಗಳು ವಶಪಡಿಸಿಕೊಳ್ಳುವ ಘೋಷಿತ ಉದ್ದೇಶವೂ ಇದರಲ್ಲಿ ಸೇರಿದೆ. ಇದರಿಂದಾಗಿ, ಅಲ್ಲಿ ಕೋಮು ಹಿಂಸೆ ಯಾವ ಹೊತ್ತಿನಲ್ಲಾದರೂ ಭುಗಿಲೇಳ ಬಹುದಾದ, ಒಂದು ಸ್ಫೋಟಕಕಾರೀ ವಾತಾವರಣ ಸೃಷ್ಟಿಯಾಗಿದೆ.** ಕರ್ನಾಟಕವನ್ನು ಇನ್ನೊಂದು ಗುಜರಾತ್ ಆಗಿ ಮಾರ್ಪಡಿಸುವ ರಾಜಕೀಯ ಸಮರ್ಥನೆ ಕೂಡ ಇದರ ಹಿಂದಿದೆ ಎಂಬುದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ.



ಡಿಸೆಂಬರ್ 7, 8 ರಂದು ಚಿಕ್ಕಮಗಳೂರಿನಲ್ಲಿ ಸೌಹಾರ್ದತಾ ಸಮಾವೇಶ ನಡೆಸಿಯೇ ತೀರಲು ತೀರ್ಮಾನ

ನ್ಯಾಯಾಲಯದ ಆಜ್ಞೆಯನ್ನು ಎಷ್ಟೇ ಉದಾರವಾಗಿ ಅರ್ಥೈಸಿದರೂ, ಅದು ಸಂಘ ಪರಿವಾರದ ದತ್ತ ಜಯಂತಿ, ದತ್ತ ಮಾಲೆ ಮತ್ತು ಶೋಭಾಯಾತ್ರೆಯಂಥ ಆಚರಣೆಗಳನ್ನು ಅನುಮೋದಿಸುವುದಿಲ್ಲ ಎನ್ನುವುದು ಸ್ಪಷ್ಟ. ಅಷ್ಟೇ ಏಕೆ, ಸರ್ಕಾರವೂ ಕೂಡ ಪೀಠದ ಧಾರ್ಮಿಕ ಕ್ರಿಯೆಗಳಲ್ಲಿ ನೇರವಾಗಿ ಭಾಗವಹಿಸುವುದನ್ನು ಈ ಆಜ್ಞೆಗಳು ವಿರೋಧಿಸುತ್ತವೆ.

ದತ್ತ ಜಯಂತಿ ಮತ್ತು ಶೋಭಾಯಾತ್ರೆಯಂಥ ಉತ್ಸವಗಳು ಕೇವಲ ಹಿಂಸೆ ಮತ್ತು ಅಧಿಕಾರ ದಾಹದಿಂದ ಕೂಡಿವೆ. ಈ ಆಚರಣೆಗಳಿಗೆ ಪ್ರಚೋದನೆಯ ಉದ್ದೇಶದ ಹೊರತು, ಯಾವುದೇ ಧಾರ್ಮಿಕ ಮಹತ್ವವಾಗಲೀ, ಧಾರ್ಮಿಕ ಪರಂಪರೆಯಾಗಲೀ ಇಲ್ಲ. ಆದ್ದರಿಂದ ಇಂಥ ಉದ್ರೇಕಕಾರಿ ಆಚರಣೆಗಳನ್ನು ತತ್‌ಕ್ಷಣ ನಿಷೇಧಿಸಬೇಕೆಂದು ನಾವು ಆಗ್ರಹಿಸುತ್ತೇವೆ.

ನಮ್ಮ ಚಿಕ್ಕಮಗಳೂರು ಭೇಟಿಯಲ್ಲಿ ಸ್ಪಷ್ಟವಾಗಿ ತಿಳಿದುಬಂದ ಇನ್ನೊಂದು ಸತ್ಯವೆಂದರೆ, ಅಲ್ಲಿನ ಸ್ಥಳೀಯರು ಯಾರೂ ಈ ಎರಡೂ ಉತ್ಸವಗಳಲ್ಲಿ ಯಾವುದೇ ಆಸಕ್ತಿ ಹೊಂದಿಲ್ಲದಿರುವುದು. ಬದಲಿಗೆ ಸ್ಥಳೀಯ ಜನ ಇದರಿಂದ ಭಯಭೀತರಾಗಿದ್ದಾರೆ. ಅಯೋಧ್ಯೆಯಂತೆಯೇ ಇಲ್ಲಿ ಕೂಡ, ಹೊರಗಿನಿಂದ ಕರೆತರಲಾಗುವ ಅಪಾರ ಸಂಖ್ಯೆಯ ಜನರೇ ಕೋಮು ಪ್ರಚೋದನೆಯ ರೂವಾರಿಗಳು.

ಇದೇ ಸಂದರ್ಭದಲ್ಲಿ, ಅಯೋಧ್ಯೆ ವಿಷಯದಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇವೆ (1994 -5 ಎಸ್.ಸಿ.ಸಿ. ಪುಟ 439) 'ಪ್ರಭುತ್ವಕ್ಕೆ ಯಾವ ಧರ್ಮವೂ ಇಲ್ಲ. ಅದು ಎಲ್ಲ ಧರ್ಮಗಳನ್ನೂ ಸಮಾನ ತಕ್ಕಡಿಯಲ್ಲಿಟ್ಟು ತೂಗಬೇಕು ಮತ್ತು ಗೌರವಿಸಬೇಕು. ಒಂದು ಧರ್ಮಕ್ಕೆ ಹಾನಿಯುಂಟಾಗುವ ರೀತಿಯಲ್ಲಿ ಇನ್ನೊಂದು ಧರ್ಮವನ್ನು ಸಮರ್ಥಿಸ ಲಾಗದು'. ಇದು ಕರ್ನಾಟಕದ ಕೋಮು ಸೌಹಾರ್ದಕ್ಕೆ ಜೀವಂತ ನಿದರ್ಶನವಾಗಿರುವ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ನಿರ್ದಿಷ್ಟವಾಗಿ ಅನ್ವಯವಾಗುವಂಥದ್ದು.

ಸಂಘ ಪರಿವಾರ ಆಚರಣೆಗೆ ತಂದಿರುವ ಈ ಹೊಸ ಪದ್ಧತಿಗಳನ್ನು ನಿಷೇಧಿಸ ಬೇಕೆಂದು ನಾಡಿನ ಅನೇಕ ಪ್ರಗತಿಪರ ವ್ಯಕ್ತಿ ಹಾಗೂ ಸಂಘಟನೆಗಳು ಸರ್ಕಾರವನ್ನು ಕಳೆದ ಸುಮಾರು ವರ್ಷಗಳಿಂದ ಆಗ್ರಹಿಸುತ್ತಲೇ ಬಂದಿವೆ. ಈ ಬಾರಿಯೂ ದತ್ತಮಾಲೆ, ದತ್ತ ಜಯಂತಿ ಮತ್ತು ಶೋಭಾಯಾತ್ರೆ ಗಳನ್ನು ನಿಷೇಧಿಸದಿದ್ದರೆ, ನಾಡಿನ ಎಲ್ಲ ಪ್ರಗತಿಪರ ಮತ್ತು ಶಾಂತಿಪ್ರಿಯ ವ್ಯಕ್ತಿ ಹಾಗೂ ಸಂಘಟನೆಗಳು ಡಿಸೆಂಬರ್ 7 ಮತ್ತು 8 ರಂದು ಚಿಕ್ಕಮಗಳೂರಿ ನಲ್ಲಿ ಕೋಮು ಸೌಹಾರ್ದ ಸಮಾವೇಶ ಮತ್ತು ಶಾಂತಿ ಮೆರವಣಿಗೆಯನ್ನು ನಡೆಸಲಿದ್ದಾರೆ.

ಈ ಎಲ್ಲರ ಉದ್ದೇಶ, ಕರ್ನಾಟಕ ಸಂಸ್ಕೃತಿಯಲ್ಲಿ ಬಾಬಾಬುಡನ್‌ಗಿರಿಗೆ ಇರುವ ಸಾಂಸ್ಕೃತಿಕ ಹಿರಿಮೆ ಮತ್ತು ಮಹತ್ವವನ್ನು ಎತ್ತಿ ಹಿಡಿದು, ತನ್ಮೂಲಕ ಕೋಮು ಸೌಹಾರ್ದ ಮತ್ತು ಶಾಂತಿಯ ಸಂದೇಶವನ್ನು ಎಲ್ಲೆಡೆ ಹರಡುವುದೇ ಆಗಿದೆ. ○

ಗೆಲುವು ಸಾಧಿಸಿದ ಕೃಪಾಂಕ ನೌಕರರ ಹೋರಾಟ

ಗ್ರಾಮೀಣ ಕೃಪಾಂಕ ನೌಕರರ ಛಲದ ಹೋರಾಟ ಕೊನೆಗೂ ಗೆಲುವನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ. 2003 ನೇ ಇಸ್ವಿಯಲ್ಲಿಯೇ ದೀರ್ಘ ಹೋರಾಟವಾಗಿ ಪರಿವರ್ತನೆಗೊಂಡ ಇದು ಅಂತಿಮವಾಗಿ ಜಯ ಸಾಧಿಸುವ ಮೂಲಕ ರಾಜ್ಯದ ಹೋರಾಟಗಾರರಿ ಗೊಂದು ಸ್ಫೂರ್ತಿ ನೀಡಿದೆ.

ನವೆಂಬರ್ - 7 ರಂದು ಕೊನೆಗೂ ರಾಜ್ಯ ಸಚಿವ ಸಂಪುಟ ಅಂತಿಮ ಅಧಿಸೂಚನೆ ಹೊರಡಿಸುವುದರೊಂದಿಗೆ ಪುನರ್ ನೇಮಕಾತಿ ಪ್ರಕ್ರಿಯೆಗಳು ಪ್ರಾರಂಭಗೊಂಡಿವೆ. ಕೆಲಸ ಕಳೆದುಕೊಂಡು ಆತಂಕಗೊಂಡಿದ್ದ ಕೃಪಾಂಕ ನೌಕರರ ಕುಟುಂಬಗಳಲ್ಲಿ 'ಹಸನ್ಮುಖಿ' ಕಾಣಬರುತ್ತಿವೆ.

ಸುಮಾರು 5 ಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ 'ವಜಾಗೊಂಡ ಕೃಪಾಂಕ ನೌಕರರಲ್ಲಿ ಸುಮಾರು 3 ಸಾವಿರಕ್ಕಿಂತಲೂ ಅಧಿಕ ಶಿಕ್ಷಕರಾಗಿದ್ದಾರೆ. ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗಳು ತೀವ್ರ ರೀತಿಯಲ್ಲಿ ನಡೆದಿವೆ. ಬೆಂಗಳೂರು



ನೇಮಕಾತಿಯ ಪ್ರಕ್ರಿಯೆ ಆರಂಭ
ಅಂಗವಿಕಲ ನೌಕರನೊಬ್ಬ ಮರುನೇಮಕ ಸಂತೋಷದಲ್ಲಿ

ವಿಭಾಗದಲ್ಲಿ ಹೈಸ್ಕೂಲ್ ವಿಭಾಗದ ಜಂಟಿ ನಿರ್ದೇಶಕರಾದ ಜೋಸೆಫ್ ರವರು ರಾಜ್ಯದಲ್ಲಿಯೇ ಮೊದಲಿಗೆ 'ನೇಮಕಾತಿ ಆದೇಶಗಳನ್ನು' ನೀಡುವುದರ ಮೂಲಕ ಕೃಪಾಂಕ ನೌಕರರ ಪ್ರೀತಿಗೆ ಪಾತ್ರರಾಗಿದ್ದಾರೆ. ಅದೇ ರೀತಿ ಚಿತ್ರದುರ್ಗದಲ್ಲಿ 'ಜಿಲ್ಲಾ ಉಪನಿರ್ದೇಶಕರು ಮತ್ತು ಅವರ ಸಿಬ್ಬಂದಿ ರಾತ್ರಿ 12 ರವರೆಗೂ ಆದೇಶಗಳನ್ನು ನೀಡಿ ನೌಕರರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಈಗಾಗಲೇ ಪೊಲೀಸ್ ಇಲಾಖೆಯ 59 ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ರಾಜ್ಯದ ವಿವಿಧ ಕಡೆಗಳಲ್ಲಿದ್ದ ಪೊಲೀಸ್ ಕಾನ್ಸ್‌ಟೆಬಲ್ಸ್, ಕೆಎಸ್‌ಆರ್‌ಟಿಸಿ ವಿವಿಧ ವಿಭಾಗದಲ್ಲಿ ನೂರಾರು ಚಾಲಕ, ನಿರ್ವಾಹಕರು, ಅಂಕಿ-ಸಂಖ್ಯೆ ಇಲಾಖೆಯ ನೌಕರರು, ಭಾಷಾಂತರ ಇಲಾಖೆ, ಕರ್ನಾಟಕ ಪವರ್ ಕಾರ್ಪೊರೇಷನ್ (ಕೆ.ಪಿ.ಸಿ)ನ ಸುಮಾರು 20ರಷ್ಟು ಇಂಜಿನಿಯರ್‌ಗಳು, ಇಎಸ್‌ಐ ಆಸ್ಪತ್ರೆಯ ಸುಮಾರು 12 ಸಿಬ್ಬಂದಿ ಸೇರಿದಂತೆ ಸಾವಿರಾರು ನೌಕರರು 'ನೇಮಕಾತಿ ಆದೇಶ ಪಡೆದು ಈಗಾಗಲೇ ಕರ್ತವ್ಯದಲ್ಲಿದ್ದಾರೆ.

ಉಳಿದಂತೆ ಮುಖ್ಯವಾಗಿ- ಸಚಿವಾಲಯದ 11 ಟೈಪಿಸ್ಟ್‌ಗಳು, ಕಾರ್ಮಿಕ ಇಲಾಖೆಯ 12 ಇನ್ಸ್‌ಪೆಕ್ಟರುಗಳು, ಬಿಎಂಟಿಸಿಯ ಸುಮಾರು 70 ರಷ್ಟು ನಿರ್ವಾಹಕರು ಸೇರಿದಂತೆ ಕೆ.ಎಸ್.ಪಿ.ಸಿ ನಿಂದ ಆಯ್ಕೆಯಾಗಿದ್ದ ರಾಜ್ಯದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ 500ರಷ್ಟು ಪ್ರಥಮ ದರ್ಜೆ ಸಹಾಯಕರು ಸೇರಿದಂತೆ ಇತರರು ಪುನರ್ ನೇಮಕಾತಿ ಮಾತ್ರ ಈಗ ಬಾಕಿ ಉಳಿದಿದ್ದು ಬಹುತೇಕ ಡಿಸೆಂಬರ್ ತಿಂಗಳೊಳಗೆ ಎಲ್ಲರೂ 'ಕರ್ತವ್ಯಕ್ಕೆ' ಹಾಜರಾಗಿ ಹೊಸ ವರ್ಷ ಆರಂಭಗೊಳ್ಳುವುದರೊಂದಿಗೆ 'ಎಲ್ಲರೂ' ಹೊಸ ಬದುಕನ್ನು ಆರಂಭಿಸಲಿದ್ದಾರೆ.

ಕೃಪಾಂಕ ನೌಕರರ ಕತ್ತಲೆಯ ಬದುಕಿಗೊಂದು ಹೊಸ ಬೆಳಕು ಸೃಷ್ಟಿಸಲು ಕಾರಣವಾದ ಡಿವೈಎಫ್‌ಐ - ಎಸ್‌ಎಫ್‌ಐ ಹಾಗೂ ಕೃಪಾಂಕ ನೌಕರರ ಕ್ರಿಯಾ ಸಮಿತಿಗೆ ನಿತ್ಯ ಹತ್ತಾರು ನೌಕರರು ಅವರ ಮನೆಯವರು ಫೋನ್ ಮೂಲಕ, ಕಛೇರಿಗೆ ಸಿಹಿ ತಂದು ಹಂಚುವ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದಾರೆ.

● ಕೆ. ಮಹಾಂತೇಶ್



ಅಸ್ಸಾಂನಲ್ಲಿ ಭುಗಿಲೆದ್ದಿರುವ ಪ್ರಾದೇಶಿಕ ಸಂಕುಚಿತತೆಯ ಹಿಂದಿರುವ ಧಾರುಣ ಸತ್ಯಗಳೇನು?

ಪ್ರಾದೇಶಿಕ ಸಂಕುಚಿತವಾದವನ್ನು ಬಡಿದೆಬ್ಬಿಸಬೇಡಿ

ಸೀತಾರಾಂ ಯೆಚೂರಿ

ಪ್ರಾದೇಶಿಕ ಸಂಕುಚಿತವಾದದ ಉದ್ರೇಕಕಾರಿ ಜ್ವಾಲೆಗಳು ಮತ್ತೆ ಅಸ್ಸಾಂನಲ್ಲಿ ಸುಮಾರು 60 ಜೀವಗಳನ್ನು ಬಲಿತೆಗೆದುಕೊಂಡಿದೆ. ಇದನ್ನು ತಕ್ಷಣವೇ ತಡೆಯದಿದ್ದರೆ ದ್ವೇಷ, ವೈಷಮ್ಯ ಮತ್ತು ಸಾವಿನ ಹೊಲಸು ಭೀತಿ ದೇಶದ ವಿವಿಧ ಭಾಗಗಳಿಗೆ ಹರಡಬಹುದು.

ಅಸ್ಸಾಂನಲ್ಲಿನ ಹಲ್ಲೆಗಳು ಉತ್ತರ-ಪೂರ್ವ ಗಡಿ ರೈಲ್ವೇ ವಿಭಾಗದಲ್ಲಿ ಅಸ್ಸಾಮಿ ಯುವಕರು ಕಿರಿಯ ಹುದ್ದೆಗಳಿಗೆ ಆಯ್ಕೆ ಪರೀಕ್ಷೆಯನ್ನು ಬರೆಯಲು ಹಿಂದಿ ಭಾಷಿಕ ಯುವಕರನ್ನು ತಡೆಯುವುದರೊಂದಿಗೆ ಆರಂಭವಾದವು. ಅಸ್ಸಾಂನಲ್ಲಿನ ಹಿಂದಿ ಭಾಷಿಕರು ಹೆಚ್ಚಾಗಿ ಬಿಹಾರ ಮೂಲದವರರಾಗಿದ್ದು ಬಿಹಾರದಲ್ಲಿ ಈ ಹಲ್ಲೆಗಳಿಗೆ ಪ್ರತೀಕಾರ ಕ್ರಮಗಳು ಕಂಡುಬಂದವು. ಇದು ಹಿಂದಿಭಾಷಿಕರು ಬಹಳ ಸಂಖ್ಯೆಯಲ್ಲಿ ಇರುವ ಉತ್ತರ ಅಸ್ಸಾಮಿನಲ್ಲಿ ಕೊಲೆಗಳನ್ನು ಉದ್ರೇಕಿಸಿತು. ಇದೀಗ ಉತ್ತರ-ಪೂರ್ವ ಭಾರತದ ಇತರ ಪ್ರದೇಶಗಳಿಗೂ ಹರಡುವ ಭೀತಿಯಿದೆ. ಅತ್ತ ಪ್ರಾದೇಶಿಕ ಸಂಕುಚಿತವಾದವನ್ನು ಬಡಿದೆಬ್ಬಿಸಲು ಸದಾ ಕಾತುರರಾಗಿರುವ ಶಿವಸೇನೆ ಮುಂಬೈಯಲ್ಲಿ ಈ ಪ್ರಶ್ನೆಯ ಮೇಲೆಯೇ ಗಲಭೆ-ಗದ್ದಲ ಎಬ್ಬಿಸಿದೆ.

ಇದು ತಕ್ಷಣದಲ್ಲೇ ಕಾನೂನು - ಸುವ್ಯವಸ್ಥೆ ಸಮಸ್ಯೆಗಳನ್ನು ಸೃಷ್ಟಿಸಿದ್ದು ಅದನ್ನು ಸರಿಪಡಿಸಿ ಸಾಮಾನ್ಯ ಪರಿಸ್ಥಿತಿಯನ್ನು ನೆಲೆಗೊಳಿಸಬೇಕಲ್ಲದೆ ಈ ಘಟನೆಗಳು ಮತ್ತೊಮ್ಮೆ ಪ್ರಾದೇಶಿಕ ಸಂಕುಚಿತವಾದಕ್ಕೆ ಸತತವಾಗಿ ಉಣಬಡಿಸುವ ವಿವಿಧ ಆಯಾಮಗಳನ್ನು ನಮ್ಮ ಮುಂದಿಟ್ಟಿವೆ. ಉತ್ತರ - ಪೂರ್ವಗಳಲ್ಲಿ ವಿಶೇಷವಾಗಿ ಅಸ್ಸಾಮಿನಲ್ಲಿ 1980 ರ ದಶಕದಲ್ಲಿ ಇಂತಹ ದುಷ್ಟ ಶಕ್ತಿಗಳು ಜನಗಳ ಭಾವನೆಗಳನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಂಡವು. ಅದಕ್ಕೆ ಜನಗಳು ಜೀವ ಮತ್ತು ಆಸ್ತಿಯ ನಷ್ಟಗಳ ಸ್ವರೂಪದಲ್ಲಿ ಅಪಾರ ಬೆಲೆ ತೆರಬೇಕಾಯಿತು. 'ಮಣ್ಣಿನ ಮಕ್ಕಳು' ಆಂದೋಲನಗಳು ದೇಶದ ವಿವಿಧೆಡೆಗಳಲ್ಲಿ ಈ ಹಿಂದೆ ತಮ್ಮ ವಿನಾಶಲೀಲೆಗಳನ್ನು ತೋರ್ಪಡಿಸಿದೆ.

ಶಿಕ್ಷಣ, ಉದ್ಯೋಗ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ 'ಮಣ್ಣಿನ ಮಕ್ಕಳು' ಘೋಷಣೆಯನ್ನೆತ್ತಿ ಶಿವಸೇನೆಯಂತಹ ರಾಜಕೀಯ ಶಕ್ತಿಗಳು ಭಾರತದ ರಾಜಕಾರಣದಲ್ಲಿ ತಮ್ಮ ಅಸ್ತಿತ್ವವನ್ನು ಪ್ರದರ್ಶಿಸಿದವು. ಆದರೆ ಈ ಸಂಕುಚಿತವಾದಕ್ಕೆ ಕುಮ್ಮಕ್ಕು ನೀಡುವ ಮತ್ತೊಂದು ಆಯಾಮವಿದೆ. ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಗಳು ಪ್ರಾದೇಶಿಕ ಅಸಮಾನತೆಗಳನ್ನು ಹೆಚ್ಚಿಸುತ್ತಿವೆ, ಹಿಂದುಳಿದ ಪ್ರದೇಶಗಳು ಇನ್ನಷ್ಟು ಹಿಂದುಳಿಯುತ್ತಿವೆ, ಇದರಿಂದ ಇನ್ನಷ್ಟು ಪ್ರಾದೇಶಿಕ ಅಸಮಾನತೆಗಳು ಹೆಚ್ಚುತ್ತಿವೆ. ಇವು ಪ್ರಾದೇಶಿಕ ಸಂಕುಚಿತವಾದಕ್ಕೆ ಕುಮ್ಮಕ್ಕು ನೀಡುತ್ತವೆ ಎಂದು ನಾವು ಹೇಳುತ್ತಾ ಬಂದಿದ್ದೇವೆ. ಈಗಿನ ಘಟನೆಗಳು ಈ ಎಲ್ಲಾ ಆಯಾಮಗಳನ್ನು ಹೊಂದಿವೆ.

ಘರ್ಷಣೆಯ ಸ್ಥಿತಿ

ಮೊದಲು ಈಗ ಸ್ಫೋಟಗೊಂಡಿರುವ ಹಲ್ಲೆಗಳು ಹೇಗೆ ಆರಂಭವಾದವು ಎಂಬುದನ್ನು ಗಮನಿಸೋಣ. ಮುಖ್ಯ ಪ್ರಶ್ನೆ ಭಾರತೀಯ ರೈಲ್ವೇ ವಿಭಾಗಗಳಲ್ಲಿನ ಉದ್ದೇಶಗಳನ್ನು ಕುರಿತದ್ದು. 1982 ರಲ್ಲಿ ಈ ವಿಭಾಗದಲ್ಲಿ ನೇಮಕಾತಿಗಳು ನಡೆದಿರಲಿಲ್ಲ, ಗಂಭೀರ ಅಪಘಾತಗಳ ಸರಣಿಯೇ ಘಟಿಸಿದ ಮೇಲೆ ಸಿಬ್ಬಂದಿ ಕಡಿತದಿಂದಾಗಿ ರೈಲುಹಳಿಗಳ ನಿರ್ವಹಣೆಯ ಕೆಲಸ ಹದಗೆಟ್ಟಿದೆ ಎಂದು ರೈಲ್ವೇ 'ಕಂಡು ಹಿಡಿಯಿತು'! ರೈಲು ಹಳಿಗಳನ್ನು ದಿನನಿತ್ಯ ಪರೀಕ್ಷಿಸುವ ಗ್ಯಾಂಗ್‌ಮನ್‌ಗಳ ಸಂಖ್ಯೆಗಳನ್ನು ಕಡಿತ ಮಾಡಿ ಅವರು ಪರೀಕ್ಷಿಸಬೇಕಾದ ಹಳಿಗಳ ಉದ್ದವನ್ನು ಹೆಚ್ಚಿಸಿದ್ದರಿಂದ ಇಂತಹ ಪರೀಕ್ಷಣೆಯೇ ನಿರುಪಯುಕ್ತವಾಗಿ ಬಿಟ್ಟಿದ್ದವು. ಪ್ರತಿಯೊಂದು ರೈಲು ಅಪಘಾತದ ನಂತರ ಈ ವಾಜಪೇಯಿ ಸರ್ಕಾರದ ರಾಗವೆಂದರೆ 'ಬುಡಮೇಲು ಕೃತ್ಯ' ಇದು ಎಂಬುದು. ಹಳಿಯ ಫಿಶ್‌ಪ್ಲೇಟ್‌ಗಳನ್ನು 'ತೆಗೆಯಲಾಗಿತ್ತು' ಎಂದು, ಹಳಿಗಳ ಮೇಲಿಂದ ಒಂದು ವೇಗದ ರೈಲುಗಾಡಿ ಹೋದಮೇಲೂ ಈ ರೀತಿ ಫಿಶ್‌ಪ್ಲೇಟ್‌ಗಳು ಸಡಿಲಗೊಳ್ಳುವ, ಬಿದ್ದುಹೋಗುವ ಸಾಧ್ಯತೆಗಳೂ ಇರುತ್ತವೆ. ಗ್ಯಾಂಗ್‌ಮನ್‌ಗಳು ಇದನ್ನು ಪರೀಕ್ಷಿಸಿ ಮೇಲಧಿಕಾರಿಗಳಿಗೆ ತಿಳಿಸುವ ಕೆಲಸ ಮಾಡುವವರು. ನಿಜ ಸಂಗತಿಯೆಂದರೆ ಇಂತಹ ಗ್ಯಾಂಗ್‌ಮನ್‌ಗಳು ಮತ್ತು ಅಂಚೆಪೇದೆಗಳು ಈ ವಿಶಾಲ ಭಾರತವನ್ನು ಒಂದೂಗೂಡಿಸುವಲ್ಲಿ ಅಸಾಮಾನ್ಯ ಪಾತ್ರ ವಹಿಸಿದವರು.

ಇತ್ತೀಚಿಗೆ 17 ಕ್ಕೂ ಹೆಚ್ಚು ರೈಲು ವಲಯಗಳಲ್ಲಿ 38,000 ಸ್ಥಾನಗಳನ್ನು ಭರ್ತಿ ಮಾಡಲು ನಿರ್ಧರಿಸಲಾಯಿತು. 19 ರೈಲ್ವೇ ನೇಮಕಾತಿ ಮಂಡಳಿ (RRB) ಗಳು ಈ ಕೆಲಸವನ್ನು ನಡೆಸಬೇಕು.


ಈ ಉದ್ಯೋಗವಕಾಶಕ್ಕೆ 75 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಬಂದವು. ಇವುಗಳಲ್ಲಿ 55 ಲಕ್ಷ ಅರ್ಜಿಗಳು ಎಲ್ಲಾ ರೀತಿಗಳಲ್ಲಿ ಸರಿಯಾಗಿದ್ದವು. ಗ್ಯಾಂಗ್‌ಮನ್, ಖಲಾಸಿ ಮತ್ತು ಹೆಲ್ಪರ್‌ಗಳ ಈ ಹುದ್ದೆಗಳಿಗೆ ಅರ್ಜಿ ಹಾಕಲು ಕನಿಷ್ಟ ವಿದ್ಯಾರ್ಹತೆ ಎಂಟನೇ ತರಗತಿಯಾಗಿದ್ದರೂ ಎಂಬಿಎ ಗಳು, ಸ್ನಾತಕ ಡಿಗ್ರಿ ಪಡೆದವರು, ಸ್ನಾತಕೋತ್ತರ ಡಿಗ್ರಿ ಪಡೆದವರು, ಇಂಜಿನಿಯರುಗಳೂ ಅರ್ಜಿ ಹಾಕಿದ್ದಾರೆ. ಈ ಸಂಗತಿಯೇ ತನ್ನ ಅಧಿಕಾರಾವಧಿಯಲ್ಲಿ ಒಂದು ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂಬ ಪ್ರಧಾನ ಮಂತ್ರಿಗಳ ಹೆಗ್ಗಳಿಕೆಯ ಹಿಂದಿರುವ ಸುಳ್ಳನ್ನು ಬಯಲು ಮಾಡುತ್ತದೆ. ಭಾರತ 'ಹೊಳೆಯುತ್ತಿದೆ' ಯಂತೆ! ಇಂಜಿನಿಯರುಗಳು, ಎಂಬಿಎಗಳು ಸುಮಾರು 5000 ರೂ. ಆರಂಭಿಕ ಸಂಬಳದ ಕೆಲಸಗಳಿಗೆ ತಡಕಾಡುತ್ತಿರುವಾಗ ದೇಶದಲ್ಲಿ ನಿರುದ್ಯೋಗ ಬಿಕ್ಕಟ್ಟು ಎಷ್ಟು ಬೃಹತ್ ಪ್ರಮಾಣದಲ್ಲಿದೆ ಎಂದು ಯಾರಾದರೂ ಊಹಿಸಿಕೊಳ್ಳಬಹುದು.

ಸಂವಿಧಾನದ 16ನೇ ಕಲಮು ಮತ್ತು ಇತ್ತೀಚಿನ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ರೈಲ್ವೇ ವಿಭಾಗ ಪ್ರಾದೇಶಿಕ, ಭಾಷಾ ಆಧಾರದಲ್ಲಿ ವ್ಯತ್ಯಾಸ ಮಾಡುವಂತಿಲ್ಲ. RRBಗಳು ದೇಶದ ವಿವಿಧ ಕೇಂದ್ರಗಳಲ್ಲಿ ನವೆಂಬರ್ 9 ರಿಂದ ಡಿಸೆಂಬರ್ 28 ರ ವರೆಗೆ ಲಿಖಿತ ಪರೀಕ್ಷೆ ನಡೆಯುತ್ತವೆ. ಈಗಿನ ರೈಲ್ವೇ ಮಂತ್ರಿಯ ಮೇಲಿನ ಆಪಾದನೆಯೆಂದರೆ ಪಾಟ್ನಾ ಮತ್ತು ರಾಂಚಿಯಲ್ಲಿ ಮೊದಲು ಪರೀಕ್ಷೆಗಳನ್ನು ನಡೆಸಿ ಇಲ್ಲಿನ ಯುವಕರು ನಂತರ ಇತರ ಕೇಂದ್ರಗಳಲ್ಲೂ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಿಕೊಡಲಾಗಿದೆ ಎಂಬುದು. ಅದೇನೇ ಇರಲಿ, ಹಲವು ಪ್ರದೇಶಗಳಲ್ಲಿ ನಿರುದ್ಯೋಗಿಗಳ ದೊಡ್ಡ ಸೇನೆಯೇ ಇರುವುದರಿಂದ ಆ ಪ್ರದೇಶದವರಿಗೆ ಉದ್ಯೋಗ ನೀಡಬೇಕೆಂಬ ಕೂಗೆದ್ದಿತು. ಇದು ನಂತರ ಆರಂಭವಾದ ಘರ್ಷಣೆ, ಗಲಭೆಗಳ ಹಿನ್ನೆಲೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನೆನಪಿಸಿಕೊಳ್ಳಬಹುದು. ರೈಲ್ವೇ ವಲಯಗಳನ್ನು ವಿಭಜಿಸಿ ಇನ್ನಷ್ಟು ವಲಯಗಳನ್ನು ರಚಿಸುತ್ತಿದ್ದಾಗ ಒಂದು ಸಮಗ್ರ ರಾಷ್ಟ್ರೀಯ ಜಾಲವೆಂಬ ರೈಲ್ವೇಯ ಸ್ವರೂಪದ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ. ದೇಶದೆಲ್ಲೆಡೆ ಸಂಕುಚಿತ ಭಾವನೆಗಳನ್ನು ಎಬ್ಬಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಜುಲೈ 6, 2002 ರಂದು ಗಮನಿಸಿತ್ತು. ಅದೀಗ ನಿಜವಾಗಿದೆ.

ಹದಗೆಡುತ್ತಿರುವ ಪ್ರಾದೇಶಿಕ ಅಸಮಾನತೆ

ಸಹಜವಾಗಿಯೇ ಪ್ರಾದೇಶಿಕ ಸಂಕುಚಿತವಾದದ ಮೇಲೆ ನಿಂತಿರುವ ರಾಜಕೀಯ ಶಕ್ತಿಗಳು ಇದನ್ನೆತ್ತಿಕೊಂಡು ಭಾವೋದ್ರೇಕವನ್ನು ಬಡಿದೆಬ್ಬಿಸುತ್ತಿವೆ. ಅಸ್ಸಾಂನಲ್ಲಿನ ಉಲ್ಫಾ, ಎಎಸ್‌ಯು (AASU) ನಂತಹ ವಿವಿಧ ಸಂಘಟನೆಗಳು ಮತ್ತು ಈ ಹಿಂದೆ ಅಸ್ಸಾಂನ್ನು ಎಲ್ಲಾ 'ವಿದೇಶಿಯಿಂದ ಮುಕ್ತ' ಗೊಳಿಸಬೇಕೆನ್ನುವ ಚಳುವಳಿಗಳು ಮತ್ತೆ ಅವಕಾಶ ಗಿಟ್ಟಿಸಿಕೊಂಡವು. ಮುಂಬೈಯಲ್ಲಿ ಶಿವಸೇನೆ ರೈಲ್ವೇ ನೇಮಕಾತಿ



ಮಂಡಳಿಯ ಕಚೇರಿಯಲ್ಲಿಯೇ ಗಲಭೆ ನಡೆಸಿ ಅದನ್ನು ಹಾಳುಗೆಡವಿದೆ. ಇದು 'ಆರಂಭ' ಮಾತ್ರ ಎಂದೂ ಅದು ಬೆದರಿಕೆ ಹಾಕಿದೆ, ಮಹಾರಾಷ್ಟ್ರದ ಹೊರಗಿನವರಿಗೆ(ಮರಾಠಿ ಭಾಷಿಕರಲ್ಲದವರು ಎಂದು ಓದಿಕೊಳ್ಳಿ) ಪರೀಕ್ಷೆ ನಡೆಸಲು ಬಿಡೋದಿಲ್ಲಾ ಎಂದು ಬೆದರಿಕೆ ಹಾಕಿದೆ.

ಪ್ರಾದೇಶಿಕ ಸಂಕುಚಿತವಾದದ ಮೇಲೆ ನಿಂತಿರುವ ಈ ಶಕ್ತಿಗಳೇ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳನ್ನು ಪ್ರತಿಪಾದಿಸುವವರು, ಪ್ರೋತ್ಸಾಹಿಸುವವರು ಕೂಡಾ ಎಂಬುದು ಕೇವಲ ಆಕಸ್ಮಿಕವಲ್ಲ. ಹಾಸ್ಯಾಸ್ಪದ ಸಂಗತಿಯೂ ಅಲ್ಲ. ಭಾರತದ ಆರ್ಥಿಕದಲ್ಲಿದ್ದ ಅಲ್ಪಸ್ವಲ್ಪ ಯೋಜನಾಬದ್ಧತೆಯನ್ನು ಕಳಚಿಹಾಕಿ, ಸಾರ್ವಜನಿಕ ವಲಯವನ್ನು ನಾಶ ಮಾಡಿ ಪ್ರಾದೇಶಿಕ ಆರ್ಥಿಕ ಸಮಾನತೆಯನ್ನು ಸ್ವಲ್ಪಮಟ್ಟಿಗಾದರೂ ಕಲ್ಪಿಸುವ ಎಲ್ಲಾ ಪ್ರಯತ್ನಗಳನ್ನು ಧ್ವಂಸ ಮಾಡಲಾಗಿದೆ.

ರೂರ್ಕೆಲಾ, ಧಿಲಾಯಿ, ಕೋರ್ಬಾ, ಹರಿದ್ವಾರ, ಪಿಂಪ್ರಿ ಇತ್ಯಾದಿ ಹಿಂದುಳಿದ ಪ್ರದೇಶಗಳಲ್ಲಿ ಸಾರ್ವಜನಿಕ ವಲಯ ಘಟಕಗಳನ್ನು ಸ್ಥಾಪಿಸಿದ ಉದ್ದೇಶ ಈ ಹಿಂದುಳಿದ ಪ್ರದೇಶಗಳಲ್ಲಿ ಆರ್ಥಿಕ ಸಂಪನ್ಮೂಲಗಳನ್ನು, ಮೂಲರಚನೆಗಳನ್ನು ಸೃಷ್ಟಿಸಿ, ಉದ್ಯೋಗವಕಾಶಗಳನ್ನು ನಿರ್ಮಾಣ ಮಾಡಿ ಆ ಪ್ರದೇಶಗಳಲ್ಲಿ ಆರ್ಥಿಕ ಅಭಿವೃದ್ಧಿ ತರುವುದು. ಆದರೆ ಈಗ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳು ಮತ್ತು 'ಮಾರುಕಟ್ಟೆ' ಎಂಬ ಹೊಸದಾಗಿ ಪ್ರತ್ಯಕ್ಷವಾದ ದೇವತೆಯರಾಗಿ ಆರ್ಥಿಕ ಚಟುವಟಿಕೆಗಳು ಈಗಾಗಲೇ ಮೂಲರಚನೆಗಳಿರುವಲ್ಲಿ ಮಾತ್ರ ನಡೆಯುವಂತಾಗಿದೆ. ಆದ್ದರಿಂದ ಬಂಡವಾಳ, ಹಣ ಹೂಡಿಕೆ ಈಗಾಗಲೇ ಸಮೃದ್ಧಿಯಲ್ಲಿರುವ ಪ್ರದೇಶಗಳಿಗಷ್ಟೇ ಹೋಗುತ್ತದೆ. ಇದರಿಂದ ಹಿಂದುಳಿದ ಪ್ರದೇಶಗಳು ಇನ್ನಷ್ಟು ಹಿಂದುಳಿಯುತ್ತವೆ.

ಈ ಅಸಂತೃಪ್ತಿ, ಸಂಕಟಗಳ ಜತೆಗೇ ಅಭೂತಪೂರ್ವ ಕೃಷಿ ಸಂಕಟ ಇಡೀ ದೇಶವನ್ನು ಅಲುಗಾಡಿಸುತ್ತಿದ್ದು ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಕೃಷಿ ವಲಯದಲ್ಲಿ ಉತ್ಪಾದಕ ಕೆಲಸ ಸಿಗಲಾರದೆ ಗ್ರಾಮೀಣ ಯುವಜನ ಕೆಲಸ ಹುಡುಕಿಕೊಂಡು ನಗರಗಳತ್ತ ಅಪಾರ ಸಂಖ್ಯೆಯಲ್ಲಿ ಹೋಗುತ್ತಿದ್ದಾರೆ. ಎಲ್ಲಿಯಾದರೂ ಕೆಲಸ ಸಿಗಲಿ ಎಂದು ಹತಾಶೆಯಿಂದ ಬದುಕಿಗೊಂದು ದಾರಿ ಹುಡುಕುತ್ತಿರುವವರು ಈ ಕೋಟಿಗಟ್ಟಲೆ ಯುವಜನರೇ. ಬಿಹಾರದಿಂದ ಪ್ರತಿವರ್ಷ ಲಕ್ಷಾಂತರ ಮಂದಿ ಪಶ್ಚಿಮದ ಪಂಜಾಬಿನಲ್ಲಿ ಕೃಷಿ ಕೂಲಿಗೆ ಹೋಗುತ್ತಾರೆ. ಎಲ್ಲಾ ಪ್ರದೇಶಗಳಲ್ಲಿ, ಎಲ್ಲಾ ವೃತ್ತಿಗಳಲ್ಲೂ ಇಂತಹ ವಲಸೆ ಕಂಡುಬಂದಿದೆ. ಅತ್ತ ಸ್ಥಳೀಯರು ತಮಗೆ ಸಾಲದಾಗಿರುವ ಬದುಕಿನ ದಾರಿಗಳನ್ನು 'ಹೊರಗಿಂದ' ಬಂದವರೊಡನೆ ಹಂಚಿಕೊಳ್ಳಬಯಸುವುದಿಲ್ಲ. ಇದು ಸಹಜವೇ.

ಆರ್ಥಿಕ ನೀತಿಗಳನ್ನು ಸೋಲಿಸಬೇಕು

ಇಂತಹ ಪರಿಸ್ಥಿತಿಯಲ್ಲಿ, ತಕ್ಷಣವೇ ಗಲಭೆಪೀಡಿತ ಪ್ರದೇಶಗಳಲ್ಲಿ ಸಾಮಾನ್ಯ ಸ್ಥಿತಿ ಉಂಟಾಗಬೇಕು ಎಂಬುದರಲ್ಲಿ ಸಂದೇಹವಿಲ್ಲ. ಪರಿಸ್ಥಿತಿಯನ್ನು ಹತೋಟಿಗೆ ತರಲು ಅಸ್ಸಾಂ ಮತ್ತು ಬಿಹಾರ ರಾಜ್ಯ ಸರ್ಕಾರಗಳಿಗೆ ಅಗತ್ಯ ಸಂಪನ್ಮೂಲಗಳನ್ನು, ಪಡೆಗಳನ್ನು ಒದಗಿಸಬೇಕು. KLO (ಕಾಮಾತಾಪುರ ವಿಮೋಚನಾ ಸಂಘಟನೆ) ದಂತಹ ಇತರ ಹಲವು ಸಂಘಟನೆಗಳೂ ಪರಿಸ್ಥಿತಿಯ ಲಾಭ ಪಡೆಯಲು ಪ್ರಯತ್ನಿಸುತ್ತಿವೆ. ಈಗಾಗಲೇ ಉತ್ತರ ಬಂಗಾಲದಲ್ಲಿ KLO ಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಈ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಲು ಅತ್ಯಂತ ಜಾಗರೂಕತೆ ಅಗತ್ಯ.

ಧಾರ್ಮಿಕ ಸಂಕುಚಿತತೆಯನ್ನು ಬಡಿದೆಬ್ಬಿಸಿ ಅದನ್ನು ತನ್ನ ರಾಜಕೀಯ ಲಾಭ ಪಡೆಯಲು ಬಳಸುತ್ತಿರುವ ವಾಜಪೇಯಿ ಸರ್ಕಾರ ಅಧಿಕಾರದಲ್ಲಿ ಮುಂದುವರೆಯಲು ಈ ಪ್ರಾದೇಶಿಕ ಸಂಕುಚಿತವಾದದಲ್ಲಿಯೂ ಮಿತ್ರರನ್ನು ಪಡೆಯಲು ಪ್ರಯತ್ನಿಸಬಹುದು. ರಾಜಕೀಯ ಲಾಭ ಪಡೆಯಲು ಪ್ರಾದೇಶಿಕ ಸಂಕುಚಿತ ಹಿಂಸಾಚಾರದ ವಿಧಾನವನ್ನು ಈಗಲೂ ಅನುಸರಿಸುತ್ತಿರುವ ಶಿವಸೇನೆಯಂತಹ ಶಕ್ತಿಗಳು ಬಿಜೆಪಿ ಅತ್ಯಂತ ದೃಢ ಮಿತ್ರರು ಕೂಡಾ ಆಗಿದ್ದಾರೆ ತಾನೆ?

ಆದರೆ ಮುಖ್ಯವಾಗಿ ವಾಜಪೇಯಿ ಸರ್ಕಾರದ ಆರ್ಥಿಕ ನೀತಿಗಳನ್ನು ಸೋಲಿಸಬೇಕು. ಏಕೆಂದರೆ ಈ ನೀತಿಗಳು ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುತ್ತಿದೆಯಷ್ಟೇ ಅಲ್ಲ, ಪ್ರಾದೇಶಿಕ ಅಸಮಾನತೆಗಳನ್ನೂ ಹೆಚ್ಚಿಸಿ ಪ್ರಾದೇಶಿಕ ಸಂಕುಚಿತವಾದಕ್ಕೆ ಕುಮ್ಮಕ್ಕು ನೀಡುತ್ತಿದೆ. ಪ್ರಾದೇಶಿಕ ಆರ್ಥಿಕ ಸಮತೋಲನ ಸಾಧಿಸುವುದು ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ಒಂದು ಮುಖ್ಯ ಅಂಶ. ○

ಹಟ್ಟಿ ಚಿನ್ನದ ಗಣಿ : ಅಂಗೈಯಲ್ಲಿ ಬಂಗಾರ ಬದುಕು ದುರ್ಭರ!

ಕರ್ನಾಟಕದ ಅಷ್ಟೇಕೆ ಭಾರತದ ಹೆಮ್ಮೆಯ ಗಣಿಗಳಲ್ಲೊಂದಾದ ಹಟ್ಟಿ ಚಿನ್ನದ ಗಣಿ ಒಡಲಲ್ಲಿ ಅಪಾರ ಸಂಪತ್ತಿರಿಸಿಕೊಂಡರೂ ದಾರಿದ್ರ್ಯದ ದಾವಾನಲದಲ್ಲಿ ನಲುಗುತ್ತಿದೆ. ಚಿನ್ನದ ಗಣಿಯನ್ನೇ ವಿದೇಶಿ ಕಂಪನಿಗೆ ಮಾಡುವ ಸರ್ಕಾರದ ಹುನ್ನಾರ, ಭ್ರಷ್ಟ, ಅಸಮರ್ಥ ಆಡಳಿತ ಸಾಧನೆಗಳನ್ನು ಮಣ್ಣುಗೂಡಿಸಿ ಅವನತಿ ಹಾದಿ ಹಿಡಿಸುತ್ತಿದ್ದಾರೆ. ಬಂಗಾರ ತೆಗೆದವರ ಬಾಳು ನಿತ್ಯದ ಗೋಳಾಗಿದೆ. ಮಾತ್ರವಲ್ಲ ಹೊಸ ಭವಿಷ್ಯದ ಆಶೆಯಲ್ಲಿ ಭೂಮಿ ನೀಡಿ, ಬದುಕಿನಾಸರೆ ಕಳೆದುಕೊಂಡ ಆ ಪ್ರದೇಶದ ರೈತರು ಉದರದ ಊರುಗೋಲಿಗೆ ಪರಿತಪಿಸುವಂತಾಗಿದೆ. ಈ ಚಿನ್ನದ ನಾಡಿನಲ್ಲಿ ಅಂಗುಲ ಅಂಗುಲದ ಮಣ್ಣೂ ವಿಷಮಯವಾಗುತ್ತಾ ಬದುಕಿಗೆ ಬರೆ ಹಾಕುತ್ತಿದೆ. ಹಟ್ಟಿಯ ಚಿನ್ನದ ಗಣಿಯ ಕಥೆ-ವ್ಯಥೆಗಳ, ಹೋರಾಟದ ಅನಿವಾರ್ಯತೆಯ ಹಲವು ಆಯಾಮಗಳ ಬಿಚ್ಚಿಡುವ ಲೇಖನವಿಲ್ಲಿ.

ಮಲ್ಲಯ್ಯ ಜಾಲಹಳ್ಳಿ

ಬಂಗಾರ ಬಗೆದವರ ...



ಹಟ್ಟಿ ಚಿನ್ನದ ಗಣಿಯ ಸಂಶೋಧನೆ ಮತ್ತು ಗಣಿಗಾರಿಕೆ ಪರವಾನಿಗೆಯನ್ನು 23.01.03 ರಂದು ಆಸ್ಟ್ರೇಲಿಯಾದ ಇಂಡೋಫಿಲ್ ಕಂಪನಿಗೆ ಕೊಡುವ ಮೂಲಕ 'ಹಟ್ಟಿ ಚಿನ್ನದ ಗಣಿಯ ಕೆಚ್ಚಲಿಗೆ ಚೂರಿ' ಹಾಕಿದ್ದನ್ನು ರಾಯಚೂರ ಜಿಲ್ಲೆಯ ಜನತೆ ಸಹಿಸರು ಹಾಗೂ ಮುಖ್ಯಮಂತ್ರಿ ಕೃಷ್ಣಾರನ್ನು ಎಂದೂ ಕ್ಷಮಿಸರು.

'ರತ್ನ ಗರ್ಭಾ ವಸುಂಧರು' ಎಂಬ ನಾಣ್ಣುಡಿಗೆ ತಕ್ಕಂತೆ ಈ ಎಡತೊರೆ ನಾಡು ತನ್ನ ಗರ್ಭದಲ್ಲಿ ಅಪಾರವಾಗಿ ಚಿನ್ನದ ನಿಕ್ಷೇಪವನ್ನು ಅಡಗಿಸಿಕೊಂಡಿದೆ. ಆದರೆ ಖಾಸಗೀಕರಣ ಎಂಬ ಚೂರಿಯಿಂದ ಮುಖ್ಯಮಂತ್ರಿ ಕೃಷ್ಣ ಈ ಗರ್ಭಕ್ಕೆ ಇರಿದಿದ್ದಾನೆ. ಮುಂದೇನಾಗುವುದೋ ನೋಡಬೇಕಿದೆ.

ಹಲವಾರು ಹಗರಣಗಳ ಮೂಲಕ, ಪಾರಾಗಿ ಬಂದು ಅಧ್ಯಕ್ಷರಾದ ಪಾರಸ್‌ಮಲ್ ಸುಖಾಣಿಯವರು ಮೊದಲು 'ಇಂಡೋಫಿಲ್' ಕಂಪನಿಗೆ ಪರವಾನಿಗೆ ಕೊಟ್ಟಿಲ್ಲ' ಎಂದರು. ಆದರೆ ಇಂಡೋಫಿಲ್ ಕಂಪನಿಯ ಎಮ್.ಡಿ.ಯವರಾದ ಸಂದೀಪ ಲಖ್ಖರ್‌ವರು ಪತ್ರಿಕಾಗೋಷ್ಠಿ ನಡೆಸಿ, 23-1-2003ರಂದು ರಾಜ್ಯ ಸರ್ಕಾರ ಸಂಶೋಧನೆಗೆ ಮತ್ತು ಗಣಿಗಾರಿಕೆಗೆ ಕಂಪನಿಗೆ ಪರವಾನಿಗೆ ಕೊಟ್ಟಿದೆಯೆಂದೂ, ತಾವು 20 ಕೋಟಿ ವೆಚ್ಚದಲ್ಲಿ ಸಂಶೋಧನೆ ನಡೆಸುತ್ತಿದ್ದು ತಮಗೆ 500 ಚ.ಕೀ.ಮೀ. ವ್ಯಾಪ್ತಿಯಲ್ಲಿ ಅವಕಾಶವಿದ್ದು 3 ವರ್ಷದೊಳಗೆ ಸಂಶೋಧನೆ ಕಾರ್ಯ ಮುಗಿಸಿ ನಂತರ ಗಣಿಗಾರಿಕೆಗೆ ಹೋಗುತ್ತೇವೆ ಎಂದರು. ಈ ಗೋಷ್ಠಿ ನಂತರ ಸುಖಾಣಿಯವರು 'ಪ್ರಾಣ ಹೋದರೂ ಸರಿಯೆ ಖಾಸಗಿಯವರಿಗೆ ಬಿಟ್ಟುಕೊಡುವುದಿಲ್ಲ' ಎಂದರು. ಆದರೆ ಮೊದಲು ಪರವಾನಗಿ ಕೊಟ್ಟಿಲ್ಲವೆಂದ ಸುಖಾಣಿಯವರೆ ಈಗ ಪ್ರಾಣ ಹೋಗಲಿ ಎಂದಾಗ ಜನ ನಂಬದೆ ಅವರ ರಾಜೀನಾಮೆಗೆ ಒತ್ತಾಯ ಮಾಡಿದರು.

ಆದರೆ ಖಾಸಗೀಕರಣದ ವಿರೋಧಿ ಅಲೆಯೆ ಎದ್ದು ಬಂದಿತು. ಹಟ್ಟಿಯಲ್ಲಿರುವ ಜನಪರ ಸಂಘಟನೆಗಳೆಲ್ಲಾ ಸೇರಿ 'ಖಾಸಗೀಕರಣ ವಿರೋಧಿ ಸಮಿತಿ' ರಚಿಸಿಕೊಂಡವು. ಇಂಡೋಫಿಲ್ ಕಂಪನಿಗೆ ಒದಗಿಸುತ್ತಿರುವ ಸೌಲಭ್ಯಗಳನ್ನು ರದ್ದುಪಡಿಸಲು ಒತ್ತಾಯ ಹೇರಿದವು. ಎ.ಐ.ಟಿ.ಯು.ಸಿ.ಯು ಲಿಂಗಸೂಗೂರು ಮತ್ತು ರಾಯಚೂರುಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಿ ವಿರೋಧಿಸಿತು. ಸಿಪಿಐ(ಎಂ) ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಪ್ರಚಾರ ಜಾತಾಗಳನ್ನು ಮಾಡಿ ಹಟ್ಟಿಯಲ್ಲಿ ರೈತ ಹೋರಾಟ ಸಮಿತಿ ಚಲೆಜಾವ್ ಚಳುವಳಿ ಹಮ್ಮಿಕೊಂಡಿತು. ಇಂಡೋಫಿಲ್ ಕಂಪನಿಯು ಹಟ್ಟಿ ನಾಗರಿಕ ರೈತ ಹೋರಾಟ ಸಮಿತಿ ಮುಖಂಡರನ್ನು ಸಂಪರ್ಕಿಸಿತು. ಮಳೆ ನೀರಿನ ಸಂರಕ್ಷಣೆ ಮಾಡುವುದಾಗಿ, ಮೆಕಡೆಮಿಯಾ ನೆಟ್ಟ ಸಸಿಗಳನ್ನು ಸಾಮೂಹಿಕವಾಗಿ ಹಾಕಿ ಪರಿಸರ ರಕ್ಷಿಸುವುದಾಗಿ, ಕೇವಲ ಸ್ಥಳೀಯರಿಗೆ ಉದ್ಯೋಗ ಕೊಡುವುದಾಗಿ, ಕುಡಿಯುವ ನೀರಿನ ಸೌಲಭ್ಯ ನೀಡುವುದಲ್ಲದೆ ರಸ್ತೆ ಹಾಗೂ ಚರಂಡಿ ನಿರ್ಮಿಸಿ 'ಮಾದರಿ ಗ್ರಾಮ' ಮಾಡುತ್ತೇವೆಂದೂ ಹಾಗೂ ಸಂಘಕ್ಕೂ ಸಹಾಯ ಮಾಡುವುದಾಗಿ ತಿಳಿಸಿತು.

ಸುಮಾರು ನಾಲ್ಕು ಸಾವಿರ ಕುಟುಂಬಗಳು ನೇರ ಉದ್ಯೋಗ ಹೊಂದಿದ್ದು ಐದಾರು ಸಾವಿರ ಕುಟುಂಬಗಳಿಗೆ ಪರೋಕ್ಷ ಆಶ್ರಯ ಕೊಟ್ಟಿರುವ ಹಟ್ಟಿ ಗೋಲ್ಡ್ ಮೈನ್ಸ್‌ಗೆ ಮಾರಕವಾಗಿ ಬರಲಿರುವ ಇಂಡೋಫಿಲ್ ಕಂಪನಿಯನ್ನು ದೃಢವಾಗಿ ವಿರೋಧಿಸಬೇಕೆಂದು ಹಟ್ಟಿ ನಾಗರಿಕ ರೈತ ಹೋರಾಟ ಸಮಿತಿ ತೀರ್ಮಾನಿಸಿ 15 ದಿವಸದಲ್ಲಿ ಇಂಡೋಫಿಲ್ ಕಂಪನಿ ಹೋಗದಿದ್ದರೆ 'ಚಲೆಜಾವ್' ಚಳುವಳಿ ತೀವ್ರವಾಗಿ ಜಾರಿಗೊಳ್ಳುವುದೆಂದು ಎಚ್ಚರಿಕೆ ನೀಡಿತು. ಪರಿಣಾಮವಾಗಿ ಇಂಡೋಫಿಲ್ ಕಂಪನಿ ತನ್ನ ಕ್ಯಾಂಪ್ ಮುಚ್ಚಿ ಮರಳಿತು. ಜನತೆಯ ಹೋರಾಟಕ್ಕೆ ಜಯಸಿಕ್ಕಿತು. ದೇಶದಲ್ಲೆ ಅತ್ಯಂತ ಪುರಾತನ ಗಣಿಗಳಲ್ಲಿ ಒಂದಾದ ಹಟ್ಟಿ ಗೋಲ್ಡ್ ಮೈನ್ಸ್‌ನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.



ಭೂಮಿ ಒಡಲು ಬಗೆದು ಬಂಗಾರ ಹೆಕ್ಕುವ ಶ್ರಮಿಕರು

ಪ್ರಾಚೀನಕಾಲದ ಗಣಿ

ಡಾ। ರ್‍ಯಾಪ್ಪರವರು ಹಟ್ಟಿಯಲ್ಲಿ ಸಿಕ್ಕ ಕಬ್ಬಿಣದ ಬಾಣಲೆಗಳು, ಕಲ್ಲಿನ ಪೀಠಗಳ, ನೀರತ್ತಲು ಬಳಸಿದ ಮಡಕೆಗಳ ಮೇಲೆ ಸಂಶೋಧನೆ ನಡೆಸಿ ಇವು ಸುಮಾರು ಕ್ರಿಸ್ತಶಕದ ಆರಂಭದ ಕಾಲದವೆಂದು ಕಂಡು ಹಿಡಿದಿದ್ದಾರೆ. ವಿಜಯ ನಗರದ ಅರಸರು ಇಲ್ಲಿಂದ ಚಿನ್ನ ಉತ್ಪಾದಿಸಿ ಒಯ್ಯುತ್ತಿದ್ದರಂತೆ.

1874ರಲ್ಲಿ ಹಟ್ಟಿ ಗ್ರಾಮದ ಅರ್ಧ ಕಿ.ಮಿ. ದೂರದ ಹೊಲವೊಂದರಲ್ಲಿ ಮಿಂಚುವ 'ಬೆಣಚು ಕಲ್ಲು' ದೊರಕಿದಾಗ ಅದನ್ನು ಪರೀಕ್ಷಿಸಿದ 'ಬ್ರೂಸಫುಟ್' ಎಂಬ ತಜ್ಞ ಇಲ್ಲಿ ಅಪಾರವಾದ ಚಿನ್ನದ ನಿಕ್ಷೇಪ ಇರುವುದಾಗಿ ಹೇಳಿದ. 1874ರಿಂದ 1899ರವರೆಗೆ ನಿರಂತರ ಸಂಶೋಧನೆ ಜರುಗಿ 1901ರಲ್ಲಿ 'ನಿಜಾಮಗೋಲ್ಡ್ ಮೈನ್ಸ್' ಆರಂಭವಾಯ್ತು. 1903ರಿಂದ 1920ರವರೆಗೆ ಉತ್ಪಾದನೆ ನಿರಂತರವಾಗಿತ್ತಲ್ಲದೆ ಈ ಅವಧಿಯಲ್ಲಿ 7371 ಕೆ.ಜಿ. ಚಿನ್ನ ಉತ್ಪಾದಿಸಿತು. ನಂತರ ಕೆಲ ತಾಂತ್ರಿಕ ತೊಂದರೆಗಳಿಂದಾಗಿ ಗಣಿ ಮುಚ್ಚಿತು.

ಇದೇ ಅವಧಿಯಲ್ಲಿ ಅಂದರೆ 1891ರಲ್ಲಿ 'ವಂದಲಿ ಗೋಲ್ಡ್ ಮೈನ್ಸ್' ಆರಂಭವಾಗಿ 1898 ರಿಂದ 1900ರ ಅವಧಿಯಲ್ಲಿ ರಾಜ್ಯದಲ್ಲೆ ದಾಖಲಾರ್ಹವಾದ ಚಿನ್ನವನ್ನು ಉತ್ಪಾದಿಸಿತು. ಜತೆಯಲ್ಲೆ 1905ರಲ್ಲಿ 'ತೂಪ್ಪಲದೊಡ್ಡಿ ಗೋಲ್ಡ್ ಮೈನ್ಸ್' ಆರಂಭವಾಗಿ 1908ರವರೆಗೆ ಚಿನ್ನ ಉತಾದಿಸಿತು.

1937-38ರ ಅವಧಿಯಲ್ಲಿ 'ಜಾನಟೇಲರ್ ಗೋಲ್ಡ್ ಮೈನ್ಸ್ ಕಂಪನಿ' ಮತ್ತು 'ಹೈದ್ರಾಬಾದ್ ಗೋಲ್ಡ್ ಮೈನ್ಸ್' ಕಂಪನಿ ಜಂಟಿಯಾಗಿ ವೈಜ್ಞಾನಿಕ ಪದ್ಧತಿಯಲ್ಲಿ ಚಿನ್ನ ಉತ್ಪಾದನೆ ಮಾಡಲು 100 ಮೆಟ್ರಿಕ್ ಟನ್ ಸಾಮರ್ಥ್ಯದ ಅದಿರು ಅರೆವ ಸ್ಥಾವರ ಸ್ಥಾಪಿಸಿದರು. ಇಂದು ಅದರ ಸಾಮರ್ಥ್ಯ ಪ್ರತಿದಿನ ಸರಾಸರಿ 1800 ರಿಂದ 2000 ಟನ್ ಗಳಷ್ಟಕ್ಕೆ ಏರಿರುವುದೊಂದು ಐತಿಹಾಸಿಕ ಬೆಳವಣಿಗೆಯೇ ಸರಿ.

125 ದಶಲಕ್ಷ ಟನ್‌ಗಳಷ್ಟು ಚಿನ್ನದ ನಿಕ್ಷೇಪ ಹೊಂದಿರುವ ಈ ಪ್ರದೇಶದಲ್ಲಿ ಈಗಿನ ವಿಧಾನದಲ್ಲೆ ಉತ್ಪಾದನೆ ಸಾಗಿದರೆ ಇನ್ನೂ 50 ರಿಂದ 60 ವರ್ಷಗಳವರೆಗೆ ಉತ್ಪಾದನೆ ಮಾಡುತ್ತ ಈ ಭಾಗದ ಜನತೆಗೆ ಜೀವನದ ಬೆಳಕು ಕೊಡಬಹುದಾಗಿದೆ. ಅದರ ಬದಲು ಇಂಡೋಫಿಲ್ ಕಂಪನಿಗೆ ಕೊಟ್ಟ ಪರವಾನಿಗೆ ಜಾರಿಯಾದರೆ 10 ರಿಂದ 12 ವರ್ಷದಲ್ಲಿ ನಿಕ್ಷೇಪ ಖಾಲಿಯಾಗಿ ಕೋಲಾರದ ದುರ್ಗತಿ ಇಲ್ಲಿಗೂ ಬರಲಿದೆ. ಚಿನ್ನದ ತತ್ತಿ ಇಡುವ ಕೋಳಿಯನ್ನು ಸಾಕಿ ಸಲುಹಿ ಲಾಭ ಪಡೆಯಬೇಕೆ ಹೊರತು ದುರಾಸೆಯಿಂದ ಎಸ್.ಎಂ. ಕೃಷ್ಣರಂತೆ ಚೂರಿ ಹಾಕುವುದಲ್ಲ.

ರಕ್ಷಕರೇ ಭಕ್ಷಕರಾದಾಗ

ಲಾಭದಲ್ಲಿರುವ ಉದ್ಯಮವೊಂದರ ನಷ್ಟಕ್ಕೆ ಈ ಐ.ಎ.ಎಸ್. ಎಂಬ ಬಿಳಿಯಾನೆಗಳು ಮತ್ತವರ 'ಜೀ ಹೂಜೂರ' ಚೇಲಾಗಳು ಹೇಗೆ ಕಾರಣರಾಗುತ್ತಾರೆಂಬುದಕ್ಕೆ ಈ ಗಣಿಯ ದುರಂತವೆ ಸರಿಯಾದ ಸಾಕ್ಷಿ.

ಗಣಿ ವಿಸ್ತರಣೆಯ ಹೆಸರಲ್ಲಿ 138 ಕೋಟಿ ರೂ ಯೋಜನೆ ಸಿದ್ಧವಾಯ್ತು. ನಿವೃತ್ತಿಯ ಹಂತದಲ್ಲಿದ್ದ ಬಿ.ಜಿ.ಷಾ ಎಂಬ ಭ್ರಷ್ಟನಿಗೆ 2 ವರ್ಷದ ಸೇವಾವಧಿ ವಿಸ್ತರಿಸಿ ಮೇಯಲು ಬಿಡಲಾಯಿತು. ಈತ ಅನವಶ್ಯಕ ಯಂತ್ರೋಪಕರಣಗಳನ್ನು, ವಾಹನಗಳನ್ನು ಖರೀದಿಸಿದ. ಅಲ್ಲದೆ ಲಾಭದಾಯಕವಲ್ಲದ ಮಂಗಳೂರು, ಚಿತ್ರದುರ್ಗ, ಕ್ಯಾನಿಹಾಳ, ಬುದ್ದಿನ್ನಿ, ಊಟಿಗಳಲ್ಲಿ ಹಣ ಹೂಡಿ

ಗುಡುಗುಂಟಿ ದೊರೆ ತೋರಿದ ಕರುಣೆ

ಗುರುರಾಜ ನಾಯಕರೆಂಬ ಸ್ಥಳೀಯರು ಕಂಪನಿಯ ಅಧಿಕಾರ ವಹಿಸಿಕೊಂಡಾಗ ಕಾರ್ಮಿಕರು ಖುಷಿಪಟ್ಟರು. ಎಷ್ಟಾದರೂ ನಮ್ಮ ಗುಡುಗುಂಟಿಯ ದೊರೆಗಳು ನಮಗೆ ಕಷ್ಟಗಳನ್ನು ಕೊಡಲಾರರೆಂದು ನಂಬಿದರು. ಆದರೆ ಆದದ್ದೇ ಬೇರೆ. ಸ್ಥಳೀಯ ಪರಿಸ್ಥಿತಿ ಗೊತ್ತಿದ್ದ ನಾಯಕರು ತಾವೆಷ್ಟೆ ದೌರ್ಜನ್ಯ ಎಸಗಿದರೂ ಸಹ ಯಾರೂ ಸೊಲ್ಲೆತ್ತದಂತೆ ತಂತ್ರ ರೂಪಿಸಿದರು. ಪ್ರಶ್ನೆ ಕೇಳಿದವರನ್ನು ಚಿತ್ರದುರ್ಗದ ಓನಕೆ ಓಬವ್ವನಿಗೆ ಇಲ್ಲವೆ ಊಟಿಯ ದುರಗವ್ವನಿಗೆ ಒಪ್ಪಿಸಿದರು. ಚುನಾಯಿತ ಎ.ಐ.ಟಿ.ಯು.ಸಿ. ಹೋರಾಟದ ಅಸ್ತ್ರ ಕೆಳಗಿಟ್ಟು ನಿಜಾಮಶಾಹಿ 'ಜಿ ಹೂಜೂರು' ಮಟ್ಟಕ್ಕೆ ಇಳಿಯಿತು. ಇದೆ ಸಮಯದಲ್ಲಿ ಸ್ಥಳೀಯರನ್ನು ನಿರ್ಲಕ್ಷಿಸಿ ಮನಬಂದವರನ್ನು ನೌಕರಿಗೆ ತೆಗೆದುಕೊಳ್ಳಲಾಯ್ತು. ಕಂಪನಿಗಾಗಿ ಭೂಮಿ ಕಳೆದುಕೊಂಡವರನ್ನು ಮತ್ತು ಸ್ಥಳೀಯ ನಿರುದ್ಯೋಗಿಗಳನ್ನು ನಿರ್ಲಕ್ಷಿಸಲಾಯ್ತು.

ನೊಂದ ಭೂಮಿ ಕಳೆದುಕೊಂಡವರು ಮತ್ತು ಸ್ಥಳೀಯರು ಸೇರಿ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕತ್ವದಲ್ಲಿ ಹಟ್ಟಿ ನಾಗರಿಕ ರೈತ ಹೋರಾಟ ಸಮಿತಿ ರಚಿಸಿಕೊಂಡಿತು. ಕಾ। ಮಲ್ಲಯ್ಯ ಜಾಲಹಳ್ಳಿಯವರನ್ನು ಗೌರವಾಧ್ಯಕ್ಷರನ್ನಾಗಿ ಆರಿಸಲಾಯಿತು. ಕಂಪನಿಯ ಮುಂದೆ ಎತ್ತು-ಬಂಡಿ ಒಯ್ದು ಮಾಡಿದ ಪಿಕೆಟಿಂಗ್ ಹೋರಾಟ ಆಡಳಿತ ಮಂಡಳಿಯನ್ನು ಬಗ್ಗಿಸಿತು. ಈ ಹೋರಾಟಕ್ಕೆ ಜನತೆಯ, ಕಾರ್ಮಿಕರ ಹರ್ಷದ ಹಾರೈಕೆ ಸಿಕ್ಕಿತು. ಹೋರಾಟ ಹಟ್ಟಿಗಷ್ಟೆ ಸೀಮಿತವಾಗದೆ ಲಿಂಗಸಗೂರಿಗೆ, ರಾಯಚೂರಿಗೆ, ಬೆಂಗಳೂರವರೆಗೆ ಹೋಗಿ ಬರುವಂತಾಯಿತು. ಈ ಸಂದರ್ಭದಲ್ಲಿ ಸಂಗಾತಿಗಳಾದ ಯು. ಬಸವರಾಜ, ಎಸ್.ವೈ. ಗುರುಶಾಂತ್, ಪ್ರಸನ್ನ ಕುಮಾರ್, ಜಿ.ಸಿ. ಬಯ್ಯಾರೆಡ್ಡಿ ಮತ್ತು ಜಿ.ಎನ್. ನಾಗರಾಜರವರು ಮಾಡಿದ ಸಹಾಯ ಮತ್ತು ನೀಡಿದ ಮಾರ್ಗದರ್ಶನವನ್ನು ಹೋರಾಟಗಾರರು ಇಂದಿಗೂ ನೆನೆಯುತ್ತಾ ಇದ್ದಾರೆ. ಇಂದು ನೂರಾರು ಜನ ನೌಕರಿಗೆ ಹೋಗುವ ಅವಕಾಶ ಸಿಕ್ಕು ಹೋರಾಟಕ್ಕೆ ಜಯವಾಗಿದೆ.

ಹಟ್ಟಿ ನಾಗರಿಕ ರೈತ ಹೋರಾಟ ಸಮಿತಿಯ ಪದಾಧಿಕಾರಿಗಳು

ಗೌರವಾಧ್ಯಕ್ಷರು : ಮಲ್ಲಯ್ಯ ಜಾಲಹಳ್ಳಿ
ಅಧ್ಯಕ್ಷರು : ಸಿದ್ರಾಮಪ್ಪ ತಾಳಿಕೋಟಿ
ಉಪಾಧ್ಯಕ್ಷರು : ವೆಂಕನಗೌಡ ಅನ್ವರಿ, ಅಮರಪ್ಪ, ದೊಡ್ಡಕನಕಪ್ಪಗೌಡ;
ಪ್ರಧಾನ ಕಾರ್ಯದರ್ಶಿ: ವೆಂಕಟೇಶ್ ಬಾದರದಿನ್ನಿ
ಸಹಕಾರ್ಯದರ್ಶಿಗಳು : ಅಮರೇಶ ಗಲಗ ಶಿವಪುತ್ರಪ್ಪ
ಅಮರೇಶ್ ವೀರಾಪುರ.
ಖಜಾಂಚಿ : ಲಿಂಗಣ್ಣ ಹೊಳ್ಳಾಟಿ.



ಷ್ಟಕ್ಕೆ ಅಸ್ತಿಭಾರ ಹಾಕಿದ. ಪೈಪ್ ಖರೀದಿಯಲ್ಲಿ, ೋಹ ವಿಭಾಗದಲ್ಲಿ ಬಾಲ್ ಮಿಲ್ಲುಗಳ ಳವಡಿಕೆಯಲ್ಲಿ, ಟ್ಯೂಬ್ ಮಿಲ್ಲು, 4 ಮತ್ತು 5 ಲ್ಲಂಜ್ ತಪ್ಪಾಗಿ ಕೊಡಿಸಿರುವಲ್ಲಿ ನಷ್ಟಗಳಾಗಿವೆ. ಂದಿಗೂ 25 ಲಕ್ಷ ಬೆಲೆ ಬಾಳುವ 'ಮುಸ್ಲೆಸ್ಲೈಕ್ಲಾನ್' ಂತ್ರ ಮತ್ತು 4ಲಕ್ಷ ಬೆಲೆಬಾಳುವ 'ಫಲ್ಯಾನ ತೈಲ' ರ್ಥವಾಗಿ ಬಿದ್ದಿರುವುದನ್ನು ಕಾಣಬಹುದು. ಂಗೆಯೆ ಶ್ರೀ ವಾಸ್ತವರವರು ಖರೀದಿಸಿದ 10 ಕ್ಷ ಮೌಲ್ಯದ ಯಂತ್ರಗಳು ಸಹ. ಇಲ್ಲಿಯು ಷ್ಟಾತಿರೇಕ ಪ್ರಕರಣವೊಂದಿದೆ. ಪಿ.ಜಿ.

ಕು ಬೆಳಗೀತೆ ?

ಟೀಲನೆಂಬ ರಕ್ಷಣಾಧಿಕಾರಿ ಭಕ್ಷಕನಾಗಿ ಬಂಗಾರ ಯುವಾಗ ರೆಡ್‌ಹ್ಯಾಂಡಾಗಿ ಸಿಕ್ಕ ಬಿದ್ದಿದ್ದು ಮತ್ತು ನೂಸು ಸಲಹೆಗೆ 16 ಲಕ್ಷ ಸಂಭಾವನೆ ಕೊಟ್ಟು ಹಾಲೆಕ್ಕಪಾಲಕರಿಂದ ಉಗಿಸಿಕೊಂಡದ್ದು.

"ಕಂಪನಿಯ ನಷ್ಟಕ್ಕೆ ಈ ಹಿಂದೆ ಯಂತ್ರಗಳ ರೀದಿಯಲ್ಲಾದ ಅವ್ಯಾಹಾರವೆ ಕಾರಣ" ಎಂದು ಪನಿಯ ಅಧ್ಯಕ್ಷರಾದ ಸುಖಾಣಿಯುವರೆ ಳಿದ್ದಾರೆ. ಹಾಗಾದರೆ ಭ್ರಷ್ಟರನ್ನು ಅಧ್ಯಕ್ಷರು ಸುವರೆ, ಕಾದು ನೋಡಬೇಕಾಗಿದೆ.

ಂದಲಗೂಡಾದ ಆಡಳಿತ

ಗಣಿಯ ಅಧಿಕಾರಿಗಳು ಪರಸ್ಪರ ವಿರೋಧ ರ್ಮಾನ ಕೈಗೊಳ್ಳುವುದು ಇಲ್ಲವೆ ಹೇಳಿಕೆ ಡುವುದು ಸರ್ವೇಸಾಮಾನ್ಯ. ಉದಾಹರಣೆಗೆ ಸಚಿವ ವಿ. ಮುನಿಯಪ್ಪ ಗಣಿ ನಷ್ಟದಲ್ಲಿದೆ' ಂದು ವಿಧಾನಪರಿಷತ್ತಿನಲ್ಲಿ ಹೇಳಿಕೆ ಕೊಟ್ಟಾಗಲೆ ಕೆ.ಎಲ್. ನೇಗಿ 'ಗಣಿ ಲಾಭದಲ್ಲಿದೆ' ಎಂದರು. 01ರಲ್ಲಿ ಆಡಳಿತ ಮಂಡಳಿ ವಾರ್ಷಿಕ ದಿಯಲ್ಲಿ 'ಕಳೆದ 3 ವರ್ಷಗಳಿಂದ 25.46 ೀಟಿ ನಷ್ಟವಾಗಿದೆ'ಯೆಂದು ವಿವರ ಪ್ರಕಟಿಸಿತು. ರೆ ಅಧಿಕಾರಿಗಳು 6-10-2001 ರಂದು '15 ೀಟಿ ಲಾಭವಾಗಿದೆ'ಯೆಂದು ಹೇಳಿಕೆಯಿತ್ತರು. ಹಿಂದೆ ಗುರುರಾಜನಾಯಕರೆಂಬ ಅಧಿಕಾರಿ ನಿವೃತ್ತಿಗೆ 3 ದಿನ ಇರುವಾಗ 30 ಜನರನ್ನು ಮಕ ಮಾಡಿದರು. ಆದರೆ ಕಾನೂನಿರುವುದು ಯ ಅಧಿಕಾರಿಗಳು ತಮ್ಮ ನಿವೃತ್ತಿ ಮೂರು ಗಳಿರುವಾಗ ಪ್ರಮುಖ ನಿರ್ಧಾರ ಳ್ಳಬಾರದೆಂದು. ಆದರೆ ನಾಯಕರು ಕಾನೂನು ನಡೆದರು. ಕೆ.ಎಲ್. ನೇಗಿ ಆ ನೇಮಕವನ್ನು ದ್ದುಗೊಳಿಸಿದರು. ಇಂಥಹ ಕಾನೂನು ರುವಿಕೆಗೆ, ಗೊಂದಲಸೃಷ್ಟಿಗೆ ಇತಿ ಮಿತಿ ುದಿಲ್ಲ. ತಮ್ಮ ಮನಬಂದಂತೆ ನಡೆದುಕೊಳ್ಳುವ ಕಾರಿಗಳಾದ ಕಿಶೋರಕುಮಾರ, ಬಸವರಾಜ ಡ್ಡಮನಿ, ಕೆ.ಜೆ. ಪೀಟರ್, ಬಿ.ಕೆ. ಸಿಲ್ವಾ, . ಜಾನವೆಸ್ಲಿ ಇತ್ಯಾದಿಗಳಿದ್ದಾರೆ. ಅಧ್ಯಕ್ಷರು ಂಗೆ 'ದಕ್ಷತೆಯ ಪಾಠ ಕಲಿಸುವರೆ?

ಡುಗ ಬೆವರ ಬಸಿದು ಬಡವರಾದವರು

ಕಂಪನಿಯ ದಾಖಲಾರ್ಹ ಲಾಭಕ್ಕೆ ಕಾರ್ಮಿಕರ ವೆ ಕಾರಣ. ಲಾಭದಲ್ಲಿ ಪ್ರತಿ ಕಾರ್ಮಿಕನಿಗೂ 6000 ರೂ ನಂತೆ ಬೋನಸ್ ಕೊಡಲಾಗುವುದು' ಎಂದು ಅಧ್ಯಕ್ಷರು ಪ್ರಕಟಿಸಿದ್ದಾರೆ.

ಕಳೆದ 6 ವರ್ಷಗಳಿಂದ ಬೋನಸ್, ಪಿ.ಎಲ್., ಸಿಕ್‌ಲೀವ್, ಎಲ್.ಟಿ.ಸಿ., ಇನ್ಸೆಂಟಿವ್ ಇವಾವು ಇಲ್ಲದೆ ಕಂಪನಿ ಮುಚ್ಚಬಾರದೆಂಬ ಉದ್ದೇಶದಿಂದ ಹಲ್ಲುಕಚ್ಚಿ ದುಡಿದವರು ಕಾರ್ಮಿಕರು. ಉತ್ಪಾದನೆ ಹೆಚ್ಚಿಸುವಾಗಲೆ 500ಕ್ಕೂ ಹೆಚ್ಚು ಕಾರ್ಮಿಕರನ್ನು ಸ್ವಯಂ ನಿವೃತ್ತಿಯಡಿ ಕಳಿಸಲಾಯ್ತು. ನೂರಕ್ಕೂ ಹೆಚ್ಚು ಕಾರ್ಮಿಕರನ್ನು ಶಿಸ್ತಿನ ಹೆಸರಲ್ಲಿ ಅಮಾನತ್ತಿಗೆ ಒಳಪಡಿಸಲಾಯ್ತು. ಕಾರ್ಮಿಕರ ಸಂಖ್ಯೆ ಕಡಿಮೆಗೊಳಿಸಿದರೂ ಬಿಡದೆ ಉತ್ಪಾದನೆ ಹೆಚ್ಚಿಸಿದ ಕಾರ್ಮಿಕರು ಅಭಿನಂದನಾರ್ಹರು.


ಇಷ್ಟಾಗಿಯೂ ಕಾರ್ಮಿಕರಿಗೆ ಸರಿಯಾದ ವಸತಿಯಿಲ್ಲ. ಹೊರೆಯಾದ ವಿದ್ಯುತ್ ಬಿಲ್, ಸರಿಯಾದ ವಿದ್ಯಾಭ್ಯಾಸವಿಲ್ಲ. ಆಸ್ಪತ್ರೆ ಮತ್ತು ಕ್ಯಾಂಟಿನ್‌ಗಳು ನರಕಸದೃಶ್ಯವಾಗಿವೆ. ಅಧ್ಯಕ್ಷರು ಈ ಕಡೆ ತೀವ್ರ ಗಮ ಹರಿಸಬೇಕಿದೆ. ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಬೇಕೆಂಬ ಕಾರ್ಮಿಕರ ಬಹುದಿನದ ಬಯಕೆಯನ್ನು ಪಾರದರ್ಶಕ ಆಡಳಿತಗಾರನೆಂಬ ಹೆಸರು ಸಂಪಾದಿಸಹೊರಟ ಅಧ್ಯಕ್ಷರು ಈಡೇರಿಸಬೇಕಿದೆ.

ತ್ಯಾಗದ ಬೆಲೆ

70 ಮನೆಗಳ ಹಳ್ಳಿಯನ್ನು 2694 ಎಕರೆ ಜಮೀನನ್ನು ಕಂಪನಿಗಾಗಿ ತ್ಯಾಗ ಮಾಡಿದ ಜನತೆ ಹಟ್ಟಿ ಗ್ರಾಮದವರು. ಇವರು ಕೆ.ಎಲ್. ನೇಗಿಗೆ ತಮ್ಮ ಗೋಳು ಹೇಳಲು ಹೋದರೆ ಕಂಪನಿಗೂ ಗ್ರಾಮಕ್ಕೂ ಸಂಬಂಧವಿಲ್ಲವೆಂಬ ಉತ್ತರ. ಸಿಟ್ಟಾದ ರೈತ ನಾಗರಿಕರು 'ಹಟ್ಟಿ ನಾಗರಿಕ ರೈತ ಹೋರಾಟ ಸಮಿತಿ' ರಚಿಸಿಕೊಂಡು ಕುಡಿಯುವ ನೀರು, ಆಸ್ತಿ ಕಳೆದುಕೊಂಡವರಿಗೆ ಉದ್ಯೋಗ, ಸ್ಥಳೀಯರಿಗೆ ಉದ್ಯೋಗದಲ್ಲಿ ಶೇ. 50 ಮಿಸಲಾತಿಯಂತಹ ಬೇಡಿಕೆಗಳಿಗಾಗಿ ಹೋರಾಡಿ ಈಡೇರಿಸಿಕೊಂಡಿದ್ದಾರೆ. ಆದರೆ ಇಂದಿಗೂ ಸೈನೆಡ್ ಧೂಳು, ನೀರಿನಿಂದ ತೊಂದರೆಗೊಳಗಾದವರಿಗೆ ಪರಿಹಾರ ಇಲ್ಲವಾಗಿದೆ.

ಜನ ಪ್ರತಿನಿಧಿಗಳು

ಜಿಲ್ಲೆ ಹೆಮ್ಮೆಯ ತಾಣವಾದ ಗಣಿಯಲ್ಲಿ ಇಷ್ಟೆಲ್ಲಾ ಅವಾಂತರಗಳಾದಾಗ್ಯೂ ಜನಪ್ರತಿನಿಧಿಗಳು ಗಮನ ಹರಿಸಲಿಲ್ಲ. ಖಾಸಗಿಕರಣದ ವಿರುದ್ಧ ಚಕಾರವೆತ್ತಲಿಲ್ಲ. ಕೆಲಸ ಕಳೆದುಕೊಂಡ ಕಾರ್ಮಿಕರು, ಆಸ್ತಿ ಕಳೆದುಕೊಂಡವರು, ಸ್ಥಳಿಯರು ಉದ್ಯೋಗಕ್ಕಾಗಿ ಹೋರಾಡುತ್ತಿರುವಾಗ ಹೊರಳಿ ನೋಡದ ಇವರು ತಮ್ಮ ಹಿಂಬಾಲಕರಿಗೆ ಹಿಂಬಾಗಿಲ ಮುಖಾಂತರ ನೌಕರಿಗೆ ಕಳಿಸುತ್ತಿದ್ದರು. ಆಡಳಿತದಲ್ಲಿ ಇಂಗ್ಲೀಷ್, ದೌರ್ಜನ್ಯ, ಪರಿಸರ ಹಾಳಾಗುವಿಕೆ, ಕಾರ್ಮಿಕರ ಹೀನ ಸ್ಥಿತಿ, ಗ್ರಾಮಸ್ಥರ ತೊಂದರೆ, ಅಧಿಕಾರಿಗಳ ಭ್ರಷ್ಟದುರಾಡಳಿತ ಯಾವುದಕ್ಕೂ ಸ್ಪಂದಿಸದಂತ ಜನಪ್ರತಿನಿಧಿಗಳು ಇಂಥವರ ನಡುವೆ ಬಂಗಾರ ಬಗೆವವರ ಬದುಕಲ್ಲಿ ಬೆಳಕು ಕಂಡಿತೆ ಎಂಬಂತಾಗಿದೆ.



ಹೊಂಡಕ್ಕೆ ನುಗ್ಗಿದ ಸಯನೈಡ್ ನೀರು ಪ್ರದೇಶಕ್ಕೆ ರೈತರ ನಾಯಕರ ಭೇಟಿ. ನಿಯೋಗದಲ್ಲಿ ಸಿ.ಲಿಂಗಪ್ಪ, ಮಲ್ಲಯ್ಯ, ಜಾಲಹಳ್ಳಿ, ಯು.ಬಸವರಾಜು, ಶಿವನಾಂದ ಇನ್ನಿತರರು

ವ್ಯಥೆಯೇ? ಇಂದಿನ ಕಥೆಯೇ?

ಹಟ್ಟಿ ಚಿನ್ನದ ಗಣಿ ಇಂದು ರಾಷ್ಟ್ರದಲ್ಲಿ ಚಿನ್ನ ಉತ್ಪಾದಿಸುವ ಏಕೈಕ ಗಣಿಯಾಗಿದೆ. 2002-2003ರ ಸಾಲಿನಲ್ಲಿ 2708 ಕೆ.ಜಿ. ಚಿನ್ನ ಉತ್ಪಾದಿಸುವ ಮೂಲಕ ದೇಶದ ಕೈಗಾರಿಕಾ ಭೂಪಟದಲ್ಲಿ ಐತಿಹಾಸಿಕ ದಾಖಲೆ ನಿರ್ಮಿಸಲಾಗಿದೆ. ಆದರೆ ಈ ದಾಖಲೆ ನಿರ್ಮಾಣದ ಹಿಂದೆ ಏಳು ಬೀಳಿನ ಕಥೆಯೆ ಇದೆ.

1996ರವರೆಗೆ ಲಾಭದಾಯಕವಾಗಿದ್ದ ಗಣಿ ಅಂತರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಬೆಲೆ ಕುಸಿತಗೊಂಡಾಗ ನಷ್ಟದ ದಾರಿ ಹಿಡಿಯಿತು. ಜತೆಗೆ ಈ ಅವಧಿಯಲ್ಲಿದ್ದ ಅಧಿಕಾರಿಗಳು ಅನುಸರಿಸಿದ ತಪ್ಪು ನೀತಿಗಳು ಕಂಪನಿಯ ನಷ್ಟವನ್ನು ಹೆಚ್ಚಿಸಿದವು.

1999-2000 ರಲ್ಲಿ 8.51 ಕೋಟಿ ರೂ. ನಷ್ಟ
2000-2001 ರಲ್ಲಿ 6.33 ಕೋಟಿ ರೂ. ನಷ್ಟ
2001-2002 ರಲ್ಲಿ 10.32 ಕೋಟಿ ರೂ. ನಷ್ಟ

ಹೀಗೆ ನಿರಂತರ ನಷ್ಟದಲ್ಲಿ ಸಾಗಿದ ಗಣಿ ಮುಚ್ಚಿ ಹೋಗುವ ಆತಂಕದಲ್ಲಿತ್ತು. ಆದರೆ ಕಾರ್ಮಿಕವರ ತ್ಯಾಗಮಯ ದುಡಿತದಿಂದಾಗಿ ಉತ್ಪಾದನೆ ದ್ವಿಗುಣಗೊಳಿಸಲು ಸಾಧ್ಯವಾಯ್ತು.

1999-2000 ರಲ್ಲಿ 2.47 ಲಕ್ಷಟನ್ ಅದಿರಿನಲ್ಲಿ 1266 ಕೆ.ಜಿ ಚಿನ್ನ
2000-2001 ರಲ್ಲಿ 2.60 ಲಕ್ಷಟನ್ ಅದಿರಿನಲ್ಲಿ 1614. ಕೆ.ಜಿ
2001-2002 ರಲ್ಲಿ 4.09 ಲಕ್ಷಟನ್ ಅದಿರಿನಲ್ಲಿ 2333 ಕೆ.ಜಿ.
2002-2003 ರಲ್ಲಿ 4.60 ಲಕ್ಷಟನ್ ಅದಿರಿನಲ್ಲಿ 2708 ಕೆ.ಜಿ. ಚಿನ್ನ ಉತ್ಪಾದಿಸುವ ಮೂಲಕ ಕಂಪನಿಗೆ 2002-03 ರಲ್ಲಿ 40 ಕೋಟಿ ರೂ. ಲಾಭ ಬರುವಂತಾಯಿತು.

ಪ್ರಸ್ತುತ ಪ್ರತಿಟನ್ ಅದಿರಿಗೆ 6 ರಿಂದ 8 ಗ್ರಾಂ ಚಿನ್ನ ಬರುತ್ತಿದ್ದು ಪ್ರತಿದಿನ ಸರಾಸರಿ 2100 ಟನ್ ಅದಿರಿನ ಮೂಲಕ 8 ಕೆಜಿ ಚಿನ್ನ ಉತ್ಪಾದಿಸಲಾಗುತ್ತಿದೆ. 2003-04ಕ್ಕೆ 3016 ಕೆ.ಜಿ. ಚಿನ್ನ ಉತ್ಪಾದಿಸುವ ಗುರಿ ಹೊಂದಿದ್ದು 150 ಕೋಟಿಯ ಕ್ರಿಯಾಯೋಜನೆ ರೂಪಿಸಲಾಗಿದೆ. ಇದು ಸಾಧ್ಯವಾಗಲು ಈಗಿರುವ ಗಣಿಯ ಆಳವನ್ನು 2200 ಅಡಿಯಿಂದ 2800 ಅಡಿಗೆ ವಿಸ್ತರಿಸಬೇಕಿದೆ.

ಅಲ್ಲದೆ ಗಣಿಯ ಉತ್ತರ ಭಾಗದಲ್ಲಿ 'ಬಂಗಾರದ ದಾರ' (ರಿಚ್‌ಓರ್) ಇದ್ದುದನ್ನು ಕಂಪನಿಯ ಸಂಶೋಧಕರು ಹಲವು ವರ್ಷಗಳ ಹಿಂದೆಯೆ ಕಂಡುಹಿಡಿದಿದ್ದರು. ಈ ಭಾಗದಲ್ಲಿ ಗಣಿಗಾರಿಕೆ ಆರಂಭವಾದಾಗ ನಂಬಲಸಾಧ್ಯವಾದ ಲಾಭ ಸಿಗಲಿದೆ. ಆದರೆ ಈ ಭಾಗವನ್ನೆ ಕೃಷ್ಣ ಸರ್ಕಾರ ಆಸ್ಟ್ರೇಲಿಯಾದ ಇಂಡೋಫಿಲ್ ಕಂಪನಿಗೆ ಕೊಟ್ಟಿರುವುದು ಸಾರ್ವತ್ರಿಕ ಆತಂಕಕ್ಕೆ ಕಾರಣವಾಗಿದೆ.



ವಿದ್ಯುತ್ ಖರೀದಿ ದರ

(2002 ರಲ್ಲಿ ಕೆ.ಪಿ.ಟಿ.ಸಿ.ಎಲ್ - ಕೆ.ಇ.ಆರ್.ಸಿ ಗೆ ನೀಡಿದ ಮಾಹಿತಿ ಯಂತೆ)

ಜಲವಿದ್ಯುತ್ - ಪ್ರಮುಖ ಯೋಜನೆಗಳದ್ದು ಮಾತ್ರ

	1 ಯೂನಿಟ್‌ಗೆಖರೀದಿ	ಮಾಡಿದ ವಿದ್ಯುತ್ - ದಶಲಕ್ಷ ಯೂನಿಟ್
ಶರಾವತಿ	12.6 ಪೈಸೆ	4541
ಲಿಂಗನಮಕ್ಕಿ	21.16	190
ಕಾಳಿನದಿ	35.60	2144
ಸುಪಾ	35.61	328
ವರಾಹಿ	56-0	924
ಕದ್ರಾ	150-61(ರೂ. 1.5061)	244
ಕೊಡಸಳ್ಳಿ	122.66	248
ಗೇರುಸೊಪ್ಪ	273-0 (ರೂ 2-73)	633
ಸರಾಸರಿ	49-33	
ಶಾಖೋತ್ಪನ್ನ		
ರಾಯಚೂರು - ಘಟಕ	146.68 112	2712
3	173.07	1402
4	269.75	1388
5 ಮತ್ತು 6	252-0	2788
ಸರಾಸರಿ	207.12	

ಕೆ.ಪಿ.ಸಿ (ಸರಕಾರಿ ಉದ್ದಿಮೆ)ಯಿಂದ ಖರೀದಿಸಿದ ಸರಾಸರಿ ವೆಚ್ಚ

ಕೇಂದ್ರ ಸರಕಾರದ ಯೋಜನೆಗಳು

ಎನ್.ಟಿ.ಪಿ.ಸಿ	177.61	3024
ಎನ್.ಎಲ್.ಸಿ (ನೈವೇಲಿ)	164.05	852
	218.3	1080
	375.0	482
MAPS (ಕಲ್ಪಕಂ)	232.59	324
ಕೈಗಾ	322.79	648

ಖಾಸಗಿ ಕಂಪನಿಗಳಿಂದ

ತಣ್ಣೀರು ಬಾವಿ	481.13	1560
ಟಾಟಾ	433.25	551
ರಾಯಲಸೀಮಾ	407.35	
ಜಿಂದಾಲ್	277.9	730

ತಣ್ಣೀರು ಬಾವಿ ವಿದ್ಯುತ್ ಕಂಪನಿಗೆ ಖರೀದಿಸಿದ ವೆಚ್ಚವಲ್ಲದೆ ನಿಗದಿತ ಶುಲ್ಕದ ಹೆಸರಿನಲ್ಲಿ ಈ ಕೆಳಗಿನ ವೆಚ್ಚವನ್ನು ನ್ಯಾಯಮಂಡಳಿ ಆದೇಶದಂತೆ ಇತ್ತೀಚೆಗೆ ಹೆಚ್ಚುವರಿ ಪಾವತಿ ಮಾಡಲಾಗಿದೆ.

ಆರ್ಥಿಕ ವರ್ಷ	
02	113-50 ಕೋಟಿ ರೂ
03	158.10 ಕೋಟಿ ರೂ.
04(ಅಂದಾಜಿಸಿದ)	147-34
ಬಡ್ಡಿ	34.10
ಒಟ್ಟು	453.04

ಈ ನ್ಯಾಯಮಂಡಳಿಯ ಆದೇಶವನ್ನು ತಿರಸ್ಕರಿಸದೆ ಹೋದಲ್ಲಿ ಮುಂದಿನ 4 ವರ್ಷಗಳಲ್ಲಿ ಪ್ರತಿವರ್ಷ ಸಾಧಾರಣ 150 ಕೋಟಿ ರೂ.ನಂತೆ 600 ಕೋಟಿ ತೆರಬೇಕಾಗುತ್ತದೆ. ಈ ಆಧಾರದಲ್ಲಿ ಪ್ರತಿ ಯುನಿಟ್ಟಿಗೆ ರೂ.8ಕ್ಕಿಂತಲೂ ಅಧಿಕ ವೆಚ್ಚವನ್ನು ತೆರಬೇಕಾಗುತ್ತದೆ.

ನೀರು ಸರಬರಾಜು ಸಮಸ್ಯೆ: ಖಾಸಗೀಕರಣ ಪರಿಹಾರವೇ?

ನೀರಿನ ಕೊರತೆಯನ್ನು ನೀಗಿಸಲು ಇರುವ ಒಂದೇ ಪರಿಹಾರೋಪಾಯವೆಂದರೆ ಅದರ ಖಾಸಗೀಕರಣ ಎನ್ನುತ್ತಾರೆ ಆಳುವವರು. ಅದಕ್ಕಾಗಿ ಹಣ ಹಿಡಿದು ಹಣಕಾಸು ಸಂಸ್ಥೆಗಳು. ನೀರಿನ ಖಾಸಗೀಕರಣಕ್ಕೀಡಾದ ತಮಿಳುನಾಡಿನ ಪಟ್ಟಣದ ಅನುಭವವೇನು?

ಜಾಗತೀಕರಣ-ಉದಾರೀಕರಣದ ಬಿರುಗಾಳಿ ಪ್ರಾರಂಭವಾದ ನಂತರ ನೀರು, ವಿದ್ಯುತ್, ಸಾರಿಗೆ ಮುಂತಾದ ಜೀವನಾವಶ್ಯಕ ಸೌಲಭ್ಯಗಳನ್ನು ಒದಗಿಸುವಲ್ಲಿ ಸಮಸ್ಯೆಗಳುಂಟಾದಾಗ ಕೇಂದ್ರ ಸರಕಾರವಿರಲಿ ಅಥವಾ ರಾಜ್ಯ ಸರಕಾರಗಳಿರಲಿ ತಮ್ಮ ಜವಾಬ್ದಾರಿಯಿಂದ ಜಾರಿಕೊಳ್ಳಲು ಮತ್ತು ಜಾಗತಿಕ ಬ್ಯಾಂಕಿನ ಶರತ್ತುಗಳಿಗೆ ಮಣಿದು ಈ ಸೌಲಭ್ಯಗಳ ಖಾಸಗೀಕರಣಕ್ಕೆ ತರಾತುರಿಯಿಂದ ಮತ್ತು ವಿವೇಚನಾ ರಹಿತವಾಗಿ ಮುಂದಾಗುತ್ತಿರುವುದು ದುರಂತದ ಸಂಗತಿ.

ತಮಿಳುನಾಡಿನ ತಿರುಪುರ ಪಟ್ಟಣ ಸಿದ್ಧ ಉಡುಪು ತಯಾರಿಸುವ ಒಂದು ಪ್ರಮುಖ ಕೇಂದ್ರ. ಅಲ್ಲಿರುವ ಸುಮಾರು ನಾಲ್ಕು ಸಾವಿರ ಕಾರ್ಖಾನೆಗಳಲ್ಲಿ ಸುಮಾರು 3 ಲಕ್ಷ ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಹಳ್ಳಿಗಳಿಂದ ವಲಸೆ ಬಂದವರು.

ಇಲ್ಲಿ ಜನರಿಗೆ ನಗರಪಾಲಿಕೆಗೆ ಬದಲಾಗಿ ಖಾಸಗೀ ವಿದೇಶಿ ಸಂಸ್ಥೆಯೊಂದರಿಂದ ನೀರು ಸರಬರಾಜು ಯೋಜನೆ ತಯಾರಾಗಿದೆ. ಈ ಯೋಜನೆಯಡಿ 1 ಶತಕೋಟಿ ಡಾಲರ್ ಉದ್ದಿಮೆ 115 ದಶಲಕ್ಷ ಲೀಟರ ನೀರು ಪಡೆಯಲಿದೆ. ತಿರುಪುರ ಮುನಿಸಿಪಾಲಿಟಿಗೆ (ಅಲ್ಲಿ 60 ಸಾವಿರ ಕೊಳಚೆ ಪ್ರದೇಶ ನಿವಾಸಿಗಳಿದ್ದಾರೆ) 26 ದಶಲಕ್ಷ ಲೀಟರ್ ನೀರು ಲಭ್ಯವಾಗುತ್ತದೆ. ಹಾಗೂ ಸುತ್ತಮುತ್ತಲಿರುವ 792 ಗ್ರಾಮೀಣ ವಸತಿಗಳಿಗೆ 36 ದಶಲಕ್ಷ ಲೀಟರ್ ನೀರು ದೊರೆಯಲಿದೆ. ಸ್ಥಳೀಯ ನಿವಾಸಿಗಳ ನೀರಿನ ಅವಶ್ಯಕತೆಯನ್ನು ಗಮನಿಸಿದಾಗ ಈ ರೀತಿ ನೀರಿನ ಹಂಚಿಕೆ ಅವರ ಅವಶ್ಯಕತೆಗೆ ಪ್ರತಿಕೂಲವಾಗಿದೆ. ಅಲ್ಲಿಯ ಕಾರ್ಮಿಕನೊಬ್ಬನ ಪ್ರಕಾರ ಈಗಾಗಲೇ ಅಲ್ಲಿ ಒಂದು ಬಕೆಟ್ ನೀರಿಗೆ 3 ರೂಪಾಯಿ ತೆರಬೇಕಾದ ಪರಿಸ್ಥಿತಿ ಇದೆ.

ಈ ಹಿನ್ನೆಲೆಯಲ್ಲಿ ಅಲ್ಲಿ ಬಿಸಿ ಬಿಸಿ ಚರ್ಚೆಗೆ ಗ್ರಾಸವಾಗಿರುವ ವಿಷಯವೆಂದರೆ: "ನೀರು ನೈಸರ್ಗಿಕ ಸಂಪನ್ಮೂಲವೋ ಅಥವಾ ಮಾರಾಟದ ಸರಕೋ?"

ಖಾಸಗೀ ಬಂಡವಾಳವಿರುವ, ರಾಜ್ಯಾದ್ಯಂತ ಜಾರಿಯಾಗಲಿರುವ ಇಂತಹ ಯೋಜನೆಗಳಲ್ಲಿ ನವ ತಿರುಪುರ ಪ್ರದೇಶ ಅಭಿವೃದ್ಧಿ ನಿಗಮದ ರೂ.960 ಕೋಟಿ ವೆಚ್ಚದ ಈ ಯೋಜನೆ ಮೊದಲನೆಯದು.

ಇನ್ನು ಮುಂದೆ ನೀರು ಸರ್ವೋಪಯೋಗಿ ಜನಾವಶ್ಯಕ ವಸ್ತುವಲ್ಲವೆನ್ನುವುದನ್ನು ಈ ಯೋಜನೆ ಸೂಚಿಸುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಸರಕಾರಗಳಿಗೆ ವಿಶ್ವಬ್ಯಾಂಕ್, ಏಸಿಯಾ ಅಭಿವೃದ್ಧಿ ಬ್ಯಾಂಕ್ (DFB) 'ನೀರೂ ಸಹ ಒಂದು ಸರಕು, ಅದನ್ನು ಖಾಸಗೀ ನಿಯಂತ್ರಣಕ್ಕೆ ಒಳಪಡಿಸಬೇಕು' ಎಂದು ಒತ್ತಾಯಿಸುವಲ್ಲಿ ಬಹುಶಃ ಯಶಸ್ವಿಯಾಗಿದೆ.

ತಿರುಪುರದ ಈ ನೀರಿನ ಯೋಜನೆಗೆ ಸಾಲದ ಗ್ಯಾರಂಟೀ ನೀಡಿರುವ ಅಮೇರಿಕದ USAID ಸಂಸ್ಥೆ ಮುಕ್ತ ಮಾರುಕಟ್ಟೆ ಮೂಲಕ ಈ ಯೋಜನೆ ಅಮೇರಿಕದ ಹಿತಾಸಕ್ತಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕ ಎಂದು ಹೇಳಿಕೊಂಡಿದೆ.

'ನೀರು ನೈಸರ್ಗಿಕ ಸಂಪನ್ಮೂಲ, ಅದು ಜನರ ಸೊತ್ತು, ಅದು ಸರ್ವೋಪಯೋಗಿ ಸೌಲಭ್ಯವಾಗಿಯೇ ಉಳಿಯಬೇಕು ಎಂಬುದು ಜನಸಾಮಾನ್ಯರ ಅಭಿಪ್ರಾಯ, ನಾಗರಿಕ ಸಮಾಜದ ಚಿಂತನೆ. ಬೊಲಿವಿಯಾ ಮತ್ತು ಫಿಲಿಫೈನ್ಸ್ ದೇಶಗಳು ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿ ಉಂಡ ಕಹಿ ಅನುಭವದಿಂದ ಭಾರತದಂತಹ ಬೃಹತ್ ರಾಷ್ಟ್ರ ಸರಿಯಾದ ಪಾಠ ಕಲಿಯುವುದೊಳಿತು.

ತಿರುಪುರದ ನೀರಿನ ಯೋಜನೆಯಲ್ಲಿ ಪಾಲು-ಆಸ್ತಿ ಹೊಂದಿರುವ ಅಮೇರಿಕದ ಅತಿ ದೊಡ್ಡ ಬಹುರಾಷ್ಟ್ರೀಯ ನೀರಿನ ಕಂಪನಿಯಾದ 'ಬೆಚ್ಟೆಲ್' 1999 ರಲ್ಲಿ ಬೊಲಿವಿಯಾದ ಕೊಚಬಾಂಬಾ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ವಹಿಸಿಕೊಂಡಿತು. ಕೇವಲ ಕೆಲವೇ ತಿಂಗಳುಗಳಲ್ಲಿ ನೀರಿನ ದರ ಎರಡೂವರೆ ಪಟ್ಟು ಹೆಚ್ಚಾಯಿತು. ಇದಕ್ಕೆ ಪ್ರಮುಖ ಕಾರಣವೆಂದರೆ ನೀರಿನ ದರ ಡಾಲರ್ ಪ್ರಮಾಣದಲ್ಲಿ ನಿಗದಿಯಾದದ್ದು ಮತ್ತು ಆ ಕುರಿತು ಸರಕಾರದ ಗ್ಯಾರಂಟೀ. ಬೊಲಿವಿಯಾದ ಕರೆನ್ಸಿ ಡಾಲರ್‌ಗೆ ಪ್ರತಿಯಾಗಿ ಅಪಮೌಲ್ಯವಾದಾಗಲೆಲ್ಲ ಹೆಚ್ಚಿನ ಬೆಲೆ ತೆರಬೇಕಾದದ್ದು ಅನಿವಾರ್ಯವಾಯಿತು. ಜನವರಿ 2000 ದಲ್ಲಿ ಈ ಯೋಜನೆಯನ್ನು ಕೈಬಿಡಬೇಕು, ಖಾಸಗೀ ವಿದೇಶಿ ಕಂಪನಿಯೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಬೇಕೆಂದು ಜನಸಮೂಹ ಬೀದಿಗಿಳಿದು ತೀವ್ರ ಹೋರಾಟ ನಡೆಸಿತು. ಸರಕಾರ ಮಣಿಯಲೇಬೇಕಾಯ್ತು. ಒಪ್ಪಂದ ರದ್ದುಗೊಳಿಸಿದ್ದರ ವಿರುದ್ಧ 25 ದಶಲಕ್ಷ ಡಾಲರ್ ನಷ್ಟ ತುಂಬಿಕೊಡಬೇಕೆಂದು 'ಬೆಚ್ಟೆಲ್' ಸಂಸ್ಥೆ ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ಬೇರೆ ವಿಚಾರ.


ನಿ ನೀರಿನಿಂದ ಅಗಾದ ದೂರ..

ಜಗತ್ತಿನಾದ್ಯಂತ ಮೂರು ವಿಧಗಳಲ್ಲಿ ನೀರಿನ ಖಾಸಗೀಕರಣಕ್ಕಾಗಿ ಒತ್ತಾಯ ಹೇರಲಾಗುತ್ತಿದೆ: ಒಂದು, ಸಾಲ ನೀಡುವಾಗ ಕರಾರಿನ ಮೂಲಕ; ಎರಡು. ಸರಕಾರ ಅಥವಾ ಸ್ಥಳೀಯ ಸಂಸ್ಥೆ (local body) ಬದಲಾಗಿ ಬಹುರಾಷ್ಟ್ರೀಯ ಕಂಪನಿಗೆ ಈ ಕೆಲಸ ಒಪ್ಪಿಸಬೇಕು; ಮೂರು. 2001 ರಲ್ಲಿ ಘಾನಾದ (ಆಫ್ರಿಕಾ) ಸರಕಾರಕ್ಕೆ ಸರಕಾರದ ಸಾಲದ ಹೊರೆ ಕಡಿಮೆ ಮಾಡಲು ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗೀಕರಣ ಗೊಳಿಸುವಂ[...] ಒತ್ತಾಯ ಹೇರಲಾಯಿತು.

ಜಾಗತಿಕ ಬ್ಯಾಂಕಿನ ತಂತ್ರ ಬಹಳ ಸರ[...] ಸರಕಾರಗಳಿಗೆ "ಸಂಪನ್ಮೂಲದ ಕೊರತೆಯ[...] ನೆಪದಲ್ಲಿ ನೀರಿನ ಅಭಿವೃದ್ಧಿಯ ವಿಚಾರ ಕೈ[...] ಎನ್ನುವ ಸಲಹೆ (ಒತ್ತಡ).

ಒಂದು ಅಂತಾರಾಷ್ಟ್ರೀಯ ಸಮೀಕ್ಷೆಯ ಪ್ರಕಾ[...] ನೀರಿನ ಕೊರತೆಯಿರುವ ನಗರಗಳಲ್ಲಿ ಬಡಜನ[...] ನೀರಿಗಾಗಿ ತೆರುತ್ತಿರುವ ಬೆಲೆ ವಿಪರೀ[...] ನಗರಪಾಲಿಕೆ ವಿಧಿಸುತ್ತಿರುವ ನೀರಿನ ದರ[...] ಹೋಲಿಸಿದಾಗ ಅಬಿದ್ಜಾನ್‌ದಲ್ಲಿ (ಕೋ[...] ಡೆಲ್ವೊಯರ್) ಈ ಬೆಲೆ 5 ಪಟ್ಟು, ಢಾಕಾದ[...] (ಬಾಂಗ್ಲಾದೇಶ) 25 ಪಟ್ಟು ಹಾಗೂ ಕೈರೋದ[...] (ಈಜಿಪ್ಟ್) 40 ಪಟ್ಟು.

ಪರಿಸ್ಥಿತಿ ಇಷ್ಟೊಂದು ಗಂಭೀರವಿರುವಾ[...] ತಿರುಪುರದ ಅಮಾಯಕ ಬಡಜನ[...] ಜೀವನಾವಶ್ಯಕ ನೀರಿಗಾಗಿ ತೆರಬೇಕಾದ ಬ[...] ವಿಪರೀತವಾಗಲಿದೆ ಎನ್ನುವುದರಲ್ಲಿ ಸಂದೇಹ[...] ಇಲ್ಲ. ಖಾಸಗೀಕರಣ ನಾಟಕದ ಬಲಿಪಶುಗ[...] ಅಂತಿಮವಾಗಿ ಜನಸಾಮಾನ್ಯರು, ಅದರಲ್[...] ಬಡಜನ!

ಇದಕ್ಕೆ ಪರಿಹಾರ ಒಂದೇ[...] ಬೊಲಿವಿಯಾದಲ್ಲಿ ಆದಂತೆ ಜನರ ಉ[...] ಹೋರಾಟ. ಜಾಗತೀಕರಣ - ಉದಾರೀಕರ[...] ಖಾಸಗೀಕರಣ ನೀತಿಗಳ ವಿರುದ್ಧ ಐಕ್ಯ ಹೋರಾ[...]

- ರಾಘವೇಂದ್ರ ಆ[...]
ಧಾರ[...]

ಪುಸ್ತಕ ಬಿಡುಗಡೆ ....

ಪುಟ 12 ರಿಂದ

ಎಂದು ಹೆಗಡೆಯವರು ವಿವರಿಸಿದರು.

"ನಾಗರಿಕತೆಯ ಪ್ರಾಥಮಿಕ ಸ್ಥಿತಿಯಿಂದ ಈವರೆಗೂ ನಾಶವಾಗದೇ ಬೇರೆ ಬೇರೆ ರೀತಿಯಲ್ಲಿ ಉಳಿದುಕೊಂಡು ಬಂದಿರುವ ಕೆಲವು ಭಾರತೀಯ ಮಿಥ್‌ಗಳ ಹಾಗೂ ರಿಚ್ಯುವಲ್(ವಿಧಿ)ಗಳ ಮೂಲವನ್ನು ಹುಡುಕುವುದು ಮತ್ತು ಆ ಮೂಲಕ ಭಾರತೀಯ ಸಂಸ್ಕೃತಿಯ ನಿರ್ಮಾಣದ ನಿಜವಾದ ಮಗ್ಗಲುಗಳನ್ನು ಪರಿಚಯಿಸುವುದು ಈ ಎಲ್ಲಾ ಲೇಖನಗಳ ಉದ್ದೇಶವಾಗಿದೆ. 21ನೇ ಶತಮಾನದಲ್ಲಿ ಕೂಡಾ ನಾವು ಓದಲೇಬೇಕಾದ ಒಂದು ಮಹತ್ವದ ಪುಸ್ತಕ ಇದು" ಎಂದು ಅವರು ತಿಳಿಸಿದರು.

ಎಂ.ಪಿ.ಸುಶೀಲ ಅವರು ಅನುವಾದಿಸಿದ 'ಜಾಗೃತಿ' ಪುಸ್ತಕವನ್ನು ಕುವೆಂಪು ವಿ.ವಿ.ಯ ಉಪನ್ಯಾಸಕರಾದ ಡಾ.ಕೇಶವ ಶರ್ಮ ಪರಿಚಯಿಸಿದರು.

"ತಮಿಳುನಾಡಿನ ಕೊಲ್ಲಿಬೆಟ್ಟದಲ್ಲಿರುವ ಬುಡಕಟ್ಟು ಜನಾಂಗದ ಬಗ್ಗೆ ಹೇಳುವ ಈ ಕಾದಂಬರಿ ಅವರ ನಡುವೆ ನಡೆಯುತ್ತಿರುವ ಬದಲಾವಣೆಯ ಕುರಿತು ಹೇಳುತ್ತದೆ. ಈ ಕಾದಂಬರಿ ನಮಗೆ ಗೊತ್ತಿರದ ಇನ್ನೊಂದು ಜಗತ್ತನ್ನು ನಮಗೆ ಪರಿಚಯಿಸುವಲ್ಲಿ ಸಫಲವಾಗಿದೆ" ಎಂದು ಹೇಳಿದರು.

ತಮಿಳು ಭಾಷೆ, ಸಂಸ್ಕೃತಿಯ ಬಗ್ಗೆ ನಮಗೆ ಅಷ್ಟಾಗಿ ತಿಳಿದಿಲ್ಲ. ತಮಿಳಿನಿಂದ ಕನ್ನಡಕ್ಕೆ ಅನುವಾದವಾಗಿದ್ದು ಕೂಡಾ ಕಡಿಮೆಯೇ. ನಾವಿಂದು ಪತ್ರಿಕೆಯಲ್ಲಿ ಬಂದ ವರದಿಯನ್ನು ನೋಡಿ, ಅದನ್ನೇ ನಂಬಿ ತಮಿಳು ಜನರ ಬಗ್ಗೆ ಪ್ರತಿಕ್ರಿಯಿಸುತ್ತೇವೆ. ಅಲ್ಲಿಯ ಒಂದು ಸಾಂಸ್ಕೃತಿಕ ವಾಗ್ವಾದವೇ ಗೊತ್ತಿಲ್ಲದೆ ನಾವು ಮಾತನಾಡುವುದು ಬೇಜವಾಬ್ದಾರಿತನವಾಗುತ್ತದೆ. ಹಾಗಾಗಿ ಇಂತಹ ಕೃತಿಗಳು ಒಂದು ಸಾಂಸ್ಕೃತಿಕ ವಾಗ್ವಾದವನ್ನು ಪರಿಚಯಿಸಲು ಸಮರ್ಥವಾಗಿದೆ. ನಮ್ಮ ಸಾಮಾಜಿಕ ಕಾದಂಬರಿಗಳು ಪರಿಚಯಿಸಿದ ಜಗತ್ತು ಸಣ್ಣದು. ಹೆಚ್ಚಾಗಿ ನಮ್ಮ ಕಾದಂಬರಿಗಳು ಬ್ರಾಹ್ಮಣರ ಇಲ್ಲವೇ ದಲಿತರ ತಲ್ಲಣಗಳನ್ನು ನಮಗೆ ಪರಿಚಯಿಸಿದೆ. ಈ ಬುಡಕಟ್ಟುಗಳ ಅನುಭವಲೋಕ ನಮಗೆ ಹೊಸದು" ಎಂದರು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸ್ವಾತಂತ್ರ್ಯ, ಸಮಾನತೆ ಇತ್ಯಾದಿಗಳು ತೀರಾ ಆಕರ್ಷಕ ಬೇಡಿಕೆಗಳು. ಆದರೆ ಈ ಬುಡಕಟ್ಟು ಜನರು ಇದ್ಯಾವುದನ್ನು ಕೇಳುವುದಿಲ್ಲ. ಅವರು ಕೇಳುತ್ತಿರುವುದು ಬದುಕುವ ಹಕ್ಕನ್ನು ಮಾತ್ರ. ಇಂತಹ ಬದುಕುವ ಹಕ್ಕನ್ನು ಪಡೆಯಲೋಸ[...] ನಡೆಸುವ ಹೋರಾಟದ ಚಿತ್ರಣವೇ '[...] ಕಾದಂಬರಿ. ಅನುವಾದ ಕೂಡಾ ಸಮರ್ಥವ[...] ಬಂದಿದೆ. ಇಂತಹ ಒಂದು ಒಳ್ಳೆಯ ಕೃತಿಯ[...] ಕನ್ನಡಕ್ಕೆ ಅನುವಾದಿಸಿದ ಸುಶೀಲಾರವ[...] ಪ್ರಕಟಿಸಿದ ಅಧ್ಯಯನ ಪ್ರಕಾಶನದವರಿಗೆ ಕೃತ[...] ಸಲ್ಲಿಸಬೇಕು" ಎಂದು ಕೇಶವ ಶರ್ಮ ಹೇಳಿದ[...]

ಅನುವಾದಕರಲ್ಲಿ ಒಬ್ಬರಾದ ಪ[...] ಟಿ.ಎಸ್.ವೇಣುಗೋಪಾಲ ಮಾತನಾ[...] "ವಿದ್ಯಾರ್ಥಿಗಳಿಗೆ ಕೊಸಾಂಬಿಯವರ ಒ[...] ಒರಿಜಿನಲ್ ಟೆಕ್ಸ್ಟ್ ಕೊಡಬೇಕೆನ್ನುವ ಕಾರಣದ[...] ಅವರ ಮಹತ್ವದ ಪುಸ್ತಕಗಳಲ್ಲಿ ಒಂದಾದ[...] ಪುಸ್ತಕವನ್ನು ಅನುವಾದಿಸಿದೆವು" ಎಂದು[...] ಚಿಂತನದ ಸಂಚಾಲಕರಾದ ವಿಠ್ಠಲ ಭಂಡ[...] ಪ್ರಾಸ್ತಾವಿಕವಾಗಿ ಮಾತನಾಡಿದುರ.

ಪ್ರಾರಂಭದಲ್ಲಿ ಸಂಶೋಧನಾ ವಿದ್ಯಾ[...] ಟಿ.ರಾಜೇಂದ್ರ ಅವರ ಭಾವಗೀತೆಯೊಂ[...] ಪ್ರಾರಂಭವಾದ ಸಮಾರಂಭವನ್ನು ಉಪನ್ಯಾ[...] ಪ್ರಭಾಕರ ಅವರು ನಿರ್ವಹಿಸಿದರು. ವೆಂಕ[...] ಅವರು ಸ್ವಾಗತಿಸಿ ವಿದ್ಯಾರ್ಥಿ ಮುರುಗನ್ ಅ[...] ವಂದಿಸಿದರು.

● ವಿಠ್ಠಲ ಭಂಡ[...]



'ಪುರಾಣ ಮತ್ತು ವಾಸ್ತವ' ಕೃತಿಯ ಕುರಿತು ರಾಜಾರಾಮ ಹೆಗಡೆ ಮಾತನಾಡುತ್ತಿರುವುದು.

ಕೊಳ್ಳಿ ಇಕ್ಕಿದರೋ ಉಳ್ಳಾಲಕ್ಕೇ....

ಹಿಂದೂಗಳ ಹಿತರಕ್ಷಣೆಯಾಗುತ್ತಿಲ್ಲವೆಂದು ಆರೋಪಿಸಿ ಕೊಳ್ಳಿ ಹಿಡಿದು ಮೆರವಣಿಗೆ-ಸಭೆ ನಡೆಸಿದ ಕೋಮುವಾದಿಗಳು ಉಳ್ಳಾಲವನ್ನೇ ಉರಿಯುವಂತೆ ಮಾಡಿದ್ದಾರೆ. ಈ ಬೆಂಕಿ ಹಚ್ಚಿಕೊಂಡಿದ್ದು ಹೇಗೆ? ಪೋಲೀಸರೇಕೆ ಪಂಜಿನ ಮೆರವಣಿಗೆಗೆ ಅವಕಾಶ ನೀಡಿದರು? ಒಂದು ವರದಿ

ನವಂಬರ್ 17 ರಂದು ತೊಕ್ಕೊಟ್ಟಿದಲ್ಲಿ ಸಂಘ ರಿವಾರದ ಸಂಘಟನೆಗಳು ಕಾಂಗ್ರೆಸ್‌ನ ಹಿಂದೂ ರೋಧಿ ನೀತಿಯನ್ನು ಖಂಡಿಸಿ "ಪಂಜಿನ ೦ರವಣಿಗೆ" ನಡೆಸಲಿದೆ ಎಂದು ಪತ್ರಿಕಾ ೀಷ್ಠಿಯಲ್ಲಿ ಸಾರಿದರು. ಈಗಾಗಲೇ ಇಂತಹ ಲವಾರು ಕಸರತ್ತುಗಳನ್ನು ನಡೆಸಿ ಅದು ಧಿಸಬಯಸಿದ ರಾಜಕೀಯ ಸಾಮಾಜಿಕ ನಿಷ್ಟಗಳ ಲಾಭದ ಅರಿವಿದ್ದವರು ಅದೊಂದು ಾಹುತದ ಸೂಚನೆಯೆಂದು ಭಾವಿಸಿದರು. ಅದೇ ತ್ರಿಕಾ ಗೋಷ್ಠಿಯಲ್ಲಿ ಉಳ್ಳಾಲ ವಿಧಾನಸಭಾ ೀತ್ರದಲ್ಲಿ ಹಿಂದೂಗಳ ವಿರುದ್ಧ ಹಲ್ಲೆ ಡೆಯುತ್ತಿದೆಯೆಂದೂ ಪೊಲೀಸರು ಷ್ಕ್ರಿಯರಾಗಿದ್ದು, ಸ್ಥಳೀಯ ಶಾಸಕರ ಮಗ ಯು.ಟಿ. ಖಾದರ್ ಹೇಳಿದಂತೇ ಪೊಲೀಸರು ರ್‍ಯಾಚರಿಸುತ್ತಿದ್ದಾರೆ ಎಂದೂ ಆರೋಪಿಸಿದರು. ಂದರೆ ಚುನಾವಣಾ ಪೂರ್ವ ವರಸೆಗಾಗಿ ಈ ಂಜಿನ ಮೆರವಣಿಗೆ ನಡೆಯಲಿದೆ ಹಾಗೂ ಈ ರ‍್ಯಕ್ರಮದಲ್ಲಿ ಅಹಿತಕರ ಸಂಘಟನೆಗಳನ್ನು ಲಗಳನ್ನು ನಡೆಸಿ ಮತ ಗಿಟ್ಟಿಸುವ ಪ್ರಕ್ರಿಯೆ ್ರಾರಂಭವಾಗಬಹುದೆಂಬ ನಂಬಿಕೆ ನಿಜವಾಯಿತು. ಡರಾತ್ರಿ ನಡೆದ ಈ ಘಟನೆಯಲ್ಲಿ ರ್ವಯೋಜಿತ ಕಲ್ಲು ತೂರಾಟ ಕೃತ್ಯ ನಡೆದು ಾರಿ ಇರಿತ, ಲೂಟಿ, ಹಲ್ಲೆ, ದಾಂಧಲೆಗೆ ಂದೆರಡು ದಿನ ಉಳ್ಳಾಲವೇ ನಲುಗಿತು.

ಷ ಉಕ್ಕಿತು

ತೊಕ್ಕೊಟ್ಟು ಸಮೀಪ ಒಂದೂವರೆ ಕಿ.ಮೀ. ಾರದ ಭಜನಾ ಮಂದಿರದಿಂದ ಪ್ರಾರಂಭವಾದ ಂಜಿನ ಮೆರವಣಿಗೆ ಅಲ್ಪ ಸಂಖ್ಯಾತರ ವಿರುದ್ಧ ವಹೇಳನಕಾರಿ ಘೋಷಣೆಯೊಂದಿಗೆ ಸಾಗಿತು. ೀಮು ವಿಷಜ್ವಾಲೆ ಉಕ್ಕುವಂತೆ ಮಾಡಲಾಗಿತ್ತು. ೊಕ್ಕೊಟ್ಟು ಜಂಕ್ಷನ್‌ನಲ್ಲಿ ಪ್ರಾರಂಭವಾದ ಂರಂಗಸಭೆಯಲ್ಲಂತೂ ಮಾಜಿ ಶಾಸಕ, ರತ್ಕಲ್‌ನಲ್ಲಿ 9 ಮಂದಿಯ ಪ್ರಾಣ ಹಿಂಡಲು ಕಾರಣನಾದ, ರಕ್ತಸಿಕ್ತ ಕೈಗಳ ಕುಖ್ಯಾತಿಯ ಕುಂಬಳೆ ಸುಂದರರಾವ್‌ರವರು ಪ್ರಚೋದನಕಾರಿ ಭಾಷಣ ಮಾಡಿದರು. ಈ ಭಾಷಣ ಅಲ್ಪಸಂಖ್ಯಾತರ ಮೇಲೆ ಏರಿ ಹೋಗಿ ಹಲ್ಲೆ ಮಾಡುವಷ್ಟು ಪ್ರಭಾವ ಶಾಲಿಯಾಗಿತ್ತು. ಸಾಕಷ್ಟು ಸುಳ್ಳುಗಳು ಅಪಪ್ರಚಾರಗಳೂ ಇತ್ತು. ಸಭೆಯ ಅಂತಿಮ ಕ್ಷಣದಲ್ಲಿ ಸಭೆಯ ಮಧ್ಯೆಯಿದ್ದ ಗುಂಪೊಂದು ಉದ್ದೇಶ ಪೂರ್ವಕವಾಗಿಯೇ ಕಲ್ಲು ಕಲ್ಲು ಎಂದು ಬೊಬ್ಬೆ ಹಾಕಿದಾಗ ಪಕ್ಕದ ಕಟ್ಟಡದ ಮೇಲ್ಭಾಗದಲ್ಲಿದ್ದ ಅದೇ ಸಂಘಟನೆಯ ಕಾರ್ಯಕರ್ತರು "ಏನೂ ಆಗಿಲ್ಲ" ಎಂದು ಕೈ ಸನ್ನೆ ಹಾಗೂ ಬಾಯಿಯಿಂದ ಜೋರಾಗಿ ಹೇಳಿದರು.

ಆದರೆ ದಾಂಧಲೆ ನಡೆಸಲೆಂದೇ ಕಾದು ಕುಳಿತಿದ್ದ ಗುಂಪು ಪಕ್ಕದಲ್ಲಿದ್ದ ಅಲ್ಪಸಂಖ್ಯಾತರ ಎರಡು ಅಂಗಡಿಗಳಿಗೆ ನುಗ್ಗಿ ಹುಡಿಗೈದರು. ಇದರ ಮುಂದುವರಿದ ಭಾಗವಾಗಿ ಮುಚ್ಚಿದ ಅಂಗಡಿಗಳಿಗೂ ಇದೇ ತಂಡ ಕಲ್ಲು ತೂರಾಟ ನಡೆಸಿತು. ಇದು ಮುಂದುವರೆದು ನಾಲ್ಕೈದು ಹಲ್ಲೆ ಪ್ರಕರಣ, ಮೂರು ಇರಿತದ ಘಟನೆಗಳು ನಡೆಯಿತು. ಮಂಗಳೂರಿನ ಪಕ್ಕದಲ್ಲಿರುವ ಮಂಗಳಾದೇವಿಯಲ್ಲೂ ಮರಣಾಂತಿಕ ಹಲ್ಲೆ ನಡೆದಿದೆ.

ಪ್ರತೀಕಾರ

ಇದೇ ಸಮಯದಲ್ಲಿ ಬೆಳ್ತಂಗಡಿಯ ಕಕ್ಕಂಜೆಯಲ್ಲೂ ಗಲಭೆ ನಡೆದು ಪೊಲೀಸರ ಸಂಖ್ಯೆಯನ್ನು ಅಲ್ಲಿಂದ ಕಳುಹಿಸಿಕೊಡಬೇಕಾಯಿತು. ಇದರ ಪರಿಣಾಮವಾಗಿ ಗಲಭೆಯ ಘಟನೆ ಮುಂದುವರಿಯಿತು. ಮೊದಲೇ ಸಿದ್ದರಾಗಿದ್ದ ಸಂಘಪರಿವಾರ ಇದರ ಲಾಭ ಗರಿಷ್ಟ ಪ್ರಮಾಣದಲ್ಲಿ ಪಡೆದರೆ, ಇದಕ್ಕೆ ಪ್ರತೀಕಾರವಾಗಿ ಅಲ್ಪ ಸಂಖ್ಯಾತ ಸಮುದಾಯದ ಮಧ್ಯೆ ಇರುವ ಮೂಲಭೂತವಾದಿ ಶಕ್ತಿಗಳೂ ಕೆಲವಾರು ಕಡೆ ಕ್ರಿಯಾಶೀಲವಾದರು. ಈಗಾಗಲೇ ಅಪರಾಧಿಗಳನ್ನು ಬಂಧಿಸಲಾಗಿದೆ.



ಕುಂಬ್ಳೆ ಸುಂದರರಾವ್‌ರವರ ಬೆಂಕಿಯುಗುಳುವ ಭಾಷಣ

ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಶಾಂತಿ ಸಭೆಗಳೆಂಬ ಪ್ರಹಸನವೂ ನಡೆದಿದೆ. ಏತನ್ಮಧ್ಯ ಕಾಂಗ್ರೆಸ್ ಹಿಂದೂಗಳ ಹಿತರಕ್ಷಣೆಗೆ ಸಮಿತಿಯೊಂದನ್ನು ರಚಿಸಿ ಸಂಘ ಪರಿವಾರಕ್ಕಿಂತ ತಾವೇ ನಿಜವಾದ ಹಿಂದೂ ರಕ್ಷಕರೆಂಬಂತೆ ಕೋಮುವಾದಿಗಳ ಪಾತ್ರ ನಿರ್ವಹಿಸುತ್ತೇವೆಂಬುದನ್ನು ತೋರಿಸಿಕೊಟ್ಟ ವಿಶೇಷ ಪಕ್ರಿಯೆ ನಡೆಸಿದೆ. ಮಾಜಿ ಶಾಸಕರ ಮೇಲೆ ಕೇಸು ಜಡಿಯಲಾಗಿದೆ. ಇಷ್ಟೆಲ್ಲಾ ಗಲಭೆಗೆ ನಾಂದಿ ಹಾಡಿದಂತಹ ಮೆರವಣಿಗೆ ಅತ್ಯಂತ ಸೂಕ್ಷ್ಮ ಹಾಗೂ ಅಲ್ಪ ಸಂಖ್ಯಾತರು ಅಧಿಕವಾಗಿರುವ ಈ ಪ್ರದೇಶದಲ್ಲಿ ಪೊಲೀಸರು ಯಾಕೆ ಮೂರು ಕಡೆಯ ಪಂಜಿನ ಮೆರವಣಿಗೆಗೆ ಪರವಾನಿಗೆ ನೀಡಿದರು ಎಂಬುದು ಗಹನವಾದ ಪ್ರಶ್ನೆಯಾಗಿದೆ. ಈ ಗಲಭೆಗಳ, ಹಿಂಸೆ, ಆಸ್ತಿ ಹಾನಿಗಳ ಅವ್ಯಾಹತ ನಡೆದವು.

ಇಂತಹ ಸಂದರ್ಭದಲ್ಲಿ ಉಳ್ಳಾಲ ಸಿ.ಪಿ.ಐ.(ಎಂ) ಪಕ್ಷದ ನಾಯಕರುಗಳು ಪತ್ರಿಕಾ ಹೇಳಿಕೆ ಮತ್ತು ಶಾಂತಿ ಕಾಪಾಡಲು ಗಂಭೀರ ಪ್ರಯತ್ನ ಪಟ್ಟಿದ್ದಾರೆ. ರಾಮಚಂದ್ರ ಉಚ್ಚಿಲ್, ಮಂಜಪ್ಪ ಉಳ್ಳಾಲ್, ಸುಕುಮಾರ್ ಬಾಬು ಪಿಲಾಲ್, ಕೃಷ್ಣಪ್ಪ ಸಾಲಿಯಾನ, ವಿಠಲ ಶ್ರೀಯಾನ್, ಪದ್ಮಾವತಿ ಶೆಟ್ಟಿಯವರುಗಳಲ್ಲದೆ ಪ್ರಮುಖ ಡಿ.ವೈ.ಎಫ್.ಐನ ನಾಯಕರಾದ ಅರುಣ್ ಕುಮಾರ್, ರಾಮಚಂದ್ರರವರೂ ಕ್ರಿಯಾಶೀಲವಾಗಿ ದುಡಿದಿದ್ದಾರೆ.

ದಿನಾಂಕ 18 ರಂದು ಡಿ.ವೈ.ಎಫ್.ಐ.ನ ಸತ್ಯಶೋಧನಾ ತಂಡ ಘಟನೆಯನ್ನು ಅಂದಾಜು ಮಾಡಲು ಪರಿಸರಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಸಾಯಂಕಾಲ ಪಶ್ಚಿಮ ವಲಯ ಡಿ.ಐ.ಜಿ. ಧರ್ಮಪಾಲ ನೇಗಿಯವರನ್ನು ಭೇಟಿಮಾಡಿ ಕಠಿಣ ಕ್ರಮ ಮತ್ತು ಹೆಚ್ಚಿನ ಪೊಲೀಸ್ ಪಡೆಯನ್ನು ಕರ್ತವ್ಯಕ್ಕೆ ಇಳಿಸಬೇಕೆಂದು ಮನವಿ ಮಾಡಿದೆ. ಈ ನಿಯೋಗದಲ್ಲಿ ಕೃಷ್ಣಪ್ಪಕೊಂಚಾಡಿ, ಕೆ. ಯಾದವಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಮುನೀರ್ ಕಟೇಹಳ್ಳಿ, ದಯಾನಂದಶೆಟ್ಟಿ, ಸಂತೋಷ್ ನೀತಿನಗರ, ಶ್ರೀಧರ್ ಶಕ್ತಿನಗರ ಮೊದಲಾದವರು ಇದ್ದರು.

ಸ್ಫೋಟಕ ಸನ್ನಿವೇಶ

ಸಂಘ ಪರಿವಾರ ಈಗ ಅಮಾಯಕರ ಬಂಧನ ನಡೆಯುತ್ತಿದೆ ಎಂಬ ಪ್ರಚಾರ ಪ್ರಾರಂಭಿಸಿದೆ. ಇದೇ ಹೇಳಿಕೆ ಸಂಘ ಪರಿವಾರದಿಂದಲೂ ಕೇಳಿ ಬರುತ್ತಿದೆ. ಚುನಾವಣೆ ಹತ್ತಿರ ಸಮೀಪಿಸುತ್ತಿದ್ದಂತೆ ಉದ್ವಿಗ್ನ ಪರಿಸ್ಥಿತಿ ನಿರ್ಮಿಸಲು ಶತಾಯ ಗತಾಯ ಪ್ರಯತ್ನ ನಡೆಯುತ್ತಿದೆ. ಉಳ್ಳಾಲ, ತೊಕ್ಕೊಟ್ಟು ಪ್ರದೇಶ ಈಗ ಕೊಂಚ ತಣ್ಣಗಿದೆಯೆಂಬಂತೆ ಕಂಡುಬಂದರೂ ಮುಂದೆ ಯಾವುದೇ ಸಂದರ್ಭದಲ್ಲಿಯೂ ಮತ್ತೆ ಸ್ಫೋಟಿಸಬಹುದು.

● ಕೃಷ್ಣಪ್ಪ ಕೊಂಚಾಡಿ

ಬಾಬ್ರಿ ಮಸೀದಿ ಧ್ವಂಸ ಪ್ರಕರಣ : ತಪ್ಪುದಾರಿಗೆಳೆಯುತ್ತಿರುವ ಸಿಬಿಐ

ಬಾಬ್ರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಭವಿಸಿದಂತೆ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುವಾಗ ಸಿ.ಬಿ.ಐ. ನಿರ್ದೇಶಕರ ಹೇಳಿಕೆ ಅಚ್ಚರಿ ಮತ್ತು ಆಘಾತವನ್ನುಂಟುಮಾಡಿದೆ

ಸಿಬಿಐ ನಿರ್ದೇಶಕ ಪಿ.ಸಿ.ಶರ್ಮಾರವರು ಬಾಬರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲಿನ ಆರೋಪ ಪಟ್ಟಿಯಲ್ಲಿ ವಂಚನೆ ಪ್ರಕರಣ ದಾಖಲಾಗಿರಲಿಲ್ಲ ಎಂದಿದ್ದಾರೆ. 9.9.97 ರಲ್ಲಿ ಅಯೋಧ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲಕ್ನೋ ಸೆಷನ್ಸ್ ನ್ಯಾಯಾದೀಶ ಜಗದೀಶ್ ಶ್ರೀವಾಸ್ತವರವರು ಬಿಜೆಪಿ, ಆರ್.ಎಸ್.ಎಸ್. ಉನ್ನತ ನಾಯಕರನ್ನೊಳಗೊಂಡಂತೆ 49 ಜನರ ಮೇಲೆ ವಂಚನೆ ಪ್ರಕರಣ ಆರೋಪ ಪಟ್ಟಿಯನ್ನು ದಾಖಲಿಸಿದ್ದಾರೆ. ಇದೇ ಆದೇಶದಂತೆ ಸಿಬಿಐ ಅಡ್ವಾನಿ , ಜೋಶಿ ಒಳಗೊಂಡಂತೆ 49 ಜನರ ಮೇಲೆ ಸೆಕ್ಷನ್ 120 ಬಿ.ಐ.ಪಿ.ಎಲ್. ಹಾಗೂ 153ಎ/ 153ಬಿ/295/295ಎ ಹಾಗೂ ಐ.ಪಿ.ಸಿ. ಗಳ ಅನ್ವಯ ಆರೋಪಪಟ್ಟಿ ಸಲ್ಲಿಸಿದೆ. ಇದರಿಂದ ಅರ್ಥವಾಗುವುದೇನೆಂದರೆ ಸಿ.ಬಿ.ಐ ವಂಚನೆ ಪ್ರಕರಣವನ್ನು ದಾಖಲಿಸಿರುವುದು ಮಾತ್ರವಲ್ಲ ಕೇಂದ್ರ, ರಾಜ್ಯ ಸರ್ಕಾರಗಳ ಅನುಮತಿಯನ್ನು ಪಡೆದಿತ್ತು. ಈ ಆರೋಪಪಟ್ಟಿಯನ್ವಯ ನ್ಯಾಯಾಲಯವು ನಮ್ಮ ಅನಿಸಿಕೆಯಂತೆ ರಾಮಜನ್ಮಭೂಮಿ, ಬಾಬರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ವ್ಯಕ್ತಿಗಳು 1990ರಿಂದ 6-12-92ರ ಅವಧಿಯಲ್ಲಿ ವಿವಾದಿತ ಪ್ರದೇಶದ ಧ್ವಂಸದಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿದೆ. ಅಡ್ವಾಣಿ ಹಾಗೂ ಮತ್ತಿತರರು ವಿವಿಧ ಸ್ಥಳಗಳಲ್ಲಿ ಬೇರೆ ಬೇರೆ ಸಮಯದಲ್ಲಿ ವಿವಾದಿತ ಪ್ರದೇಶದ ಧ್ವಂಸಕ್ಕೆ ಪಿತೂರಿ ನಡೆಸಿದ್ದಾರೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು.

ಇದರನ್ವಯ ನ್ಯಾಯಾಲಯವು ಮೇಲೆ ಹೇಳಿದ ಸೆಕ್ಷನ್‌ಗಳನ್ವಯ ಹಾಗೂ ವಂಚನೆ ಪ್ರಕರಣ ಒಳಗೊಂಡಂತೆ ವಿಚಾರಣೆ ನಡೆಸಲು ಅಕ್ಟೋಬರ್ 17, 1997 ರಂದು ಹಾಜರಾಗುವಂತೆ ಆದೇಶಿಸಿತು. ಆ ಆದೇಶವನ್ನು ತಾಂತ್ರಿಕ ಕಾರಣಗಳೊಡ್ಡಿ ಹೈ ಕೋರ್ಟಿನಲ್ಲಿ ಪ್ರಶ್ನಿಸಲಾಯಿತು. ಹೈಕೋರ್ಟ್ ಸಹ ಇನ್ನೊಂದು ಸಣ್ಣ ಆಡಳಿತಾತ್ಮಕ ದೋಷವೆಂದು ಅದನ್ನು ಸರಿಪಡಿಸಿ ಮರು ವಿಚಾರಣೆಗೆ ಕಳುಹಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಆದೇಶಿಸಿತು. ಆದರೆ ಬಿಜೆಪಿಯ ರಾಜನಾಥ್ ಸಿಂಗ್ ಸರ್ಕಾರ ಯಾವುದೇ ಅಗತ್ಯ ಕ್ರಮಕೈಗೊಳ್ಳಲಿಲ್ಲ. ಹಾಗೆಯೇ ಬಿಜೆಪಿ ಬೆಂಬಲದಿಂದ ಅಧಿಕಾರ ನಡೆಸಿದ ಮಾಯಾವತಿ ಸರ್ಕಾರವು ಸಹ ಅಗತ್ಯ ಕ್ರಮಕೈಗೊಳ್ಳಲಿಲ್ಲ. ಆದರೆ ಈಗ ಮುಲಾಯಂ ಸಿಂಗ್ ಸರ್ಕಾರ ಸುಪ್ರಿಂ ಕೋರ್ಟಿನ ನಿರ್ಧಾರಕ್ಕೆ ಬಿಟ್ಟಿದ್ದಾರೆ.

ಸ್ಪಷ್ಟವಾಗಿ ಹೇಳುವುದಾದರೆ ಸಿಬಿಐ ತಾಂತ್ರಿಕ ಕಾರಣಗಳನ್ನೊಡ್ಡಿ ತನ್ನ ಜವಾಬ್ದಾರಿಯಿಂದ ವಿಮುಖವಾಗುವಂತಿಲ್ಲ. ಸರಳ ಸತ್ಯವೆಂದರೆ ಸಿಬಿಐ ಬಾಬರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂದಿಸಿದಂತೆ 1993ರಲ್ಲಿ ವಂಚನೆ ಪ್ರಕರಣವನ್ನು ದಾಖಲಿಸಿದೆ ಹಾಗೂ ಈಗ ಅಂದರೆ 2003ರಲ್ಲಿ ರಾಯ್‌ಬರೇಲಿ ಕೋರ್ಟಿನ ಮುಂದೆ ವಿಚಾರಣೆ ಇರುವಾಗ ಆರೋಪ ಪಟ್ಟಿಯನ್ನು ಕೈ ಬಿಟ್ಟಿದೆ. ನಮ್ಮ ನಾಗರಿಕ ಸಮಾಜದ ಒಳಿತಿಗಾಗಿ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಸಿಬಿಐ ಪ್ರಕರಣವನ್ನು ತಪ್ಪುದಾರಿಗೆಳೆಯುವ ಬದಲು ತಾನು ಸಲ್ಲಿಸಿದ ಮೊದಲ ಆರೋಪ ಪಟ್ಟಿಯನ್ನು ಕೈಬಿಟ್ಟಿದ್ದರ ಬಗ್ಗೆ ವಿವರಣೆ ನೀಡಬೇಕಿದೆ.

ಸೆಪ್ಟೆಂಬರ್ 11 ರ ಸಾಗರದ ಕೋಮುಗಲಭೆಯನ್ನು ನೆನೆದು....

ಹೊತ್ತಿ ಉರಿಯಿತೋ ಸಾಗರ
ಸಮರಸದ ಮನಕೆ ಬೇಸರ
ಆ ಸೆಪ್ಟೆಂಬರ್ ಹನ್ನೊಂದು ಬೇಡ ಅಂಥ
ದಿನ ಇನ್ನೊಂದು
ಅಕ್ಕಿಗೆ ಸುರಿದರು ಸೀಮೆ ಎಣ್ಣೆ, ಅವಲ್ಲಿ
ಮಾನವೀಯತೆ ಸೊನ್ನೆ

ಸುಟ್ಟು ಹೋದವು ಕಲಾವಿದನ ಚಿತ್ರ
ಜೊತೆಗೇ ಕರಿಕಲು ಆತನ ಪ್ರಮಾಣ ಪತ್ರ
ಸ್ಕೂಲು ಪುಸ್ತಕಕೆ ಬೆಂಕಿಯ ಜ್ವಾಲೆ ಆದರೂ
ಬತ್ತಿತೇ ಜ್ಞಾನದಾ ಸೆಲೆ?

ಬಣ್ಣದ ಟಿ.ವಿ.ಯ ಒಡೆದರು ಕಲ್ಲಲ್ಲಿ
ಕತ್ತಲು ಚಿಮ್ಮಿತು ನೋಡುವ ಕಣ್ಣಲಿ
ಸುಟ್ಟಿತು ಮನೆಗಳ ಬೆಂಕಿಯ ಕಾವು
ಅರಿಯಲಾರಿರಿ ನೀವು ಬಡವನ ನೋವು


ಕಾಸು ಕಾಸು ಕೂಡಿಸಿದ್ದೆ ಮಗಳ
ಮದುವೆಗೆಂದು
ದೋಚಿಕೊಂಡು ಹೋದರೋ ನನ್ನ
ಕನಸುಗಳ ಕೊಂದು

ಕೂಲಿಗೆ ಹೋಗುವ ಬಡವನ ಬಂಧಿಸಿ
ತಳ್ಳಿದರು ಬಳ್ಳಾರಿಯ ಜೈಲಿಗೆ
ಲಾಠಿಯ ನಂಬಿದ ಧೀರರು ಎಲ್ಲ ಇದ್ದರು
ಸುಖದಿ ಬಂಗಲೆಯೊಳಗೆ

ದ್ವೇಷದ ಕಿಚ್ಚು ತರುವುದು ಬರಿ ಉರಿಯನ್ನು
ಶಾಂತಿಯ ಬೆಳಕು ನೀಗುವುದು ತಮವನ್ನು

● ಎಸ್. ಮಾಲತಿ

ಕೃಪೆ: ಹೊಸತು ಮಾಸಪತ್ರಿಕೆ



ಜಿ.ಎಸ್.ಮಣಿ

ಬಂಡವಾಳಿಗರಿಗೆ ಬೆಳವಣಿಗೆ

ದೇಶದ ಮಧ್ಯಮಾವಧಿ ಅಧಿಕ ಸಮೀಕ್ಷೆಯ ಪ್ರಕಾರ ಈ ಸಾಲಿನ ಒಟ್ಟುತ್ಪಾದನೆ ಶೇ 7ಕ್ಕೂ ಹೆಚ್ಚಿನ ದರದಲ್ಲಿ ಬೆಳೆಯಲಿದೆಯಂತೆ. ಮೂಲಭೂತ ಆರ್ಥಿಕ ಸೂಚ್ಯಂಕಗಳು ಇಂತಹ ಸಾಧ್ಯತೆಯತ್ತ ಕೈಯೆತ್ತಿ ತೋರಿಸುತ್ತಿವೆ. ಎಂಬುದು ಈ ಸಮೀಕ್ಷೆಯ ಅಂಬೋಣ.

ದೇಶದ ಉತ್ಪಾದನೆ ಹೆಚ್ಚಾದರೆ ಈ ದೇಶದ ನಾಗರೀಕರಿಗೆ ಸಂತೋಷವಾಗಲೇಬೇಕಲ್ಲವೆ. ಹೆಚ್ಚಿದ ಉತ್ಪಾದನೆಯಲ್ಲಿ ತಮ್ಮ ಪಾಲು ಹೆಚ್ಚಾಗುವುದು ಅಂದರೆ ಜನರ ಜೀವನ ಮಟ್ಟ ಸುಧಾರಿಸುತ್ತದೆ ಎಂಬುದು ಇದರ ಅರ್ಥ.

ಆದರೆ ನಿಜಕ್ಕೂ ಇದು ಆಗುತ್ತಿದೆಯೇ ಎಂಬುದೇ ಪ್ರಶ್ನೆ. ಅಸಮಾನತೆಯನ್ನೆ ಹೆಚ್ಚು ಗೊಳಿಸುವ ಖಾಸಗೀಕರಣದ ಬಂಡವಾಳಶಾಹಿ ನೀತಿಯನ್ನು ನಾವು ಅನುಸರಿಸುತ್ತಿರುವಾಗ ಬೆಳವಣಿಗೆಯ ಲಾಭ ಹೆಚ್ಚಿಚ್ಚು ಉಳ್ಳವರ ಕಡೆಗೇ ಹರಿದು ಹೋಗುತ್ತಿದೆ.

ಕರ್ನಾಟಕದ 154 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದರೆ ಮಹಾರಾಷ್ಟ್ರದ 74 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ. ಬರ ಬಂದಾಗ ಹಿಂದೆ ಕನಿಷ್ಠ ಬರ ಪರಿಹಾರ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸುವ ಒತ್ತಡಗಳನ್ನು ಸರ್ಕಾರಗಳು ಅನುಭವಿಸುತ್ತಿದ್ದವು. ಇಂದು ಅಂತಹ ಒತ್ತಡಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಇಲ್ಲ. ಬಂಡವಾಳಿಗನೊಬ್ಬ ರಸ್ತೆಗಳು ಸರಿಯಿಲ್ಲ, ಅಂತರ್‌ರಚನಾ ಸೌಕರ್ಯಗಳು ಸಾಲ ದೆಂದರೆ ಸರ್ಕಾರಗಳು ಕೂಡಲೇ ಪ್ರತಿಸ್ಪಂದಿಸುತ್ತದೆ.

ಈ ಶೇ. 7ಕ್ಕೂ ಹೆಚ್ಚಿನ ದರದಲ್ಲಿ ಒಟ್ಟು ಉತ್ಪಾದನೆ ಬೆಳೆದರೆ ಅದರ ಲಾಭ ಯಾರಿಗೆ ಹೋಗುತ್ತದೆ. ಎಂಬುದು ಬಹಳ ಸ್ಪಷ್ಟವಾಗಿಯೇ ಇದೆ. ಇದು ವಾಸ್ತವ ಪರಿಸ್ಥಿತಿ. ಇಂತಹ ಹೆಚ್ಚಿನ ಬೆಳವಣಿಗೆ ದರದ ಜೊತೆಗೇ ಸರ್ಕಾರಕ್ಕೆ ಹಣಕಾಸು ಖೋತಾ ಮತ್ತು ಬಜೆಟ್ ಖೋತಾಗಳು ಹೆಚ್ಚಾಗುತ್ತಿವೆ ಎಂಬ ಚಿಂತೆ. ಇಂತಹ ಖೋತಾ ಗಳನ್ನು ಸರಿದೂಗಿಸಲು ಕೇಂದ್ರ ಸರ್ಕಾರ ಬಂಡವಾಳಶಾಹಿಗಳು ತೆರಬೇಕಾಗಿರುವ ತೆರಿಗೆಗಳನ್ನು ನಿಷ್ಠುರವಾಗಿ ವಸೂಲಿ ಮಾಡುವ ವಿಚಾರ ಹೊಂದಿಲ್ಲ. ಬದಲಿಗೆ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟ ಬ್ಯಾಂಕು ಗಳಿಂದ ಮಧ್ಯಾವಧಿ ಡಿವಿಡೆಂಡ್ ಪಡೆಯುವುದು ಇತ್ಯಾದಿ ಮಾರ್ಗಗಳನ್ನೆ ಅದು ಯೋಜಿಸುತ್ತಿದೆ.

ಬಂಡವಾಳಶಾಹಿ ಜಮೀನ್ದಾರರು ಸರ್ಕಾರ ಯಾರ ಮೇಲೆ ಹೊರೆ ಹೇರುತ್ತದೆ ಯಾರಿಗೆ ಬಹುಮಾನ ನೀಡುತ್ತದೆ ಎಂಬುದೂ ಸ್ಪಷ್ಟ.

ಮೇಲೆ ಹೇಳಿರುವ ಒಟ್ಟುತ್ಪಾದನೆಯ ಬೆಳವಣಿಗೆಯ ದರ ನಿಜವೆಂದು ಒಪ್ಪಿಕೊಂಡರೂ (ಇಲ್ಲಿ ಮೋಸವಿರುವ ಸಾಧ್ಯತೆ ಇದೆ) ಅದು ಖಂಡಿತವಾಗಿ ಬಹಳ ದಿನ ಉಳಿಯುವಂತಹದ್ದಲ್ಲ.

ಅನಿವಾಸಿ ಭಾರತೀಯರ ಹಣ: ಬರೀ ಮೂರನೇ ಒಂದು ಭಾಗ ಮಾತ್ರ ಕಾನೂನಿನ ದಾರಿಯಲಿ

ಅನಿವಾಸಿ ಚೀನಿಯರು ಚೀನಾ ದೇಶದಲ್ಲಿ ಮಾಡುತ್ತಿರುವ ಹೂಡಿಕೆ ಅತಿ ದೊಡ್ಡದು. ಆದ್ದರಿಂದಲೇ ಚೀನಾ ದೇಶದ ಆರ್ಥಿಕದಲ್ಲಿ ವಿದೇಶಿ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಆಗಿದೆ ಎಂಬುದು ಗೊತ್ತಿರುವ ಸಂಗತಿ.

ಅನಿವಾಸಿ ಭಾರತೀಯರು ಭಾರತಕ್ಕೆ 14000 ದಶಲಕ್ಷ ಡಾಲರುಗಳಷ್ಟನ್ನು ಕಳುಹಿಸುತ್ತಿದ್ದಾರಂತೆ. ಇದರಲ್ಲಿ ಮೂರನೇ ಒಂದು ಭಾಗ ಮಾತ್ರ ಕಾನೂನು ಪ್ರಕಾರ ಬರುತ್ತಿರುವುದು. ಮೂರನೇ ಎರಡು ಭಾಗ ಕಾನೂನಿನ ಹೊರತಾದ ದಾರಿಗಳಲ್ಲಿ ಬರುತ್ತದಂತೆ. ಅಂದರೆ ಈ ಹಣ ಎಲ್ಲಿ ಹೇಗೆ ಹೂಡಿಕೆಯಾಗುತ್ತದೆ ಎಂಬುದರ ಮೇಲಿನ ಹಿಡಿತ ಯಾರಿಗೂ ಇಲ್ಲ. ವಿದೇಶೀ ಹೂಡಿಕೆ ಈ ರೀತಿಯಲ್ಲಿ ಬಂದರೂ ಅದರ ಬಳಕೆ ಹೇಗಾಗುತ್ತದೆ ಎಂಬುದು ತಿಳಿಯದು ಹೇಗಿದೆ ಈ ರೀತಿ.

ಎಂ.ಆರ್.ಪಿ. ಗೆ ಕೊಡಲಿ

ಕೇಂದ್ರ ಸರ್ಕಾರ ಸರಕುಗಳ ಮೇಲೆ ಎಂ.ಆರ್.ಪಿ. ಕಾಯಿದೆಯನ್ನೇ ತೆಗೆದುಹಾಕಲಿದೆ ಯಂತೆ. ಎಂ.ಆರ್.ಪಿ. ಎಂದರೆ ಗರಿಷ್ಠ ಮಾರುಕಟ್ಟೆ ಬೆಲೆ ಸೂಚಿಸಲು ಚೀಟಿ ಅಂಟಿಸಬೇಕೆಂಬುದು ನಿಯಮ. ಇಂತಹ ಚೀಟಿ ಅಂಟಿಸುವ ನಿಯಮವಿದ್ದರೆ ಗ್ರಾಹಕರಿಗೆ ಕೊಳ್ಳುವ ವಸ್ತುವಿನ ಬೆಲೆ ತಿಳಿಯುತ್ತದೆ. ಆದ್ದರಿಂದ ಗ್ರಾಹಕರಿಗೆ ಮೋಸವಾಗುವುದು ಕಡಿಮೆಯಾಗುತ್ತದೆ. ಬೆಲೆ ನಿಗದಿಪಡಿಸುವ ಕೆಲಸದಲ್ಲೆ ಮೋಸ ಮಾಡುತ್ತಾರೆ ಎಂಬುದು ಬೇರೆ ಮಾತು.

ಈಗ ಗರಿಷ್ಠ ಮಾರಾಟ ಬೆಲೆಯನ್ನೆ ಹಾಕದಿದ್ದರೆ ಅಂಗಡಿಯವ ತೆಗೆದುಕೊಂಡಿದ್ದೇ ಬೆಲೆ. ಆದ್ದರಿಂದ ಗ್ರಾಹಕರಿಗೆ ಪೂರ್ತಿ ಮೋಸವೇ. ಖಾಸಗಿ ಬಂಡವಾಳಿಗರದೇ ಮಾರುಕಟ್ಟೆಯಲ್ಲಿ ಮೇಲುಗೈಯಾದರೆ ಗ್ರಾಹಕರನ್ನು ಯಾರು ಕಾಪಾಡುತ್ತಾರೆ ಎಂಬುವುದು ಪ್ರಶ್ನೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಇಂತಹ ಹಿಂಬಾಗಿಲಿನ ಮೋಸದ ಹಲವು ಕ್ರಮಗಳನ್ನು ಜಾರಿಗೆ ತರುತ್ತಲೇ ಇದೆ.

ಇಂತಹ ಕ್ರಮಗಳ ವಿರುದ್ಧ ಕಟು ಪ್ರತಿಭಟನೆಗಳು ಬರತೊಡಗಿದರೆ ಮಾತ್ರ ಸರ್ಕಾರಕ್ಕೆ ಇಂತಹ ಕ್ರಮಗಳ ಕೈಗೊಳ್ಳುವ ಧೈರ್ಯ ಉಡುಗಿತು ಅಲ್ಲವೆ.

ದೆಹಲಿ, ಮುಂಬೈ ವಿಮಾನ ನಿಲ್ದಾಣಗಳ ಖಾಸಗೀಕರಣ

ಕೇಂದ್ರ ಸರ್ಕಾರ ಮುಂಬೈ ಮತ್ತು ದೆಹಲಿ ವಿಮಾನ ನಿಲ್ದಾಣಗಳ ಖಾಸಗೀಕರಣ ಮಾಡಲು ಎಲ್ಲ ತಯಾರಿ ನಡೆಸಿದೆ. ಈ ಜವಾಬ್ದಾರಿಯನ್ನು ಅತ್ಯಂತ ಸಮರ್ಥ ಸಂಸ್ಥೆ ನಿರ್ವಹಿಸ ಬೇಕೆಂಬುದು ಸರ್ಕಾರದ ಬಯಕೆಯಂತೆ. ಸಮರ್ಥ ನಿರ್ವಹಣೆ ಎಂದರೆ ಮಧ್ಯೆ ಕಾನೂನಿನ ತೊಡಕುಗಳು ಬರಬಾರದೆಂದಿರಬಹುದು.

ಬಹುರಾಷ್ಟ್ರೀಯ ಸಂಸ್ಥೆಗಳಾದ ಎ.ಬಿ.ಎನ್ ಅಮ್ರೋ, ಅರ್ನ್ಸ್ಟ್ ಮತ್ತು ಯಂಗ್ ಹಾಗೂ ಕೆ.ಪಿ.ಎಂ.ಜಿ.ಗಳು ಈ ವಿಷಯದಲ್ಲಿ ತಮ್ಮ ಕಾರ್ಯಕ್ಷಮತೆಯ ಬಗ್ಗೆ ಮಂತ್ರಿಗಳೆದುರು ಮಂಡನೆಯನ್ನು ಆಗಲೇ ಮಾಡಿದ್ದಾರಂತೆ.

ಬರುವ ಮೇ ತಿಂಗಳ ಕೊನೆಯೊಳಗಾಗಿ ಈ ಖಾಸಗೀಕರಣದ ಕೆಲಸವನ್ನು ಮುಗಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆಯಂತೆ.

ಖಾಸಗೀಕರಣವೆಂದರೆ ಖಾಸಗಿಯವರಿಗೆ ಅಪಾರ ಹಣ ಹರಿದು ಬರುತ್ತದೆ. ಖಾಸಗೀಕರಣದ ಜವಾಬ್ದಾರಿಯನ್ನೇ ಹೊರುವ ಸಮಾಲೋಚನಾ ಸಂಸ್ಥೆಗಳಿಗೂ ಹಣ.

ದೇಶದ ಜನಕ್ಕೇನೂ ಇದರಿಂದ ಲಾಭವಿಲ್ಲ ಬದಲಿಗೆ ದೇಶದ ರಕ್ಷಣಾ ವಿಷಯದಲ್ಲಿ ಇರುವ ಅಪಾಯ ಹೆಚ್ಚಾಗುವ ಸಾಧ್ಯತೆ ಇದೆ. ಆದರೂ ಈ ಎರಡೂ ವಿಮಾನ ನಿಲ್ದಾಣಗಳು ಪುನರ್‌ರಚನೆಗೆ 5000 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗುವುದಂತೆ. ಇಷ್ಟೆಲ್ಲ ಹಣವಿರುವಾಗ ಖಾಸಗಿಯವರು ಬಿಟ್ಟಾರೆಯೇ ಖಾಸಗೀಕರಣದಾಗಲೇಬೇಕು ಎಂದು ಹಠ ಹಿಡಿದಿದ್ದಾರೆ ಅಲ್ಲವೆ.

ನಮ್ಮ ನಿಮ್ಮ ಸಂವಾದ

ಅಸ್ಪೃಶ್ಯ ಗಣಪ !

ಸ್ವಾತಂತ್ರ ಬಂದು 56 ವರುಷ ಕಳೆದರೂ ಅಸ್ಪೃಶ್ಯತೆ ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತಿದೆ. ನಗರ ಪ್ರದೇಶಗಳಲ್ಲಿ ಅಸ್ಪೃಶ್ಯತೆ ಕಡಿಮೆಯಾಗಿದ್ದರೂ ಆಳುವ ಸರಕಾರಗಳು ಅನುಸರಿಸಿದ ನೀತಿಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಅವ್ಯಾಹತವಾಗಿ ಮುಂದುವರಿದಿದೆ. ಸಾಮಾಜಿಕ ಚಳುವಳಿಗಳು ಪ್ರಬಲವಾಗಿರುವ ಕಡೆಗಳಲ್ಲಿ ಅಸ್ಪೃಶ್ಯತೆಯ ಜ್ವಾಲೆ ಕಡಿಮೆ ಇದೆ.

ದೇವರೊಬ್ಬನೇ ನಾಮ ಹಲವು ಎಂದೆಲ್ಲಾ ಹೇಳುವ ಪುರೋಹಿತಶಾಹಿಗಳು ದಲಿತರು, ಅವರ ನಂಬಿಕೆಯ, ಭಯ ಭಕ್ತಿಯಿಂದ ಪೂಜಿಸಿದ ಗಣಪತಿ ವಿಗ್ರಹವನ್ನು ತಮ್ಮ ಓಣಿಗಳಲ್ಲಿ ಮೆರವಣಿಗೆ ಮಾಡಬಾರದೆಂದು ಒತ್ತಾಯಿಸಿದ ಘಟನೆ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಪೀಪಲ್ಲಿ ಎಂಬ ಗ್ರಾಮದಲ್ಲಿ ನಡೆದಿದೆ. ಇಂತಹ ಎಷ್ಟೋ ಘಟನೆಗಳು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದಲ್ಲೂ ನಡೆಯುತ್ತಿರುತ್ತವೆ.

ವಿನಾಯಕ ಚೌತಿಯ ಸಂದರ್ಭದಲ್ಲಿ ಪೀಪಲ್ಲಿ ಗ್ರಾಮದ ದಲಿತರು ತಮ್ಮ ವಠಾರದಲ್ಲಿ ಗಣಪತಿ ವಿಗ್ರಹ ತಂದು ಆಚರಣೆಯನ್ನು ನಡೆಸಿದರು. ಆಚರಣೆ ಮುಗಿದ ನಂತರ ನೀರಿಗೆ ಹಾಕುವ ಸಂದರ್ಭದಲ್ಲಿ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಬೇಕೆಂದು ಬಯಸಿದರೆ, ಸವರ್ಣಿಯರು ಬಿಡಲಿಲ್ಲ. ಅವರು ಕೊಟ್ಟ ಕಾರಣ, ದಲಿತರು ಕಟ್ಟಿರುದರಿಂದ ಗಣಪತಿ ವಿಗ್ರಹ ಕೂಡ ಅಸ್ಪೃಶ್ಯವಾಗಿದೆ.

ಈ ಗಣಪನ ವಿಸರ್ಜನೆಗೆ ಅವಕಾಶವನ್ನೇ ಕೊಡಲಿಲ್ಲ. ಯಾಕೆಂದರೆ ಈ ವಿಘ್ನ ವಿನಾಶಕ ವಿನಾಯಕ ದಲಿತರಿಂದ ಆರಾಧಿಸಲ್ಪಟ್ಟವನು. ತಡೆದವರೋ ಆ ಪ್ರದೇಶದ ಭಕ್ತರೂ,ಅಸ್ಪೃಶ್ಯತೆ ವಿರುದ್ಧ 'ಸಮರ' ಸಾರಿದ ಹಿಂದೂ ಧರ್ಮದ ಗುತ್ತಿಗೆದಾರರು!

2003ರ ಸೆಪ್ಟೆಂಬರ್ 1ರಂದು ಈ ಘಟನೆ ನಡೆದಿದ್ದು, ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆದುದರಿಂದ ಪೊಲೀಸರ ಮಧ್ಯಪ್ರವೇಶದಿಂದ ಮೆರವಣಿಗೆಯನ್ನು ಮರುದಿನಕ್ಕೆ ಮುಂದೂಡಲಾಯಿತು.

ಸೆಪ್ಟೆಂಬರ್ 2 ರಂದು ನಡೆದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಪೋಲೀಸ್ ಸೂಪರಿಟೆಂಡೆಂಟ್ ನೇತೃತ್ವದಲ್ಲಿ ಕಂದಾಯ ಇಲಾಖೆಯ ಮತ್ತು ಪೊಲೀಸ್ ಇಲಾಖೆಯ



ಎಲ್ಲಾ ಉದ್ಯೋಗಿಗಳು ದಲಿತರೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಆದರೂ ಮೆರವಣಿಗೆಯ ಮೇಲೆ ನಡೆದ ಕಲ್ಲು ತೂರಾಟದಿಂದಾಗಿ ಮೆರವಣಿಗೆಯನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು.

ಮರುದಿನ ಅಂದರೆ ಸೆಪ್ಟೆಂಬರ್ 3ನೇ ತಾರೀಕಿನಂದು ಆಂಧ್ರಪ್ರದೇಶ ಸರಕಾರದ ಸಣ್ಣ ನೀರಾವರಿ ಸಚಿವರಾದ ಕೆ.ಇ. ಪ್ರಭಾಕರ್ ಮತ್ತು ರಾಂಮಲ ಸೀತು ವಲಯದ ಇನ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ನೇತೃತ್ವದಲ್ಲಿ ಇನ್ನೊಮ್ಮೆ ಮೆರವಣಿಗೆ ತೆಗೆಯಲಾಯಿತು. ಆದರೂ ದಲಿತರಿಗೂ ಹಾಗೂ ದಲಿತರು ಮುಟ್ಟಿದ ಗಣೇಶನಿಗೂ ಹೋಗಲು ಪಟ್ಟಭದ್ರ ಹಿತಾಸಕ್ತಿಗಳು, ಮೂಢ ನಂಬಿಕೆಯನ್ನು ಪ್ರೋತ್ಸಾಹಿಸುವವರು ಅವಕಾಶ ನೀಡಲಿಲ್ಲ. ನಂತರ ಮೆರವಣಿಗೆಯ ದಿಕ್ಕನ್ನು ಬದಲಿಸಿ ದಲಿತರ ವಠಾರದಲ್ಲಿಯೇ ಇರುವ ಟ್ಯಾಂಕ್ ಒಂದರಲ್ಲಿ 'ಅಸ್ಪೃಶ್ಯಗಣೇಶ' ವಿಗ್ರಹವನ್ನು ಬಿಡಲಾಯಿತು.

'ಹೈಟೆಕ್' ಬಗ್ಗೆ ಉದ್ದುದ್ದ ಮಾತನಾಡುವ ಚಂದ್ರಬಾಬು ನಾಯ್ಡು ಅವರ ಆಡಳಿತದಲ್ಲಿನ ಅಮಾನವೀಯ ಪರಿಸ್ಥಿತಿ ಇದು. ಹೈಟೆಕ್ ಕೃಷ್ಣ ಆಡಳಿತದಲ್ಲಿಯೂ ಪರಿಸ್ಥಿತಿ ಭಿನ್ನವಿಲ್ಲ. ಇಂತಹ ಘಟನೆಗಳು ದಿನನಿತ್ಯ ನಡೆಯುತ್ತಿವೆ.

ಪ್ರಜಾ ಸತ್ತಾತ್ಮಕ ಶಕ್ತಿಗಳು ಇಂತಹ ಅಮಾನವೀಯ ಮೂಢ ನಂಬಿಕೆಗಳ ವಿರುದ್ಧ ಸಾಮೂಹಿಕ ಚಳುವಳಿ ನಡೆಸಬೇಕು. ಸಂವಿಧಾನದಲ್ಲಿ ನಮೂದಿಸಿದ ಸ್ವಾತಂತ್ರ, ಪೂಜಿಸುವ ಹಕ್ಕು ಎಲ್ಲರಂತೆ ದಲಿತರಿಗೂ ದೊರಕಬೇಕು. ನಾಸ್ತಿಕರಿಗೂ ಅವರ ನಂಬಿಕೆಯನ್ನು ಪಾಲಿಸುವ ಹಕ್ಕು ಇರಬೇಕು.

ಆಧಾರ

ಕೊಂಬಾಟ್ ಕಮ್ಯುನಾಲಿ

ಸಾಮ್ರಾಜ್ಯಶಾಹಿಗೆ ಸಡ್ಡು ಹೊಡೆಯುತ್ತಿರುವ ಕ್ಯೂಬಾ

ಸಮಾಜವಾದಿ ಕ್ಯೂಬಾದ ಕ್ರಾಂತಿಯನ್ನು ಬುಡಮೇಲುಗೊಳಿಸಲು ಅಮೆರಿಕನ್ ಸಾಮ್ರಾಜ್ಯಶಾಹಿ ನಡೆಸದ ಪಿತೂರಿಗಳಿಲ್ಲ. ಆದರೆ ಇವೆಲ್ಲವುಗಳ ವಿರುದ್ಧ ಸೆಟೆದು ನಿಂತಿರುವ ಕ್ಯೂಬಾ ಜಗತ್ತಿನಲ್ಲಿ ಹೋರಾಡುವ ಶಕ್ತಿಗಳಿಗೆ ಸ್ಫೂರ್ತಿ. ಈಚೆಗೆ ವಿಶ್ವಸಂಸ್ಥೆಯಲ್ಲಿ ಕ್ಯೂಬಾ ವಿರುದ್ಧದ ಅಮೆರಿಕಾದ ನಿರ್ಣಯಕ್ಕೆ ಆದ ಪ್ರಚಂಡ ಸೋಲು ಗಮನಾರ್ಹ. ಕ್ರಾಂತಿಕಾರಿ ಕ್ಯೂಬಾದತ್ತ ಒಂದು ಕಿರುನೋಟ


ಅಟ್ಲಾಂಟಿಕ್ ಸಾಗರದಲ್ಲಿ ಅಮೇರಿಕದ ಪೂರ್ವ ತೀರಕ್ಕೆ ಸನಿಹದಲ್ಲಿರುವ ಸ್ವತಂತ್ರ ದ್ವೀಪ ರಾಷ್ಟ್ರ ಕ್ಯೂಬಾ. ಬಿಜೆಪಿ ನೇತೃತ್ವದ ಭಾರತ ಸರಕಾರ ಸಾಮ್ರಾಜ್ಯಶಾಹಿ ಅಮೇರಿಕದ ಕಾಲ ಬುಡದಲ್ಲಿ ಮಂಡಿಯೂರಿ ಸಲಾಮು ಹೊಡೆಯುತ್ತಿರುವಾಗ, ಭಾರತದ ಜನಸಂಖ್ಯೆಯ ನೂರನೆ ಒಂದರಷ್ಟು ಜನರಿರುವ, ವಿಸ್ತೀರ್ಣದಲ್ಲಿ ಭಾರತದ ಮೂವತ್ತೊಂದರಲ್ಲಿ ಒಂದು ಭಾಗದಷ್ಟಿರುವ ಈ ಪುಟ್ಟ ಸ್ವಾಭಿಮಾನಿ ರಾಷ್ಟ್ರ ಕ್ಯೂಬಾ ಸಾಮ್ರಾಜ್ಯಶಾಹಿ ರಕ್ಕಸ ಅಮೇರಿಕದ ಎದುರು ಸೆಟೆದು ನಿಂತಿದೆ.

ಕ್ರಾಂತಿ ಬುಡಮೇಲುಗೊಳಿಸುವ ಸಂಚು

ಕ್ಯೂಬಾದಲ್ಲಿ ಇರುವುದು 1959 ರಲ್ಲಿ ದುಡಿಯುವ ವರ್ಗದ ನೇತೃತ್ವದ ಕ್ರಾಂತಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಮಾಜವಾದಿ ವ್ಯವಸ್ಥೆ ಮತ್ತು ಬಹುಸಂಖ್ಯಾತ ದುಡಿಯುವ ಜನರಿಂದಲೇ ಆಯ್ಕೆ ಮಾಡಲ್ಪಟ್ಟಿರುವ ಸಮಾಜವಾದಿ ಸರಕಾರ. ಹೀಗೆ ಅಲ್ಲಿ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳ ನಡುವೆ ವ್ಯತ್ಯಾಸ, ವಿರೋಧಾಭಾಸಗಳಿಲ್ಲ. ಸಮಾಜವಾದಿ ಪ್ರಜಾಪ್ರಭುತ್ವ ಬಲವಾಗಿ ಬೇರೂರಿ ನಿಂತಿರುವ ರಾಷ್ಟ್ರ ಕ್ಯೂಬಾ. ಜಗತ್ತಿನ ಎಲ್ಲೆಡೆಗೆ ತನ್ನ ಮಾದರಿಯ ಪ್ರಜಾಪ್ರಭುತ್ವವೇ ಇರಬೇಕೆಂದು ಬಯಸುತ್ತಿರುವ ಮತ್ತು ತನ್ನ ಈ ಗುರಿಯ ಈಡೇರಿಕೆಗೆ ಯಾವ ರಾಷ್ಟ್ರದ ಆಡಳಿತ ವ್ಯವಸ್ಥೆಯನ್ನಾದರೂ ಬುಡಮೇಲು ಮಾಡಲು ಹಿಂಜರಿಯದ ಸಾಮ್ರಾಜ್ಯಶಾಹಿ ಅಮೇರಿಕದ ಕಾಲಿಗೆ ಕ್ಯೂಬಾ ಪಕ್ಕೆಯಲ್ಲಿ ಚುಚ್ಚಿರುವ ಮುಳ್ಳಾಗಿದೆ. ಅದನ್ನು ನಿವಾರಿಸುವ ಸಲುವಾಗಿ ಅದು ಕ್ಯೂಬಾದ ವಿರುದ್ಧ 1959 ರಿಂದಲೇ ಕತ್ತಿ ಮಸೆಯುತ್ತಿದೆ. ತನ್ನ ಉಳಿವಿಗಾಗಿ ಸಾಮ್ರಾಜ್ಯಶಾಹಿಯ ವಿರುದ್ಧ ದಿಟ್ಟತನದಿಂದ ಹೋರಾಟ ನಡೆಸುತ್ತಿರುವ ಕ್ಯೂಬಾ ಜಗತ್ತಿನ ಸ್ವಾತಂತ್ರ್ಯ ಪ್ರಿಯರೆಲ್ಲರ ಪ್ರೀತಿ, ವಿಶ್ವಾಸ ಗಳಿಸಿದೆ.

ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನ ವಿಧಿಸಿ, ಅಲ್ಲಿಗೆ ಆಹಾರ ವಸ್ತುಗಳು ಮತ್ತು ಔಷಧಿ ಪೂರೈಕೆ ತಡೆಹಿಡಿಯುವ ಮೂಲಕ ಅಮೇರಿಕವು ಕ್ಯೂಬಾದ ಜನರನ್ನು ಹಸಿವು, ಅನಾರೋಗ್ಯ ಮತ್ತು ನಿರಾಸೆಗಳ ಕಡೆಗೆ ನೂಕಲು ಯತ್ನಿಸುತ್ತಿದೆ. ತನ್ಮೂಲಕ ತಮ್ಮ ಸರಕಾರದ ವಿರುದ್ಧ ಕ್ಯೂಬಾದ ಪ್ರಜೆಗಳು ದಂಗೆಏಳುವಂತೆ ಮಾಡುವುದೇ ಅಮೇರಿಕದ ಉದ್ದೇಶವೆಂದು ಅಮೇರಿಕನ್ ರಾಜ್ಯಾಂಗ ಖಾತೆ 1960 ರಲ್ಲಿ ಬರೆದಿರುವ ಪತ್ರದಲ್ಲಿ ಹೇಳಿರುವುದನ್ನು ಕ್ಯೂಬಾ ವಿಶ್ವಸಂಸ್ಥೆಯ ಗಮನಕ್ಕೆ ತಂದಿದೆ. ಕ್ಯೂಬಾದ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸಲು ಸಕಲ ಸಿದ್ಧತೆ ಮಾಡುತ್ತಿರುವ ಅಮೇರಿಕವು ಕ್ಯೂಬಾ 'ಜೈವಿಕ ಸಮರ' (Biological warfare)ಕ್ಕೆ ಸನ್ನಾಹ ನಡೆಸುತ್ತಿದೆಯೆಂಬ ಅಪ್ಪಟ ಸುಳ್ಳನ್ನು ಪ್ರಚಾರ ಮಾಡುತ್ತಿದೆ. ಅಧ್ಯಕ್ಷ ಜಾರ್ಜ್ ಬುಷ್ ಸಹೋದರ ಹಾಗೂ ಫ್ಲೋರಿಡಾದ ಗವರ್ನರ್ ಆಗಿರುವ ಜೆಬ್ ಬುಷ್ ಇರಾಕಿನ ಪತನಾನಂತರ ಈಗ ಕ್ಯೂಬಾದ ಸರದಿಯೆಂದು ಹೇಳಿರುವುದು ಗಮನಾರ್ಹ. ಕ್ಯೂಬಾದಲ್ಲಿ ಬುಡಮೇಲು ಕೃತ್ಯಗಳನ್ನು ನಡೆಸಿ, ಬಲವಂತದ ರಾಜಕೀಯ ಬದಲಾವಣೆ ತರುವುದಕ್ಕಾಗಿ ಅಮೇರಿಕದ ಯುಎಸ್ಏಡ್ (USAID) ಎಂಬ ಸಂಸ್ಥೆ ಈ ವರ್ಷ 1.6 ಮಿಲಿಯ ಡಾಲರುಗಳನ್ನು ತೆಗೆದಿರಿಸಿದೆ. ಈ ಉದ್ದೇಶಕ್ಕೆ ಕಳೆದ ಐದು ವರ್ಷಗಳಲ್ಲಿ ಅದು ಖರ್ಚು ಮಾಡಿರುವ ಹಣ 22 ಮಿಲಿಯ ಡಾಲರುಗಳು.

ಸಾಮ್ರಾಜ್ಯಶಾಹಿ ಭಯೋತ್ಪಾದನೆ ಕ್ಯೂಬನ್ನರಿಗೆ ಹೊಸತಲ್ಲ. ಅದು 1961 ರ 'ಬೇ ಆಫ್ ಪಿಗ್ಸ್' ದಾಳಿಯೊಂದಿಗೆ ಆರಂಭವಾಗಿತ್ತು. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಕಿರಿಚುವ ಅಮೇರಿಕ ಕ್ಯೂಬಾದ ಪ್ರಯಾಣಿಕರ ಸಾಗಾಣಿಕೆಯ ವಿಮಾನವನ್ನು ಹೊಡೆದು ಉರುಳಿಸಿ 73 ಮಂದಿ ಪ್ರಯಾಣಿಕರನ್ನು ಕೊಲೆಗೈಯುವ ನೀಚ ಕೃತ್ಯಕ್ಕೂ ಕೈಹಾಕಿದೆ. ಈ ಎಲ್ಲ ಬೆದರಿಕೆಗಳನ್ನು ಕ್ಯೂಬಾದ ಜನತೆ ಅಧ್ಯಕ್ಷ



ಸಮಾಜವಾದ ಇಲ್ಲವೇ ಸಾವು - ಫಿಡೆಲ್

ಫಿಡೆಲ್ ಕ್ಯಾಸ್ಟ್ರೋ ಅವರ ನಾಯಕತ್ವದಲ್ಲಿ ಗಂಭೀರವಾಗಿ ಪರಿಗಣಿಸಿದ್ದಾರೆ ಮತ್ತು ತಮ್ಮ ಸ್ವಾತಂತ್ರ್ಯದ ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದಾರೆ.

ಕ್ಯೂಬಾದ ವಿರುದ್ಧ ಹಗೆ ಸಾಧಿಸುತ್ತಿರುವುದು ಅಮೇರಿಕದ ಸರಕಾರ ಮಾತ್ರ. ಬಹುಪಾಲು ಅಮೆರಿಕದ ಸಾಮಾನ್ಯ ಪ್ರಜೆಗಳು ಕ್ಯೂಬಾದೊಂದಿಗೆ ಶಾಂತಿಯುತ ಸಹಬಾಳ್ವೆ, ಒಳ್ಳೆಯ ಸಂಬಂಧ ಬಯಸುತ್ತಿದ್ದಾರೆ. ಅಮೇರಿಕದ ಸಂಸತ್ತಿನ ಉಭಯ ಸದನಗಳು ಕ್ಯೂಬಾದ ಮೇಲೆ ಹೇರಿರುವ ನಿರ್ಬಂಧಗಳನ್ನು ಸಡಿಲಗೊಳಿಸ ಬೇಕೆನ್ನುವ, ಕ್ಯೂಬಾಕ್ಕೆ ಬೇಟಿ ನೀಡಲು ಬಯಸುವ ತಮ್ಮ ನಾಗರಿಕರಿಗೆ ಮುಕ್ತ ಅವಕಾಶ ನೀಡಬೇಕೆನ್ನುವ ನಿರ್ಧಾರಗಳನ್ನು ಕೈಗೊಂಡಿವೆ. ಆದರೆ ಅಮೇರಿಕಾ ಸರಕಾರ ಈ ನಿರ್ಧಾರಗಳ ವಿರುದ್ಧ 'ವಿಟೊ' ಚಲಾಯಿಸುವ ಬೆದರಿಕೆ ಒಡ್ಡುತ್ತಿದೆ.

1992 ರ 'ಟೊರಿಸೆಲ್ಲಿ' ಕಾಯಿದೆ ಹಾಗೂ 1996 ರ 'ಹೆಲ್ಮ್ಸ್ -ಬರ್ಟನ್' ಕಾಯಿದೆಗಳ ಮೂಲಕ ಕ್ಯೂಬಾಕ್ಕೆ ಆಹಾರ ವಸ್ತುಗಳು ಮತ್ತು ಔಷಧಿಗಳ ಸಾಗಾಣಿಕೆಯ ಮೇಲೆ ಮತ್ತು ಅಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ವಿರುದ್ಧ ಅಮೇರಿಕ ನಿಷೇದ ಹೇರಿದೆ. ಇದರ ಪರಿಣಾಮ ಕಳೆದ ನಾಲ್ಕು ದಶಕಗಳಲ್ಲಿ ಕ್ಯೂಬಾ 72 ಬಿಲಿಯ (1ಬಿಲಿಯ-100 ಕೋಟಿ) ಡಾಲರುಗಳಷ್ಟು (1 ಅಮೇರಿಕನ್ 0ಡಾಲರ್-ಸುಮಾರು 45 ರೂಪಾಯಿಗಳು) ನಷ್ಟವನ್ನು ಅನುಭವಿಸಿದೆ. ಅಲ್ಲಿನ ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳ ಮೇಲೆ ಇದರ ದೊಡ್ಡ ಹೊಡೆತ ಬಿದ್ದಿದೆ. ಆದರೂ ಕ್ಯೂಬಾದ ಆರೋಗ್ಯ ಇಲಾಖೆ ಸಿಬ್ಬಂದಿಯ ದಕ್ಷತೆ ಮತ್ತು ತರಬೇತಿ ಅಲ್ಲಿನ ಆರೋಗ್ಯ ಕ್ಷೇತ್ರದ ಮೇಲೆ ಬೀಳ ಬಹುದಾಗಿದ್ದ ದುಷ್ಪರಿಣಾಮವನ್ನು ತಡೆಯುವಲ್ಲಿ ಬಹುತೇಕ ಸಫಲವಾಗಿವೆ.

ನಗ್ನ ಆಕ್ರಮಣ

ಈ ವರ್ಷದ ಆದಿಯಿಂದ ಕ್ಯೂಬಾದ ವಿಮಾನಗಳನ್ನು, ನಾವೆಗಳನ್ನು ಅಪಹರಿಸುವಂತೆ ಕ್ಯೂಬನ್ ಭಿನ್ನಮತೀಯರಿಗೆ ಅಮೇರಿಕ ಕುಮ್ಮಕ್ಕು ನೀಡಲಾರಂಭಿಸಿದೆ. ಫ್ಲೋರಿಡಾದಲ್ಲಿ ನೆಲೆಸಿರುವ ಬುಷ್ ಬೆಂಬಲಿಗ ಬಲಪಂಥೀಯ ಕ್ಯೂಬನ್ ವಲಸಿಗರು ಕ್ಯೂಬಾದ ಮೇಲೆ ಆಕ್ರಮಣ ನಡೆಸುವಂತೆ ಬುಷ್ ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಕಳೆದ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ತನ್ನ ಆಯ್ಕೆಗೆ ನಿರ್ಣಾಯಕವಾಗಿದ್ದ ಅವರ ಮತಗಳು ತನ್ನ ಮರು ಆಯ್ಕೆಗೆ ಅಗತ್ಯವೆಂದು ಬಗೆದಿರುವ ಅಧ್ಯಕ್ಷ ಬುಷ್ ಅವರ ಒತ್ತಡಗಳಿಗೆ ಮಣಿಯುವ ಸೂಚನೆಗಳಿವೆ. ಬುಷ್ ಸರಕಾರವು ಕ್ಯೂಬಾದ ರಾಜಧಾನಿ ಹವಾನಾದಲ್ಲಿರುವ ಅಮೇರಿಕನ್ ಹಿತಾಸಕ್ತಿಗಳ ಇಲಾಖೆಯ ಬಾಡಿಗೆ ಬಂಟರಿಗೆ ಮತ್ತು ಕ್ಯೂಬನ್ ಭಿನ್ನಮತೀಯರಿಗೆ ರೇಡಿಯೋ ಮತ್ತು ಟೆಲಿವಿಷನ್‌ಗಳ ಮೂಲಕ ಅಲ್ಲಿ ಬುಡಮೇಲು ಕೃತ್ಯಗಳನ್ನು ನಡೆಸಲು ಹೆಚ್ಚಿನ ಹಣ ಒದಗಿಸುತ್ತಿದೆ. ಇದು ಅಂತಾರಾಷ್ಟ್ರೀಯ ಸಂಪರ್ಕ ಕಾನೂನಿನ ಉಲ್ಲಂಘನೆಯಾಗಿದೆ.

ಕ್ಯೂಬಾಕ್ಕೆ ಭೇಟಿ ನೀಡುವ ಅಮೇರಿಕನ್ ಪ್ರಜೆಗಳು ಬುಷ್ ಸರಕಾರದ ಹೆಚ್ಚಿನ ಕಿರುಕುಳಕ್ಕೆ ತುತ್ತಾಗುತ್ತಿದ್ದಾರೆ. ಅದೇ ವೇಳೆ ಕ್ಯೂಬಾದ ವಿರುದ್ಧ ಅಪರಾಧಗಳಲ್ಲಿ ತೊಡಗುವವರನ್ನು ಬುಷ್ ಸರಕಾರ ಪುರಸ್ಕರಿಸುತ್ತಿದೆ. ಕ್ಯೂಬಾದ ಪ್ರಯಾಣಿಕರ ವಿಮಾನ ಅಪಹರಿಸಿ ಅಮೇರಿಕಕ್ಕೆ ಒಯ್ದು ವಿಮಾನಗಳ್ಳರನ್ನು ಘಟನೆ ನಡೆದ ಕೆಲವೇ ದಿನಗಳಲ್ಲಿ ಜಾಮೀನಿನ ಮೇಲೆ ಬಿಡಲಾಗಿದೆ. ಆದರೆ ಕ್ಯೂಬಾ ಅಮೇರಿಕದ ವಿಮಾನಗಳ್ಳರಿಗೆ ಕಠಿಣ ಸಜೆ ವಿಧಿಸಿದೆ. ಅಮೇರಿಕ ಮತ್ತು ಇತರ ರಾಷ್ಟ್ರಗಳ ವಿರುದ್ಧ ಭಯೋತ್ಪಾದನೆಯಲ್ಲಿ ತೊಡಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಕಾಯಿದೆಯನ್ನು ಕ್ಯೂಬಾ 2001 ರ ಡಿಸೆಂಬರ್‌ನಲ್ಲೇ ಅಂಗೀಕರಿಸಿದೆ. ಆದರೆ ಅಮೇರಿಕ ಕ್ಯೂಬಾ ವಿರೋಧಿ ಅರೆಸೇನಾ ಪಡೆಗಳಿಗೆ ತನ್ನ ನೆಲದಿಂದ ಕಾರ್ಯವೆಸಗಲು ಆಸ್ಪದವೀಯುತ್ತಿದೆ. ಕ್ಯೂಬಾದ ವಿರುದ್ಧ ಬುಡಮೇಲು ಕೃತ್ಯದಲ್ಲಿ ತೊಡಗಿರುವ ಗುಂಪಿನ ಬಗ್ಗೆ ಸುಳಿವು ನೀಡಿರುವ ಐವರು ದೇಶಪ್ರೇಮಿ ಕ್ಯೂಬನರನ್ನು ಬಂಧಿಸಿರುವ ಅಮೇರಿಕ ಅವರ ಮೇಲೆ ಬೇಹುಗಾರಿಕೆಯ ಸುಳ್ಳು ಆಪಾದನೆ ಹೊರಿಸಿ ಅವರನ್ನು ಸೆರೆಯಲ್ಲಿ ಇರಿಸಿದೆ. ಆದರೆ ಅಮೇರಿಕದ ಈ ಎಲ್ಲ ಕೃತ್ಯಗಳನ್ನು ಇಡೀ ಜಗತ್ತು ಖಂಡಿಸುತ್ತಿದೆ. ಕ್ಯೂಬಾದ ಮೇಲೆ ಹೇರಲ್ಪಟ್ಟಿರುವ ನಿರ್ಬಂಧಗಳನ್ನು ರದ್ದುಪಡಿಸುವಂತೆ ವಿಶ್ವಸಂಸ್ಥೆಯಲ್ಲಿ ಮಂಡಿಸಲ್ಪಟ್ಟಿರುವ ನಿರ್ಣಯದ ವಿರುದ್ಧ ಅಮೇರಿಕದ ಜೊತೆಗೆ ಮತ ಚಲಾಯಿಸಿದ್ದು ಇಸ್ರೇಲ್ ಮತ್ತು ಮೈಕ್ರೊನೇಸಿಯಾ ಎಂಬ ಪುಟ್ಟ ದ್ವೀಪ ಮಾತ್ರ ವಿರುದ್ಧದು. ಸಾಮ್ರಾಜ್ಯಶಾಹಿ ಅಮೇರಿಕ ಅನುಸರಿಸುತ್ತಿರುವ ಕ್ಯೂಬಾ ನೀತಿ ಮೂಲೆಗುಂಪಾಗಿರುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ.

● ಹೆಡ್ಡು ಸದಾಶಿವಭಟ್ಟ

ಬೀಡಿ ಸುತ್ತುವ ಮಹಿಳೆಗೆ ಹೊಗೆಸೊಪ್ಪು ಅಪಾಯವೇ?




ವಿಶ್ವ ಆರೋಗ್ಯ ಸಂಸ್ಥೆ ಹೊಗೆಸೊಪ್ಪಿನ ವಿರುದ್ಧ ಜಾಗತಿಕ ಮಟ್ಟದ ಪ್ರಚಾರ ಎತ್ತಿಕೊಂಡಿದೆಯಾದರೂ ಬೀಡಿ ಸುತ್ತುವ ಮಹಿಳಾ ಕಾರ್ಮಿಕರ ಬಗ್ಗೆ ಆತಂಕ ವ್ಯಕ್ತವಾಗಿಲ್ಲವೆಂದೇ ಹೇಳಬಹುದಾಗಿದೆ.

'ಬೀಡಿ ಸುತ್ತುವ ಕೆಲಸ ಅಪಾಯಕರ' ಎಂದು ಸರಕಾರದ ಕಾರ್ಮಿಕ ನೀತಿಗಳು ಸಾರುತ್ತಿವೆ. ಆದರೂ ಬೀಡಿ ಸುತ್ತುವ ಮಹಿಳೆಗೆ ಇದರ ಬಗ್ಗೆ ಕನಿಷ್ಟ ಮಾಹಿತಿಯೂ ಇಲ್ಲ.

ಬೀಡಿ ಸುತ್ತುವ ಮಹಿಳೆಯ ಸಮಸ್ಯೆಗಳೇನು?

ಬೀಡಿ ಸುತ್ತುವ ಮಹಿಳೆ ದಿನಕ್ಕೆ 10 ರಿಂದ 16 ಗಂಟೆ ಸತತವಾಗಿ ಕುಳಿತು ಕೆಲಸ ಮಾಡಬೇಕಾಗುತ್ತದೆ. ಬೆನ್ನು ನೋವು ಕಂಡಾಗಲೇ ಕೆಲಸದಿಂದ ಮೇಲೆ ಏಳುವ ಪ್ರವೃತ್ತಿ ಅವಳಿಗೆ ಬಂದಿದೆ. ಮಕ್ಕಳಿಗೆ ಕಾಯಿಲೆ ಯಾದಾಗ, ಅಥವಾ ಮನೆಗೆ ಅತಿಥಿ ಬಂದಾಗ ಮಾತ್ರ, ಅವಳು ಕೆಲಸದಿಂದ ವಿಶ್ರಾಂತಿ ಪಡೆಯುತ್ತಾಳೆ. ಅವಳಿಗೆ ಸಿಗುವ 40 ರಿಂದ 50 ರೂ. ದಿನಗೂಲಿ ಅವಳಿಗೆ ಅತ್ಯವಶ್ಯಕ ವಾಗಿರುವುದರಿಂದ ಅವಳು ವಿಶ್ರಾಂತಿ, ಮನೋರಂಜನೆ, ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುತ್ತಿಲ್ಲ. ಅವಳು ಕೆಲಸ ಮಾಡುವ ಸ್ಥಳದಲ್ಲಿ ಗಾಳಿ, ಬೆಳಕು ಬಹಳ ಕಡಿಮೆ. ಗಾಳಿ, ಬೆಳಕು ಆರೋಗ್ಯಕ್ಕೆ ಅತ್ಯವಶ್ಯಕ ಹಾಗೂ ಮಹಿಳೆ ಸತತವಾಗಿ ಗಾಳಿ ಬೆಳಕು ಇಲ್ಲದ ಸ್ಥಳದಲ್ಲಿ ಕೆಲಸ ಮಾಡುವುದರಿಂದ ಅನಾರೋಗ್ಯ ಉಂಟಾಗುತ್ತದೆ.

ಬೀಡಿ ಸುತ್ತುವಾಗ ಹೊಗೆಸೊಪ್ಪಿನ ಕಣಗಳು ಪುಪ್ಪುಸಗಳಲ್ಲಿ ಹೋಗುತ್ತವೆ. ಇದು ಅವಳ ಗಮನಕ್ಕೆ ಬರುವುದೇ ಇಲ್ಲ. ಇವಳ ಪರಿಸ್ಥಿತಿ ಬೀಡಿ ಸೇದಿದವರಷ್ಟೇ ಅಪಾಯದಿಂದ ಕೂಡಿರುತ್ತದೆ. ಇದರ ಪರಿಣಾಮವಾಗಿ ಕೆಮ್ಮು, ಕಫ, ಉಸಿರಾಟದ ತೊಂದರೆ, ಉಂಟಾಗುತ್ತದೆ. ಬೀಡಿ ಸುತ್ತುವ ಮಹಿಳೆಯರಲ್ಲಿ ಅಸ್ತಮಾ, ಕ್ಷಯರೋಗ, ಕ್ಯಾನ್ಸರ್ ಕೂಡ ಕಂಡುಬರುತ್ತದೆ. ಬಡತನ, ಅನಕ್ಷರತೆ, ಪರಿಸರ ಮಾಲಿನ್ಯ ಪೌಷ್ಟಿಕ ಆಹಾರದ ಕೊರತೆ,



ಸ್ವಚ್ಛ ಕುಡಿಯುವ ನೀರಿನ ಅಭಾವ ಅವಳ ಆರೋಗ್ಯ ಸಮಸ್ಯೆಯನ್ನು ಹೆಚ್ಚಿಸುತ್ತದೆ. ಈ ಮಹಿಳೆಯರು ದೈಹಿಕ ಅನಾರೋಗ್ಯದೊಂದಿಗೆ, ಮಾನಸಿಕ ಹಾಗೂ ಸಾಮಾಜಿಕ ಅಸ್ವಸ್ಥತೆಯನ್ನೂ ಎದುರಿಸಬೇಕಾಗುತ್ತದೆ.

ಇಷ್ಟೆಲ್ಲ ಸಮಸ್ಯೆ ಇದ್ದರೂ ಏಕೆ ಮಹಿಳೆಯರು ಈ ಕೆಲಸದಲ್ಲೇ ತೊಡಗಿರುತ್ತಾರೆ? ದಿನಗೂಲಿಗೆ ಮಹಿಳೆ ವ್ಯವಸಾಯ ಮಾಡಲು ಹೋಗಬಹುದಾಗಿದೆ. ಆದರೆ ಮಹಿಳೆ ಆ ಕೆಲಸಕ್ಕೆ ಹೊರಗೆ ಹೋಗಬೇಕಾಗುತ್ತದೆ. ಮನೆಯಲ್ಲೇ ಕುಳಿತು ಮಾಡುವ ಬೀಡಿ ಸುತ್ತುವ ಕೆಲಸ ಹೆಚ್ಚು ಪ್ರಯೋಜಕ ಎಂದು ಆಕೆಗೆ ಅನಿಸಿರಲು ಸಾಧ್ಯ.

ಈ ಕಾರ್ಮಿಕರಿಗೆ ಆರೋಗ್ಯ ತಪಾಸಣೆ, ಚಿಕಿತ್ಸಾ ಸೌಲಭ್ಯ ಅಗತ್ಯ. ಈ ಕೆಲಸಗಾರರು ಮಹಿಳೆಯರೇ ಆಗಿದ್ದರಿಂದ ಅವರಿಗೆ ಹೆರಿಗೆ ರಜ, ಹಾಗೂ ಇತರೆ ಕೆಲಸಗಾರರಿಗೆ ದೊರಕುವ ಬೋನಸ್, ಪ್ರಾವಿಡೆಂಟ್ ನಿಧಿ ಇತ್ಯಾದಿಗಳು ದೊರಕಬೇಕು. ಈ ಎಲ್ಲ ಅಗತ್ಯತೆಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಕೆಲಸವಾಗಬೇಕು.

ಇದು ಅಸಂಘಟಿತ ಕ್ಷೇತ್ರದ ಉದ್ಯಮ. ಈಗ ಅವರು ತಮ್ಮ ದಿನಗೂಲಿಯ ಹಕ್ಕಿಗಾಗಿ ಹೋರಾಡುತ್ತಿದ್ದಾರೆ. ಆರೋಗ್ಯದ ವಿಷಯಗಳು ಇನ್ನೂ ಪ್ರಾಮುಖ್ಯತೆ ಪಡೆದಿಲ್ಲ. ಈ ಉದ್ಯಮ ಸಾಕಷ್ಟು ವಿದೇಶಿ ವಿನಿಮಯ ಗಳಿಸುತ್ತಿರುವುದರಿಂದ ಮಹಿಳೆಯರೇ ಹೆಚ್ಚು ದುಡಿಯುವ ಈ ಉದ್ದಿಮೆಯ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸಿ ಕೊಡುವುದು ಸರಕಾರದ ಜವಾಬ್ದಾರಿಯಾಗಬೇಕು.



ಭಾರತ ವಿದ್ಯಾರ್ಥಿ ಫೆಡರೇಷನ್‌ನ ರಾಷ್ಟ್ರ ಸಮ್ಮೇಳನವೊಂದಲ್ಲಿ ಪ್ರತಿನಿಧಿಗಳಿಗೆ ನೀಡಲಾದ ಅರ್ಹತಾ ಪರಿಶೀಲನಾ ಪತ್ರಿದಲ್ಲಿ ಒಂದು ಪ್ರಶ್ನೆ ಈ ರೀತಿ ಇತ್ತು. ನಿಮ್ಮ ಮೆಚ್ಚಿನ ಕ್ರೀಡಾಪಟು ಯಾರು? ಬಹುಮತದ ಉತ್ತರ ಸಚಿನ್ ತೆಂಡೂಲ್ಕರ್ ಎಂದಾಗಿರಲಿಲ್ಲ ಬದಲಾಗಿ ಐ.ಎಂ. ವಿಜಯನ್ ಎಂದಾಗಿತ್ತು.

ಭಾರತ ಕಂಡ ಶ್ರೇಷ್ಠ ಫುಟ್ಬಾಲ್ ಆಟಗಾರರಲ್ಲಿ ಒಬ್ಬ ಈ ಐ.ಎಂ.ವಿಜಯನ್. ಕೇರಳದಲ್ಲಿ ದುಡಿಯುವ ವರ್ಗದ ಚಳುವಳಿ ಬೆಳೆದ ರೀತಿಯಲ್ಲಿಯೇ ದುಡಿಯುವ ಜನರ ಕ್ರೀಡೆಯಾದ ಫುಟ್ಬಾಲ್ ಕೂಡಾ ಬಹಳ ಜನಪ್ರಿಯ ಕ್ರೀಡೆ. ಕೇರಳದ ತ್ರಿಶೂರಿನಲ್ಲಿ ಹುಟ್ಟಿದ ಐ.ಎಂ.ವಿಜಯನ್ ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು ತಾಯಿಯ ಆರೈಕೆಯಲ್ಲಿ ಬೆಳೆದ. ಬಾಲ್ಯದಲ್ಲಿ ತ್ರಿಚೂರಿನ ಫುಟ್ಬಾಲ್ ಪರಂಪರೆಗೆ ಅನುಗುಣವಾಗಿ ಚೆಂಡನ್ನು ಬೀದಿಗಳಲ್ಲಿ, ಮೈದಾನದಲ್ಲಿ ಒದೆಯುತ್ತಲೇ ಬೆಳೆದ ಹುಡುಗ. ಮನೆಕೆಲಸ ಮಾಡಿ ಮಗನನ್ನು ಸಲಹುತ್ತಿದ್ದ ತಾಯಿ, ತಾಯಿಗೆ ಸಹಾಯವಾಗಲೆಂದು ಫುಟ್ಬಾಲ್ ಆಟ ನಡೆಯುವ ಕ್ರೀಡಾಂಗಣಗಳಲ್ಲಿ ಮೈದಾನಗಳಲ್ಲಿ ಗೋಲಿಸೋಡಾ ಹಾಗೂ ಕಡಲೆಕಾಯಿ ಮಾರಿ ಜೀವನ ನಿರ್ವಹಣೆ ಮಾಡುತ್ತ ಕಡುಬಡತನವನ್ನು ಫುಟ್ಬಾಲ್‌ನೊಂದಿಗೆ ಬೆಸೆದು ಬೆಳೆದು ನಿಂತ ಬಾಲಕನೇ ಐ.ಎಂ:ವಿಜಯನ್.

ಒರಟು ನಿಲುವಿನ ಸಣ್ಣಗಿದ್ದರೂ ದೃಢಕಾಯದ ಬಾಲಕ ಬಾಲ್ಯದಲ್ಲಿಯೇ ಫುಟ್ಬಾಲ್ ಕೌಶಲ್ಯವನ್ನು ಮೈಗೂಡಿಸಿಕೊಂಡ 14 ರ ವಯಸ್ಸಿನಲ್ಲಿ ತ್ರಿಚೂರಿನ ಸ್ಥಳೀಯ ಕ್ಲಬ್ ಪರ ಆಡುತ್ತಿದ್ದ ಬಾಲಕನ ಫುಟ್ಬಾಲ್ ಕೌಶಲ್ಯ ತಜ್ಞರ ಗಮನ ಸೆಳೆಯಿತು. ತನ್ನ 17ನೇ ವಯಸ್ಸಿಗೆ ಕೇರಳದ ಎಲ್ಲಾ ಕ್ರೀಡೆಗಳಲ್ಲಿ ಪ್ರಸಿದ್ಧ ತಂಡವಾಗಿದ್ದ ಕೇರಳ ಪೋಲೀಸ್ ತಂಡ ಸೇರಿದ ವಿಜಯನ್ ಅದಕ್ಕಿಂತ ಮೊದಲು ಕೇರಳದ ಕಿರಿಯರ ತಂಡವನ್ನು ಪ್ರತಿನಿದಿಸಿದ್ದ. ಬಡತನದ ಬಾಗನ್ ಪರವಾಗಿ ವೃತ್ತಿಪರ ಆಟಗಾರನಾಗಿ ತನ್ನ ಪ್ರತಿಭೆಯಿಂದ ಬಂಗಾಲದ ಜನರ ನೆಚ್ಚಿನ ತಾರೆಯಾದ. ಕೇರಳದಲ್ಲಿ ಬಾಲಕನಾಗಿದ್ದಾಗ ಆಟದ ಮೈದಾನದಲ್ಲಿ ವಿಜಯ ಹಾಗೂ ಮುಂದೆ ಕೇರಳ ಪೋಲೀಸ್ ತಂಡದ ಪ್ರಸಿದ್ಧ ಆಟಗಾರನಾದಾಗ "ವಿಜಯೆಟ್ಟಾ" ಎಂದು ಆತ್ಮೀಯತೆಯಿಂದ ಕೇರಳದ ಜನರು ಕರೆಯುತ್ತಿದ್ದ ಯುವಕ ಬಂಗಾಲಿಗಳ ಬಾಯಲ್ಲಿ ಬಿಜೋಯನ್ ಎಂದು ಮನೆ ಮಾತಾದ. ತನ್ನ ಹದಿನೇಳನೇ ವಯಸ್ಸಿನಿಂದ ಮುಂದೆ ಸತತವಾಗಿ 17 ವರ್ಷಗಳ ಆಟಗಾರನಾಗಿದ್ದ. ಎಲ್ಲಾ ರಾಜ್ಯಗಳಲ್ಲೂ ಫುಟ್ಬಾಲ್ ಕೌಶಲ್ಯದ ಮೂಲಕ ಸ್ಥಳಿಯ ಜ[...] ಅಚ್ಚುಮೆಚ್ಚಿನ ಆಟಗಾರನಾಗಿದ್ದಾನೆ. ಬಂಗಾ[...] ಜನತೆ ಐ.ಎಂ. ವಿಜಯನ್‌ನ ಫುಟ್ಬಾ[...] ಬದುಕನ್ನು ಆಧರಿಸಿ ಕಾಲೋ ಹರಿಣ್ (...) ಜಿಂಕೆ) ಎಂಬ ಸಾಕ್ಷ್ಯ ಚಿತ್ರವನ್ನು ತಯಾರಿಸ[...] ಈತನ ಜನಪ್ರೀಯತೆಗೆ ಸಾಕ್ಷಿ. ಫುಟ್ಬಾ[...] ಆಟಗಾರರಿಗೆ ಅಪರೂಪವಾಗಿ ಸಿಗುವ ದೇ[...] ಪ್ರತಿಷ್ಠಿತ ಕ್ರಿಡಾ ಪ್ರಶಸ್ತಿಯಾದ ಅರ್ಜುನ ಪ್ರ[...] ಪುರಸ್ಕೃತ ಜೊತೆಗೆ ಮೂರು ಬಾರಿ ದೇ[...] ಸರ್ವಶ್ರೇಷ್ಠ ಫುಟ್ಬಾ[...] ಆಟಗಾರ ಪ್ರಶಸ್ತಿಗ[...] ದ್ದಾನೆ. ಇದೀಗ ತನ್ನ [...] ನೇ ವಯಸ್ಸಿನಲ್ಲಿ ದೇ[...] ಪರ ಕೊನೆಯ ಸ[...] ಇತ್ತೀಚಿಗೆ ನಡೆದ ಅಫ[...] ಏಷ್ಯನ್ ಕ್ರೀಡಾಕೂಟ[...] ಭಾರತ ಫುಟ್ಬಾಲ್‌ನ[...] ಬೆಳ್ಳಿಪದಕ ಗೆಲ್ಲುವ[...] ಪ್ರಮುಖ ರೂವಾರಿಯ[...] ಐ.ಎಂ.ವಿಜಯ[...] ರಾಷ್ಟ್ರವನ್ನು ಪ್ರತಿನಿಧಿಸ[...]ಲ್ಲಿಂದ ನಿವೃತ್ತಿ ಘೋಷಿಸಿದ್ದಾನೆ. ಇದೀಗ ತನ್ನ ಸ್ವ[...] ಊರಾದ ತ್ರಿಶೂರಿನಲ್ಲಿ ಕಿರಿಯ ಫುಟ್ಬಾ[...] ಆಟಗಾರರ ತರಬೇತಿಗೆ ಕ್ರೀಡಾ ಅಕಾಡೆಮಿಯ[...] ಸ್ಥಾಪಿಸಿರುವ ವಿಜಯನ್ ತಾನು ಬಾಲ್ಯದ[...] ಅನುಭವಿಸಿದ ಕಷ್ಟಗಳನ್ನು ಮನಸ್ಸಿನಲ್ಲಿಟ್ಟು ಯ[...] ಫುಟ್ಬಾಲ್ ಪಟುಗಳನ್ನು ಬೆಳೆಸುವತ್ತ ಗಮ[...] ಹರಿಸಿರುವುದು ಅಭಿನಂದನಾರ್ಹ.

ಕಡುಬಡತನದಿಂದ ಮೇಲೆದ್ದು ಬಂದ ಫುಟ್‌ಬಾಲ್ ತಾರೆ ಐ.ಎಂ.ವಿಜಯನ್

ಅತ್ಯಂತ ಬಡತನದ ಕುಟುಂಬದಲ್ಲಿ ಬೆಳೆದು ಬೆಳಗಿದ ಫುಟ್ಬಾಲ್ ತಾರೆ ವಿಜಯನ್‌ರ ಸಾಧನೆ ರೋಚಕ. ಸರಿಯಾದ ಅವಕಾಶವಿಲ್ಲದೇ ಕಮರಿದ ಪ್ರತಿಭೆಗಳು ಅದೆಷ್ಟೋ? ಇದು ಬದಲಾಗುವುದೆಂದು?



ಬೇಗೆ ನಿವಾರಣೆಗೆ ಆಧಾರವಾಗಿ ಫುಟ್ಬಾಲ್ ಪ್ರತಿಭೆಯ ಮೂಲಕ ದೊರೆತ ವೃತ್ತಿಯ ಬಳಿಕ ವಿಜಯನ್ ಸಾಧನೆಯಲ್ಲಿ ಎಂದೂ ಹಿಂತಿರುಗಿ ನೋಡಲಿಲ್ಲ. ಕೇರಳ ರಾಜ್ಯವನ್ನು ಪ್ರತಿನಿಧಿಸಿ ಕೇರಳ ರಾಷ್ಟ್ರೀಯ ಫುಟ್ಬಾಲ್ ಪಂದ್ಯಾವಳಿಯಾದ ಸಂತೋಷ್ ಟ್ರೋಫಿ ಗೆಲ್ಲಲು ಸಹಕರಿಸಿದ ವಿಜಯನ್ ತನ್ನ ತಂಡವಾದ ಕೇರಳ ಪೋಲೀಸ್ ತಂಡ ಫುಟ್ಬಾಲ್‌ನಲ್ಲಿ ಪ್ರತಿಷ್ಠಿತ ಫೆಡರೇಷನ್ ಕಪ್ ಗೆಲ್ಲಲು ರೂವಾರಿಯಾದ. ಮುಂದೆ ತನ್ನ ಆಟದ ಕೌಶಲ್ಯವನ್ನು ಆದರಿಸಿ ಅರಸಿ ಬಂದ ಅವಕಾಶಗಳನ್ನು ಕೈಗೆತ್ತಿಕೊಳ್ಳುತ್ತಾ ಫುಟ್ಬಾಲ್ ಮೆಕ್ಕಾ ಎಂದು ಹೆಸರಾದ ಕಲ್ಕತ್ತಾಗೆ ಆಗಮಿಸಿದ. ದೇಶದ ಪ್ರಸಿದ್ಧ ಫುಟ್ಬಾಲ್ ತಂಡವಾದ ಮೋಹನ್ ಕಾಲ ಭಾರತ ತಂಡವನ್ನು ಪ್ರತಿನಿಧಿಸಿದ್ದ ಐ.ಎಂ. ವಿಜಯನ್ ತನ್ನ ಸ್ವಂತ ಸಾಮರ್ಥ್ಯದ ಮೂಲಕ ಫುಟ್ಬಾಲ್‌ನಲ್ಲಿ ದೇಶದೆಲ್ಲೆಡೆ ಪ್ರಸಿದ್ದನಾದ. ಮುಂದೆ ಪಂಜಾಬಿನ ಜೆ.ಸಿ.ಟಿ. ತಂಡ ಸೇರಿದ ವಿಜಯನ್ ಅಲ್ಲಿಂದ ಪುನಃ ಕೇರಳದ ವೃತ್ತಿಪರ ಫುಟ್‌ಬಾಲ್ ತಂಡವಾದ ಎಫ್.ಸಿ.ಕೊಚ್ಚಿನ್ ತಂಡ ಸೇರಿದ. ಮುಂದೆ ಪುನಃ ಕಲ್ಕತ್ತಾದ ಪ್ರಸಿದ್ಧ ಈಸ್ಟ್ ಬೆಂಗಾಲ್ ಪರ ಆಡಿದ ಐ.ಎಂ. ವಿಜಯನ್ ಇದೀಗ ಪುನಃ ಪಂಜಾಬಿನ ಪ್ರಸಿದ್ಧ ತಂಡ ಜೆ.ಸಿ.ಟಿ. ಪರ ಆಡುತ್ತಿದ್ದಾನೆ. ತಾನು ಆಡಿದ ಎಲ್ಲಾ ತಂಡಗಳ ಗೆಲುವಿನ ರೂವಾರಿಯಾದ ಐ.ಎಂ. ವಿಜಯನ್ ಮಲೇಶಿಯಾದಲ್ಲಿ ಕೂಡಾ ಸ್ವಲ್ಪ ಕಾಲ ವೃತ್ತಿಪರ ಫುಟ್ಬಾಲ್

■ ಮೆಲ್ಕಿಯೋರ್. ಆರ್.

ಡಿ.ಡಿ.ಕೊಸಾಂಬಿಯವರು ವೈಚಾರಿಕ ಜಗತ್ತಿನ ಮೈಲುಗಲ್ಲು

ಡಾ. ವಿಜಯ ಪೂಣಚ್ಚ

ಚಿಂತನ ಉತ್ತರ ಕನ್ನಡ ಪ್ರಕಟಿಸಿದ 'ಪುರಾಣ ಮತ್ತು ವಾಸ್ತವ' ಮತ್ತು ಅಧ್ಯಯನ ಪ್ರಕಾಶನ ಪ್ರಕಟಿಸಿದ 'ಜಾಗೃತಿ' ಕಾದಂಬರಿ ಇತ್ತೀಚಿಗೆ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಶಿವಮೊಗ್ಗದಲ್ಲಿ ಬಿಡುಗಡೆಗೊಂಡಿತು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ಡಾ. ವಿಜಯ ಪೂಣಚ್ಚ ಬಿಡುಗಡೆ ಮಾಡಿದರು. ಅದರ ವರದಿ ಇಲ್ಲಿದೆ.

"ಇಂದು ವೈಚಾರಿಕ ಜಗತ್ತಿನಲ್ಲಿ ಮಾರ್ಕ್ಸ್‌ವಾದಿ ವೈಚಾರಿಕ ಪರಂಪರೆಯ ಪರಿಚಯ ಇದೆ. ಆದರೆ 1950-60 ರ ದಶಕದಲ್ಲಿ ಅಷ್ಟೇನೂ ಪರಿಚಿತವಲ್ಲದ ಸಂದರ್ಭದಲ್ಲಿ ಡಿ.ಡಿ.ಕೊಸಾಂಬಿಯವರ ಚಿಂತನೆ, ಬರಹಗಳು ಒಂದು ಮೈಲುಗಲ್ಲಾದವು. ಮಾರ್ಕ್ಸಿಸ್ಟ್ ಪರಂಪರೆಯನ್ನು ಅರ್ಥಪೂರ್ಣವಾಗಿ ಹುಟ್ಟುಹಾಕಿದವರು ಪ್ರೊ. ಕೊಸಾಂಬಿಯವರು. ಅವರ ಮಹತ್ವದ ಕೃತಿಯ ಕನ್ನಡ ಅನುವಾದವನ್ನು ಹೊರತರುತ್ತಿರುವುದು ಹೆಚ್ಚು ಅರ್ಥಪೂರ್ಣ" ಎಂದು ಕನ್ನಡ ವಿ.ವಿ. ಹಂಪಿಯ ಪ್ರೊ. ವಿಜಯ ಪೂಣಚ್ಚ ಹೇಳಿದರು. ಅವರು 'ಚಿಂತನ ಉತ್ತರ ಕನ್ನಡ' ಪ್ರಕಟಿಸಿದ ಡಿ.ಡಿ.ಕೊಸಾಂಬಿಯವರ 'ಪುರಾಣ ಮತ್ತು ವಾಸ್ತವ' (ಅನು : ಟಿ.ಎಸ್.ವೇಣುಗೋಪಾಲ, ಶೈಲಜ) ಮತ್ತು ಚಿನ್ನಪ್ಪ ಭಾರತಿಯವರ 'ಜಾಗೃತಿ' (ಅನು: ಎಂ.ಪಿ.ಸುಶೀಲ) ಪುಸ್ತಕಗಳನ್ನು ಕುವೆಂಪು ವಿದ್ಯಾಲಯದ ವೆಂಕಟರಾಮಯ್ಯ ಸಭಾಭವನದಲ್ಲಿ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಚಿಂತನ, ಉತ್ತರ ಕನ್ನಡ-ಇತಿಹಾಸ ಸಂಘ-ಕುವೆಂಪು ವಿ.ವಿ. ಇತಿಹಾಸ ವೇದಿಕೆ, ಶಿವಮೊಗ್ಗ ಸಂಯುಕ್ತವಾಗಿ ಈ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿದ್ದವು.

ಅಂದಿನ ಮಾರ್ಕ್ಸ್‌ವಾದಿಗಳಿಗೆ ಎರಡು ಸವಾಲುಗಳಿದ್ದವು. ಒಂದು ಆಗಲೇ ಪರಿಚಿತವಿದ್ದ ವಸಾಹತುಶಾಹಿ ಬೌದ್ಧಿಕ ಆಕ್ರಮಣದ ವಿರುದ್ಧ ದನಿ ಎತ್ತುವುದು, ಮತ್ತು ಎರಡು ಈ ವಸಾಹತುಶಾಹಿಗಳನ್ನು ಪ್ರಬಲವಾಗಿ ವಿರೋಧಿಸುವ ರಾಷ್ಟ್ರೀಯ ವಾದಿ ವಿಚಾರಧಾರೆಯ ವಿರುದ್ಧ ಕೂಡಾ ಮಾತನಾಡುವುದು. ಕೊಸಾಂಬಿಯವರು ಇತಿಹಾಸದ ಬರವಣಿಗೆಯ ಮೂಲಕ ವಸಾಹತುಶಾಹಿ (ಕೊಲೊನಿಯಲ್) ಇತಿಹಾಸ ಕಾರರಿಗೆ ಮತ್ತು ರಾಷ್ಟ್ರೀಯ ವಾದಿ ಇತಿಹಾಸಕಾರರಿಗೆ ಸವಾಲು ಹಾಕುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರು. ರಾಷ್ಟ್ರೀಯವಾದಿ ವಿಚಾರಧಾರೆಯಲ್ಲದೆ ಮಾರ್ಕ್ಸ್‌ವಾದಿ ತಿಳುವಳಿಕೆಯಲ್ಲಿರುವ ಆಗಿರುವ ಕೆಲವು ತಪ್ಪುಗಳನ್ನೂ ಕೂಡಾ ಕೊಸಾಂಬಿಯವರು ತಿದ್ದಿದರು. 60 ರ ದಶಕದಲ್ಲಿ ಮಾರ್ಕ್ಸ್‌ವಾದ ಎಷ್ಟು ಪ್ರಸ್ತುತ ಎನ್ನುವ ಚರ್ಚೆ ಎದ್ದಿರುವಾಗ ಕೊಸಾಂಬಿ ಬರೆದರು. ಇಂದು ಕೂಡಾ ಮಾರ್ಕ್ಸ್‌ವಾದ ಎಷ್ಟು ಪ್ರಸ್ತುತ ಎನ್ನುವ ಚರ್ಚೆಯ ಸಂದರ್ಭದಲ್ಲಿ ಇವರ ಅತ್ಯುತ್ತಮವಾದ ಕೃತಿ ಅನುವಾದಗೊಂಡು ಬಿಡುಗಡೆಯಾಗುತ್ತಿರುವುದು ಸಂತೋಷಕರ" ಎಂದು ವಿಜಯಪೂಣಚ್ಚ ಅವರು ಹೇಳಿದರು.

'ಪುರಾಣ ಮತ್ತು ವಾಸ್ತವ' ಕೃತಿಯನ್ನು ಪರಿಚಯಿಸುತ್ತಾ ಕುವೆಂಪು ವಿ.ವಿ.ಯ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ರಾಜಾರಾಮ ಹೆಗಡೆ ಮಾತನಾಡಿ "ಅವರೆಗೆ ಚಾಲ್ತಿಯಲ್ಲಿದ್ದ ಚಿಂತನೆಯ ಗತಿಯನ್ನೇ ಬದಲಿಸಿದವರು ಕೊಸಾಂಬಿಯವರು. ಭಾರತೀಯ ಸಂಸ್ಕೃತಿ ರೂಪುಗೊಂಡ ಬಗೆಯನ್ನು ಈ ಪುಸ್ತಕ ವಿಶ್ಲೇಷಿಸುತ್ತದೆ. ಭಾರತದ ಸಾಂಸ್ಕೃತಿಕ ವಾಸ್ತವವನ್ನು ಯಾವುದೇ ಒಂದು ವಾದಕ್ಕೆ ಅನ್ವಯಿಸಿ ಓದುವ ಕ್ರಮವನ್ನು ಅವರು ವಿರೋಧಿಸಿದರು. ಇಲ್ಲಿ ಅವರು ಮಾರ್ಕ್ಸ್‌ವಾದಿ ವಿಚಾರಧಾರೆ, ಭಾರತೀಯ ಇತಿಹಾಸವನ್ನು ನಿರೂಪಿಸುವಲ್ಲಿ ಒಂದು ಸಾಧನ ಎಂ[...] ಗ್ರಹಿಸಿದ್ದಾರೆ; ಅಧ್ಯಯನದ ಸೈದ್ಧಾಂ[...] ನೆಲೆಯನ್ನಾಗಿಸಿಕೊಂಡಿದ್ದಾರೆ.

ಪಶ್ಚಿಮದ (ಜರ್ಮನ್) ವೈಚಾರಿಕ ಕೇಂದ್ರ[...] ವಿದ್ವಾಂಸರು ಮತ್ತು ರಾಷ್ಟ್ರೀಯವಾ[...] ಸಂಪ್ರದಾಯದ ವಿದ್ವಾಂಸರ ಚಿಂತನೆಗಳನ್ನೇ ಗ[...] ಗುರಿಯಾಗಿಸಿಕೊಂಡು ಇಲ್ಲಿ ಚರ್ಚಿಸಿದ್ದಾ[...] ಎಂದು ಅವರು ಹೇಳಿದರು. ಕೊಸಾಂಬಿಯ[...] ಬರವಣಿಗೆಯಲ್ಲಿರುವುದು ಯಾವುದೇ ಒ[...] ಅಂಶದ ಬಗ್ಗೆ ತೀರ್ಪು ಕೊಡುವುದಲ್ಲ; ಪ್ರಶ್ನೆಯ[...] ಎತ್ತುವುದು ಅವರ ಬರವಣಿಗೆಯ ರೀತಿ ಎಂ[...] ಹೇಳಿ ಪುಸ್ತಕದಲ್ಲಿರುವ ಲೇಖನಗಳ[...] ಪರಿಚಯಿಸಿದರು. "ಮಾತೃಪ್ರಧಾ[...] ವಿಧಿಗಳು(ರಿಚ್ಯುವಲ್) ಜಿ[...] ಪ್ರಾಧಾನ್ಯತೆಯ ಕಡೆ ವಾಲುತ್ತಿರು[...] ಸಂದರ್ಭವನ್ನು ವಿವರಿಸುತ್ತಾರೆ ಮತ್ತು [...] ಸಂದರ್ಭದಲ್ಲಿ ಪುರಾ[...] ಗಳೆಲ್ಲಾ ಹೇಗೆ ಹುಟ್ಟಿದ[...] ಎನ್ನುವುದನ್ನು ವಿವರಿಸುತ್ತಾ[...] ಇದಕ್ಕಾಗಿ ಗ್ರೀ[...] ಮಿಥ್‌ಗಳನ್ನು, ಸಿಂಧೂ [...] ನಾಗರಿಕತೆ ಇತ್ಯಾದಿಗಳ[...] ಪೂರಕ ಆಕರಗಳ[...] ಎತ್ತಿಕೊಳ್ಳುವಲ್ಲಿ ಅ[...] ಅಧ್ಯಯನಕ್ಕಿರುವ ವ್ಯಾಪ[...]ಯನ್ನು ಗುರುತಿಸಬಹುದು. ಯಾವು[...] ಮಾತೃಪ್ರಧಾನ ಸಂಪ್ರದಾಯ ಸಂಪೂರ್ಣವ[...] ಅಳಿದುಹೋಗಿಲ್ಲ. ಈಗಲೂ ಅ[...] ಮುಂದುವರಿದುಕೊಂಡು ಬಂದಿದೆ [...] ಮುಂದುವರಿಕೆಯ ಸ್ವರೂಪವೇನು ಎನ್ನುವುದ[...] 'ಕೂಡುದಾರಿಗಳು' ಲೇಖನದಲ್ಲಿ ಚರ್ಚಿಸಿದಾ[...]

ಪುಸ್ತಕ ಬಿಡುಗಡೆ ಕಾರ್ಯಕ್ರಮ


ಪುಸ್ತಕ ಬಿಡುಗಡೆಗೊಳಿಸುತ್ತಿರುವ ಡಾ. ವಿಜಯ ಪೂಣಚ್ಚ

ಪುಟ 8 ನೋ[...]

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH